ಸೋಮವಾರ, ಡಿಸೆಂಬರ್ 4, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗೆಲುವಿನ ಸಂಭ್ರಮ
ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದ್ದಕ್ಕೆ ಜಬಲ್‌ಪುರದಲ್ಲಿ ಭಾನುವಾರ ಸಂಭ್ರಮಿಸಿದ ಕಾರ್ಯಕರ್ತೆಯರು



Parents

Your ignorance may cause stress, tension, and irreparable injury to your child's career.



In the interest of your child's future, please read the contents of these pages completely with deep attention. You love your child, isn't it ?

As a **First Step,** you need to understand the significance of a proper diagnostic test before starting preparation for any competitive or scholastic exam.

1. **Knowing Current Academic Capabilities -** You & your child need to discover your child's current academic capabilities especially aptitude, comprehension skills, analysing capability, general IQ & IQ specific to the career choice.
2. **Knowing Academic Inclination for a Stream -** No one career is for every child. It is important for you & your child to discover his / her subject-wise aptitude at an early stage, so that correct stream is chosen in class XI to prepare earnestly for a successful career in the chosen stream.
3. **Discovery through Scientifically Designed Tests -** All the above can't be done through just any test. A child needs scientific testing that also has a pattern similar to various prominent National Level competitive & scholastic exams.
4. **Realising National Level Academic Standing -** Career dreams can't be realised without knowing where you stand in the competition. Practically all career defining competitive exams as well as top scholastic exams are conducted at the National Level. Whether a child is choosing Engineering, or Medicine, or Pure Sciences, Law, CA, Fashion, Business et. al., he / she needs to know his / her National Level Standing (Success Potential / Rank Potential Index) for the relevant exams at the earliest possible but not later than end of class X. Though it is better done late than the actual exam day.


The **Second Step** is Discovering the road to optimum success - After all the analysis, you & your child need to know what needs to be done for unravelling his / her total potential (manifested & hidden). This is the most crucial step. It needs to be done carefully. Your child will be happy working hard, with this clarity rather than feel stressed or even depressed. It is evident that Students' training must start with proper analysis of their potential & after making of a comprehensive plan to achieve the goals. This can be best done with the assistance of an honest, sincere, and dedicated expert or institution.

For Further Steps please turn over...

Education that Inspires & Transforms...

FIITJEE UNLIMITED

31 YEARS OF INNOVATION, SINCERITY, ETHICS, CONSISTENCY & HARD WORK



Children are like rough diamonds. We need to recognise their hidden potential, mentor them, motivate them to unravel their full potential. Every Student cannot be the best in the world, but every Student can be mentored & nurtured to unravel his / her 100% total potential.

As a **Third Step** you need to understand the following

1. Children need to develop high analytical skills & ability to solve problems creatively and have a solid grounding of fundamental concepts, for success not only in various scholastic & entrance exams but also in their career & life.
2. Potential alone cannot get children desired success. Children do not unravel their total potential (manifested & hidden) unless carefully harnessed by specifically trained, dedicated & sincere experts.
3. Children need access to such study material & training that is Pattern Proof i.e. irrespective of the unpredictable pattern of Scholastic & Competitive Exams, they are prepared for it completely. And this needs to be available to them in a single system of training and not from multiple sources, which will cause unnecessary confusion & stress.
4. Every child can not get NTSE scholarship, or qualify in Junior Science Olympiad, Maths & various other Olympiads. However, you need to understand the true value of preparing for these "Milestone Scholastic Exams", they play an important role in helping your child gradually build many important skills. It is our sincere advice to all students of class VI, VII, VIII, IX, & X to prepare for them in all earnest.
5. It is a known fact that the real success and happiness in career & life comes to those who possess high value system & culture. Make sure to give such schooling & coaching to your child where the culture breathes Truth, Transparency & Commitment.
6. Children do not thrive in education environment of uncertainty, false hopes, stress, & strain. Children thrive if exposed to ethical pressure, with an honest feedback system that does not allow anyone to misrepresent or tell lies to them. You & your child should be presented with the true picture every time. This truth & transparency will not allow your child to be over-confident, while passion, compassion & empathy keep your child motivated with clarity of goal.

Fourth Step is to choose the Right Education for your child. Right education is the best investment that you will make for your child. Do not compromise. When you need best nutrition for your brain, you need almonds in your diet. Peanuts are no substitute. And you can't buy almonds at a price of peanuts. Do not put your child's career at stake for some money. Value for money is important and not flimsy discounts (even in the garb of scholarships). Scholarships & Rewards should be given by an institution only to recognise outstanding merit in students (definitely not for enticing the students & parents or poaching of students from other institutes to falsely claim results) and on a clear transparent basis.

Entire Nation has been under shock with repeated suicides in KOTA. What makes it especially painful is the fact that most of these students are from one particular institute only. Students don't commit suicide owing to separation from family. Renowned boarding Schools have successfully proven this over hundreds of years. Dear Parents, Honourable President of India, Prime Minister, concerned officials in PMO, Central Education Minister, Chief Ministers, State Education Ministers, & their respective Secretaries, Judges in various High Courts & Supreme Court, Law Enforcement Agencies - Please read the contents of **Step One** to **Step Four** carefully and you will know why these suicides are happening. Please take steps. Every life is precious.

Fifth Step is to remain involved with your child to support & motivate him / her through the entire journey until adulthood. It does not matter what your education level is.

This is a Public Service Message, please help spread it.

Education with Values...

FIITJEE
UNLIMITED

Bangalore Centres - HSR Layout : 119, S. S. Plaza, 13th Cross, 6th Sector, Outer Ring Road, HSR Layout, Bangalore - 560 102 Ph: 9205953328, 9742288873 Jayanagar : 162, 36th Cross Road, 7th Main Road, 5th Block, Jayanagar, Bengaluru - 560041 Ph : 9742255583 Sheshadripuram : 113/114, 3rd Floor, HTR Chambers, Opp Hoysala Hotel, SC Road, Sheshadripuram Ph: 9742288873, 9742255583 Web: www.fiitjeebangalore.com | Hostel Facility Available

National Admissions Office: FIITJEE House, 29-A, Kalu Sarai, Sarvapriya Vihar, New Delhi FIITJEE Helpline No: 7825895400 | FIITJEE eSchool Helpline No: 8400928400 | Web: www.fiitjee.com www.facebook.com/fiitjeeindia123 www.twitter.com/fiitjee www.linkedin.com/company/fiitjee www.youtube.com/fiitjeeltd www.instagram.com/fiitjee.india

31 YEARS OF INNOVATION, SINCERITY, ETHICS, CONSISTENCY & HARD WORK

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
‘ಪ್ರಜಾವಾಣಿ ಕ್ವಿಜ್ ಚಾಂಪಿಯನ್’ ಮತ್ತೆ ಬಂದಿದೆ. ಈ ಬಾರಿಯ ಕ್ವಿಜ್‌ನ ವಿಶೇಷವೇನು ಎನ್ನುವ ಕುರಿತು ಸಂಕ್ಷಿಪ್ತ ಮಾಹಿತಿ ಇಲ್ಲಿದೆ




ಮುಖ್ಯಮಂತ್ರಿ ಆಯ್ಕೆ: ಬಿಜೆಪಿಗೆ ಸವಾಲು 10
ಅರಿವಳಿಕೆ ನೀಡಿದ್ದ ಕಾಡಾನೆ ಸಾವು 5
ಜಾರಿಗೊಳ್ಳದ 2016ರ ಕಾಯ್ದೆ
ಸಾಕಾರಗೊಳ್ಳದ ‘ಗ್ರಾಮ ಸರ್ಕಾರ’ದ ಕನಸು 5


ಮತ್ತೆ ಮೋದಿ ಅಲೆ, ‘ಕೈ’ ತರಗೆಲೆ


ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸಗಢದಲ್ಲಿ ಬಿಜೆಪಿಗೆ ಭಾರಿ ಗೆಲುವು


● ಕಾಂಗ್ರೆಸ್‌ಗೆ ವರವಾದ ತೆಲಂಗಾಣ




ಚಿತ್ರ: ಯತಿ ಸಿದ್ದಕಟ್ಟೆ









● ಹಮೀದ್ ಕೆ.

ಬೆಂಗಳೂರು: ನಾಲ್ಕು ರಾಜ್ಯಗಳ ವಿಧಾನಸಭೆಗಳಿಗೆ ನಡೆದ ಚುನಾವಣೆಯಲ್ಲಿ ಮತದಾರ ಸ್ಪಷ್ಟ ತೀರ್ಪು ನೀಡಿದ್ದಾನೆ. ಉತ್ತರ ಭಾರತದ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಬಿಜೆಪಿಗೆ ಭಾರಿ ಗೆಲುವು ದಕ್ಕಿದೆ. ದಕ್ಷಿಣ ಭಾರತದ ತೆಲಂಗಾಣದಲ್ಲಿ ಸತತ ಮೂರನೇ ಅವಧಿಗೆ ಅಧಿಕಾರ ಹಿಡಿಯಲು ಕೆ. ಚಂದ್ರಶೇಖರ ರಾವ್ ನೇತೃತ್ವದ ಬಿಆರ್‌ಎಸ್‌ಗೆ (ಈ ಹಿಂದಿನ ಟಿಆರ್‌ಎಸ್) ಸಾಧ್ಯವಾಗಿಲ್ಲ. ಆಡಳಿತವಿರೋಧಿ ಅಲೆಯನ್ನು ಅನುಕೂಲಕರವಾಗಿ ಪರಿವರ್ತಿಸಿಕೊಂಡ ಕಾಂಗ್ರೆಸ್ ತೆಲಂಗಾಣದಲ್ಲಿ ಗೆದ್ದಿದೆ. ನಾಲ್ಕು ರಾಜ್ಯಗಳ ಫಲಿತಾಂಶದಲ್ಲಿ ಕಾಂಗ್ರೆಸ್‌ಗೆ ಇದೊಂದೇ ಸಮಾಧಾನಕರ ಅಂಶ.

2018ರಲ್ಲಿ ಈ ರಾಜ್ಯಗಳಿಗೆ ನಡೆದ ಚುನಾವಣೆಯಲ್ಲಿ ರಾಜಸ್ಥಾನ ಮತ್ತು ಛತ್ತೀಸಗಢವನ್ನು ಕಾಂಗ್ರೆಸ್ ಗೆದ್ದುಕೊಂಡಿತ್ತು. ಮಧ್ಯಪ್ರದೇಶದಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿ ಸರ್ಕಾರವನ್ನೂ ರಚಿಸಿತ್ತು ಎಂಬ ಅಂಶವು ಕಾಂಗ್ರೆಸ್ ಸೋಲಿನ ಆಳ ಮತ್ತು ಬಿಜೆಪಿ ಗೆಲುವಿನ ಮಹತ್ವವನ್ನು ತೋರಿಸುತ್ತದೆ. ಈ ಮೂರೂ ರಾಜ್ಯಗಳಲ್ಲಿ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇತ್ತು.

ಭಾನುವಾರ ಫಲಿತಾಂಶ ಪ್ರಕಟಗೊಂಡ ಎಲ್ಲ ನಾಲ್ಕು ರಾಜ್ಯಗಳಲ್ಲಿಯೂ ಚುನಾವಣಾ ನಿರ್ವಹಣೆಯನ್ನು ಬಿಜೆಪಿಯ ವರಿಷ್ಠರೇ ತಮ್ಮ ಕೈಯಲ್ಲಿ ಇರಿಸಿಕೊಂಡಿದ್ದರು. ಸ್ಥಳೀಯ ನಾಯಕತ್ವದ ಕೈಗೆ ಪ್ರಚಾರದ ಚುಕ್ಕಾಣಿಯನ್ನು ಕೊಟ್ಟಿರಲಿಲ್ಲ. ಮುಖ್ಯಮಂತ್ರಿ ಅಭ್ಯರ್ಥಿಯನ್ನೂ ಘೋಷಿಸಿರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜೋಡಿಯು ಪ್ರಚಾರದ ಹೊಣೆಗಾರಿಕೆಯನ್ನು ಹೆಗಲಿಗೇರಿಸಿಕೊಂಡಿತ್ತು. ವರ್ಚಸ್ವೀ ನಾಯಕರಾದ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಮುಂತಾದವರನ್ನೂ ಪ್ರಚಾರಕ್ಕೆ ಬಳಸಿಕೊಳ್ಳಲಾಗಿತ್ತು.

ಆದರೆ, ಕಾಂಗ್ರೆಸ್ ಪಕ್ಷವು ಚುನಾವಣೆಯನ್ನು ಹೆಚ್ಚು ಸ್ಥಳೀಯಗೊಳಿಸುವ ಕಾರ್ಯತಂತ್ರ ಅನುಸರಿಸಿತು. ಸ್ಥಳೀಯ ನಾಯಕರೇ ಪ್ರಚಾರದ ನೇತೃತ್ವ ವಹಿಸಿದ್ದರು. ಆಡಳಿತ ವಿರೋಧಿ ಅಲೆಯನ್ನು ಮೆಟ್ಟಿನಿಲ್ಲಲು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಮಾಡಿದ ಪ್ರಯತ್ನ ಸಾಲಲಿಲ್ಲ. ಮಧ್ಯಪ್ರದೇಶದಲ್ಲಿ ನೀಡಿದ ‘ಗ್ಯಾರಂಟಿ’ಗಳಲ್ಲಿ ಹಲವು ಅಲ್ಲಿ ಈಗಾಗಲೇ ಜಾರಿಯಲ್ಲಿದ್ದ ಯೋಜನೆಗಳ ಮುಂದುವರಿದ ಭಾಗವಾಗಿತ್ತು.

10ನೇ ಪುಟ ನೋಡಿ

ವಿಶೇಷ ಪುಟಗಳು 6 7 9

ಕೆಸಿಆರ್ ಹ್ಯಾಟ್ರಿಕ್ ಕನಸು ಭಗ್ನ

ಭಾರತ ರಾಷ್ಟ್ರ ಸಮಿತಿಯ ಕೆ.ಚಂದ್ರಶೇಖರ ರಾವ್ ಅವರು ಸತತ ಮೂರನೇ ಅವಧಿಗೆ ಮುಖ್ಯಮಂತ್ರಿಯಾಗುವ ಕನಸು ಕಂಡಿದ್ದರು. ಜೊತೆಗೆ, ಮುಂದಿನ ಲೋಕಸಭೆ ಚುನಾವಣೆ ಹೊತ್ತಿಗೆ ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ ಪಾತ್ರ ವಹಿಸಬೇಕು, ಕಾಂಗ್ರೆಸ್ ಇಲ್ಲದ ಪರ್ಯಾಯ ರಂಗವೊಂದನ್ನು ಕಟ್ಟಬೇಕು ಎಂಬ ಉಮೇದಿನಲ್ಲಿದ್ದರು. ಆದರೆ, ವ್ಯಾಪಕವಾಗಿದ್ದ ಆಡಳಿತವಿರೋಧಿ ಅಲೆಯಿಂದಾಗಿ ಹ್ಯಾಟ್ರಿಕ್ ಗೆಲುವು ಸಾಧ್ಯವಾಗಿಲ್ಲ. ಅಷ್ಟೇ ಅಲ್ಲ, ಅವರ ರಾಷ್ಟ್ರ ರಾಜಕಾರಣದ ಕನಸು ಸದ್ಯದ ಮಟ್ಟಿಗೆ ಭಗ್ನಗೊಂಡಂತಾಗಿದೆ.

ಬಿಜೆಪಿ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದ 5 ಅಂಶ

1. ನರೇಂದ್ರ ಮೋದಿ ಅವರನ್ನೇ ಪಕ್ಷದ ಏಕೈಕ ಮುಖವಾಗಿಸಿಕೊಂಡು ಪ್ರಚಾರಕ್ಕೆ ಇಳಿಯಲಾಯಿತು
2. ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢದಲ್ಲಿ ಯಾವುದೇ ನಾಯಕರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸದೆ ಇರುವ ತಂತ್ರ ಫಲ ನೀಡಿತು
3. ಕೇಂದ್ರದ ಸಚಿವರು ಸೇರಿದಂತೆ ಹಲವು ಸಂಸದರನ್ನು ಕಣಕ್ಕಿಳಿಸಲಾಯಿತು. ಪ್ರಭಾವಿ ನಾಯಕರು ತಾವು ಗೆಲ್ಲುವುದರ ಜತೆಗೆ ಪಕ್ಕದ ಕ್ಷೇತ್ರಗಳ ಅಭ್ಯರ್ಥಿಗಳನ್ನೂ ಗೆಲ್ಲಿಸಿದರು
4. ಕಾಂಗ್ರೆಸ್, ಜಾತಿ ಜನಗಣತಿ ನಡೆಸುವ ಕುರಿತು ಪ್ರಚಾರದ ಉದ್ದಕ್ಕೂ ದೊಡ್ಡ ಸದ್ದು ಮಾಡಿತು. ‘ಬಡತನವೇ ದೊಡ್ಡ ಜಾತಿಭೂತ. ನಾವು ಅದನ್ನು ತೊಲಗಿಸಬೇಕು’ ಎನ್ನುವ ಮೂಲಕ ಮೋದಿ ಜಾತಿ ಜನಗಣತಿಯ ‘ಅಸ್ತ್ರ’ಕ್ಕೆ ಪ್ರತ್ಯುತ್ತರ ನೀಡಿದರು
5. ಹಿಂದಿ ಭಾಷಿಕ ರಾಜ್ಯಗಳಲ್ಲಿ ಎಸ್‌.ಸಿ, ಎಸ್‌.ಟಿ ಮತ್ತು ಮಹಿಳೆಯರ ಮತಗಳನ್ನು ಗಣನೀಯವಾಗಿ ಪಡೆಯುವಲ್ಲಿ ಸಫಲವಾಗಿದ್ದೂ ಪಕ್ಷವನ್ನು ಗೆಲುವಿನ ದಡಕ್ಕೆ ತಲುಪಿಸಿತು

ಸಿ.ಎಂ ಆಕಾಂಕ್ಷಿಗಳು

ನಾಲ್ಕೂ ರಾಜ್ಯಗಳ ಮುಖ್ಯಮಂತ್ರಿ ಹುದ್ದೆಗೆ ಭಾರಿ ಪೈಪೋಟಿ ಏರ್ಪಟ್ಟಿದೆ. ಯಾರು, ಯಾರು ಪೈಪೋಟಿಯಲ್ಲಿದ್ದಾರೆ ಎಂಬ ಮಾಹಿತಿ ಇಲ್ಲಿದೆ:

ರಾಜಸ್ಥಾನ: ದಿಯಾ ಕುಮಾರಿ, ವಸುಂಧರಾ ರಾಜೇ, ಗಜೇಂದ್ರ ಸಿಂಗ್ ಶೆಖಾವತ್, ಮಹಂತ ಬಾಲಕನಾಥ, ಕಿರೋಡಿ ಮಲ್ ಮೀನಾ, ಅರ್ಜುನ್ ಸಿಂಗ್ ಮೇಘವಾಲ್, ಓಂ ಬಿರ್ಲಾ

ಮಧ್ಯ ಪ್ರದೇಶ: ಶಿವರಾಜ್ ಸಿಂಗ್ ಚೌಹಾಣ್, ಜ್ಯೋತಿರಾದಿತ್ಯ ಸಿಂಧಿಯಾ, ನರೇಂದ್ರ ಸಿಂಗ್ ತೋಮರ್

ಛತ್ತೀಸಗಢ: ರಮಣ ಸಿಂಗ್, ಅರುಣ್ ಕುಮಾರ್ ಸಾವ್, ಧರಮ್ ಲಾಲ್ ಕೌಶಿಕ್, ಒ.ಪಿ. ಚೌಧರಿ

ತೆಲಂಗಾಣ: ರೇವಂತ ರೆಡ್ಡಿ



ಕೇಂದ್ರ ಸರ್ಕಾರದ ಸ್ವಾವಲಂಬಿ ಇಂಡಿಯಾದ ಕಾರ್ಯಸೂಚಿಯು ಮೂರು ರಾಜ್ಯಗಳಲ್ಲಿ ಹ್ಯಾಟ್ರಿಕ್ ಫಲಿತಾಂಶ ನೀಡಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿಯು ‘ಹ್ಯಾಟ್ರಿಕ್ ಗೆಲುವು’ ಸಾಧಿಸುವುದರಲ್ಲಿ ಎಳ್ಳಷ್ಟು ಅನುಮಾನವಿಲ್ಲ
ನರೇಂದ್ರ ಮೋದಿ, ಪ್ರಧಾನಿ



ಜಾತಿ ರಾಜಕಾರಣ ಮತ್ತು ತುಷ್ಟೀಕರಣದ ಕಾಲ ಮುಗಿದುಹೋಗಿದೆ ಎಂಬುದಕ್ಕೆ ಈ ಚುನಾವಣಾ ಫಲಿತಾಂಶವೇ ಸಾಕ್ಷಿ. ರಾಜಕೀಯದ ಸಾಮರ್ಥ್ಯ ನೋಡಿ ನವಭಾರತವು ಮತ ಚಲಾಯಿಸಿದೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ



ಮಧ್ಯಪ್ರದೇಶ, ಛತ್ತೀಸಗಢ ಮತ್ತು ರಾಜಸ್ಥಾನದಲ್ಲಿ ಪಕ್ಷದ ಸಾಧನೆ ನಿರಾಸೆ ತಂದಿರುವುದು ಸತ್ಯ. ಇದು ತಾತ್ಕಾಲಿಕ ಹಿನ್ನಡೆಯಷ್ಟೇ. ‘ಇಂಡಿಯಾ’ದೊಂದಿಗೆ ಲೋಕಸಭಾ ಚುನಾವಣೆಯಲ್ಲಿ ನಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುತ್ತೇವೆ
ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ



ಮಧ್ಯಪ್ರದೇಶ, ಛತ್ತೀಸಗಢ, ರಾಜಸ್ಥಾನದಲ್ಲಿ ಮತದಾರರು ನೀಡಿರುವ ಜನಾದೇಶವನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ನನ್ನ ಸೈದ್ಧಾಂತಿಕ ಹೋರಾಟ ಮುಂದುವರಿಯಲಿದೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಶಿವರಾಮೇಗೌಡ ಕುಟುಂಬದ ವಿರುದ್ಧ ಸಿಬಿಐ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆಗಳನ್ನು ಸೃಷ್ಟಿಸಿ ಅವುಗಳ ಆಧಾರದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ₹ 12.48 ಕೋಟಿ ಸಾಲ ಪಡೆದು ವಂಚಿಸಿದ ಆರೋಪದ ಮೇಲೆ ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.



ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ಬೆಂಗಳೂರಿನ ಎಂ.ಜಿ. ರಸ್ತೆ ಶಾಖೆಯ ಸಹಾಯಕ ಪ್ರಧಾನ ವ್ಯವಸ್ಥಾಪಕ ಎಸ್.ಡಿ.ಮೋದಿ ಸಲ್ಲಿಸಿರುವ ದೂರನ್ನು ಆಧರಿಸಿ ನಗರದ ಎಚ್‌ಆರ್‌ಬಿಆರ್ ಬಡಾವಣೆಯ ನಂಜಪ್ಪ ಶಿವಪ್ರಸಾದ್ ಅವರ ಪತ್ನಿ ಉಮಾ ಪ್ರಸಾದ್, ರಾಯಲ್ ಕಂಕಾರ್ಡ್ ಎಜುಕೇಷನ್ ಟ್ರಸ್ಟ್, ಅದರ ಆಡಳಿತ ಮಂಡಳಿಯ ಪ್ರಮುಖರಾಗಿರುವ ಎಲ್.ಆರ್. ಶಿವರಾಮೇಗೌಡ, ಅವರ ಪತ್ನಿ ಸುಧಾ ಶಿವರಾಮೇಗೌಡ, ಮಗ ಚೇತನ್ ಗೌಡ, ಸೊಸೆ ಎಲ್.ಎಸ್. ಭವ್ಯಾ ಗೌಡ, ಬ್ಯಾಂಕ್‌ನ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ.

‘ಆರೋಪಿಗಳು ಒಳಸಂಚು ರೂಪಿಸಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದರು. ಅವುಗಳನ್ನು ಬಳಸಿಕೊಂಡು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ ಸಾಲಗಳನ್ನು ಪಡೆದಿದ್ದರು. ಸಾಲದ ಹಣವನ್ನು ಬೇರೆ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡು, ಅನ್ಯ ಉದ್ದೇಶಕ್ಕೆ ಬಳಸಿದ್ದರು. ನಂತರ ಸಾಲ ಮರುಪಾವತಿ ಮಾಡದೇ ವಂಚಿಸಿದ್ದರು’ ಎಂದು ಎಸ್.ಡಿ. ಮೋದಿ ದೂರಿನಲ್ಲಿ ಉಲ್ಲೇಖಿಸಿದ್ದರು.

ನವೆಂಬರ್ 7 ರಂದು ಬ್ಯಾಂಕ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕರು ದೂರು ಸಲ್ಲಿಸಿದ್ದರು. ನ. 21 ರಂದು ಶಿವರಾಮೇಗೌಡ ಸೇರಿದಂತೆ ಎಲ್ಲ ಆರೋಪಿಗಳ ವಿರುದ್ಧ ಸಿಬಿಐನ ಭ್ರಷ್ಟಾಚಾರ ನಿಗ್ರಹ ದಳದ ಬೆಂಗಳೂರು ಘಟಕವು ಎಫ್‌ಐಆರ್ ದಾಖಲಿಸಿದೆ. ಭಾರತೀಯ ದಂಡ ಸಂಹಿತೆ ಮತ್ತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



‘ಉ.ಕ ಸಮಸ್ಯೆಗಳ ಚರ್ಚೆಗೆ ಆದ್ಯತೆ’

ಬೆಳಗಾವಿ: ‘ಸೋಮವಾರ ಆರಂಭವಾಗುವ ವಿಧಾನ ಮಂಡಲದ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಆದ್ಯತೆ ನೀಡಲಾಗುವುದು’ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. 5

ಒಳ ಪುಟ
ಮಿಜೋರಾಂ ಫಲಿತಾಂಶ ಇಂದು 10



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ 169ನೇ ಜಯಂತ್ಯುತ್ಸವ ಮತ್ತು ಗುರುವಂದನೆ ಕಾರ್ಯಕ್ರಮದಲ್ಲಿ ಕನ್ಯಾಡಿ ಶ್ರೀರಾಮಕ್ಷೇತ್ರದ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ಮೀನುಗಾರಿಕೆ ಸಚಿವ ಮಂಕಾಳ ಎಸ್. ವೈದ್ಯ ಅವರು, ಬ್ರಹ್ಮಶ್ರೀ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

‘ಪಠ್ಯ: ನಾರಾಯಣ ಗುರು ಚಿಂತನೆ ಇಲ್ಲದ್ದಕ್ಕೆ ಬೇಸರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಪಠ್ಯದಲ್ಲಿ ಸಮಾಜ ಸುಧಾರಕ ನಾರಾಯಣ ಗುರುಗಳ ವಿಚಾರ ಈಗಲೂ ಇಲ್ಲ. ಕಾರಣ ಏನು ಎಂದು ಮಾತನಾಡಲು ಹೋದರೆ ರಾಜಕೀಯವಾಗಿ ಬಿಡುತ್ತದೆ ಎಂದು ಮೀನುಗಾರಿಕೆ ಸಚಿವ ಮಂಕಾಳ ಎಸ್. ವೈದ್ಯ ಬೇಸರ ವ್ಯಕ್ತಪಡಿಸಿದರು.

ಶ್ರೀರಾಮ ಕ್ಷೇತ್ರ ಮಹಾಸಂಸ್ಥಾನಂ ಸೇವಾ ಸಮಿತಿ, ರಾಜ್ಯ ಆರ್ಯ ಈಡಿಗ ಆಟೊ ಚಾಲಕರ ಸಂಘವು ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ನಾರಾಯಣ ಗುರುಗಳ 169ನೇ ಜಯಂತ್ಯುತ್ಸವ ಮತ್ತು ಗುರುವಂದನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗುರುಗಳ ಬಗ್ಗೆ ಪುಸ್ತಕ ಪ್ರಕಟಿಸಿ ಮನೆ ಮನೆಗೆ ತಲುಪಿಸುವ ಕೆಲಸ ಮಾಡಬೇಕು. ಈ ಮೂಲಕ ಅವರು ಸಮಾಜ ಸುಧಾರಣೆಗೆ ಮಾಡಿದ ಹೋರಾಟವನ್ನು ಅರಿಯಬೇಕು. ಮನುಷ್ಯ ಎಷ್ಟೇ ದೊಡ್ಡ ಹುದ್ದೆಯನ್ನು ಹೊಂದಿದ್ದರೂ ಮನುಷ್ಯತ್ವ ಇಲ್ಲದೇ ಇದ್ದರೆ ವ್ಯರ್ಥ. ಅದಕ್ಕಾಗಿಯೇ ಜಾತಿ, ಧರ್ಮಗಳಿಗಿಂತ ಮನುಷ್ಯತ್ವ ಮುಖ್ಯ ಎಂಬುದನ್ನು ನಾರಾಯಣ ಗುರುಗಳು ಸಾರಿದ್ದರು ಎಂದು ಹೇಳಿದರು.

ರಾಜ್ಯದಿಂದ ತಿರುಪತಿಗೆ ಹೋಗುವವರ ಸಂಖ್ಯೆ ಜಾಸ್ತಿ ಇದೆ. ಹಾಗಾಗಿ ತಿರುಪತಿಯಲ್ಲಿಯೂ ನಮ್ಮ ಮಠವೊಂದು ಸ್ಥಾಪನೆ ಮಾಡಬೇಕು ಎಂದು ಸಲಹೆ ನೀಡಿದರು.

ಮಂಗಳೂರು ನಾರಾಯಣಗುರು ಕಾಲೇಜು ಉಪನ್ಯಾಸಕ ಕೇಶವ ಬಂಗೇರ ಉಪನ್ಯಾಸ ನೀಡಿದರು. ಕನ್ಯಾಡಿ ಶ್ರೀರಾಮಕ್ಷೇತ್ರದ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಅವರಿಗೆ ಗುರುವಂದನೆ ನೆರವೇರಿಸಲಾಯಿತು.

ಸಮಾಜದ ಮುಖಂಡರಾದ ಗೋವಿಂದ ಬಾಬು ಪೂಜಾರಿ, ಲಗ್ಗೆರೆ ನಾರಾಯಣ ಸ್ವಾಮಿ, ಆಟೊ ಗಂಗಾಧರ, ಗುರುಮೂರ್ತಿ ಗುರೂಜಿ, ಪ್ರವೀಣ್ ಎಂ. ಪೂಜಾರಿ, ಜೆ.ಪಿ. ಶಿವಣ್ಣ, ಜಯರಾಂ, ಕೃಷ್ಣಪ್ಪ ಪೂಜಾರಿ, ವಸಂತ ಪೂಜಾರಿ, ಸುಬ್ರಾಯ ನಾಯ್ಕ ಇದ್ದರು.

ಬರ: ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ಎಚ್‌.ಡಿ. ಕುಮಾರಸ್ವಾಮಿ

‘₹10 ಸಾವಿರ ಕೋಟಿ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ತೀವ್ರ ಬರಗಾಲ ಇರುವುದರಿಂದ ಪರಿಹಾರ ಕಾಮಗಾರಿಗಳು ಹಾಗೂ ರೈತರು, ಕಾರ್ಮಿಕರಿಗೆ ನೆರವು ಒದಗಿಸಲು ತಕ್ಷಣವೇ ಜಿಲ್ಲಾಧಿಕಾರಿಗಳ ಖಾತೆಗಳಿಗೆ ₹10,000 ಕೋಟಿ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಜೆಡಿಎಸ್ ಪಕ್ಷವು ರಾಜ್ಯಪಾಲರನ್ನು ಆಗ್ರಹಿಸಿದೆ.

ಪಕ್ಷದ ಮುಖಂಡರು ರಾಜ್ಯದ ವಿವಿಧೆಡೆ ಬರ ಅಧ್ಯಯನ ಪ್ರವಾಸ ಕೈಗೊಂಡು ಸಿದ್ಧಪಡಿಸಿರುವ ವರದಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಭಾನುವಾರ ಸಲ್ಲಿಸಿದರು. ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ವಿಫಲವಾಗಿರುವ ಕಾರಣದಿಂದ ತುರ್ತು ಮಧ್ಯಪ್ರವೇಶ ಮಾಡುವಂತೆ ರಾಜ್ಯಪಾಲರನ್ನು ಆಗ್ರಹಿಸುವ ಮನವಿಯನ್ನೂ ನೀಡಿದರು.

ಮುಂಗಾರು ಮಳೆಯ ಕೊರತೆಯಿಂದ ರಾಜ್ಯದಲ್ಲಿ 48.15 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆ ಹಾನಿಯಾಗಿದೆ. ರಾಜ್ಯ ಸರ್ಕಾರ ಅಂದಾಜು ಮಾಡಿರುವ ಪ್ರಕಾರ, ₹35,162.02 ಕೋಟಿ ಮೌಲ್ಯದ ಬೆಳೆಹಾನಿ ಸಂಭವಿಸಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ₹18,171.44 ಕೋಟಿ ಪರಿಹಾರವನ್ನು ರಾಜ್ಯ ಸರ್ಕಾರ ಕೋರಿದೆ. ಈ ಮೊತ್ತದಲ್ಲಿ ರೈತರಿಗೆ ಸರಿಯಾದ ಪರಿಹಾರ ನೀಡಲು ಸಾಧ್ಯವಿಲ್ಲ. ಪ್ರತಿ ಹೆಕ್ಟೇರ್ ಬೆಳೆ ಹಾನಿಗೆ ₹17,500 ಪರಿಹಾರ ವಿತರಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ಸರ್ಕಾರ ವಿಫಲ: ಬರ ಪರಿಸ್ಥಿತಿ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಹಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಕೊರತೆ ಇದೆ. ಜಾನುವಾರುಗಳಿಗೆ ಮೇವಿನ ಸಮಸ್ಯೆ ಎದುರಾಗಿದೆ. ರಾಜಧಾನಿ ಬೆಂಗಳೂರಿನಲ್ಲೂ ನೀರಿನ ಕೊರತೆ ಉಂಟಾಗಿದೆ. ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕುಮಾರಸ್ವಾಮಿ ದೂರಿದರು.

ರಾಜ್ಯ ಸರ್ಕಾರವು ಬರ ನಿರ್ವಹಣೆ ವಿಚಾರದಲ್ಲಿ ಅಸಡ್ಡೆಯಿಂದ ವರ್ತಿಸುತ್ತಿದೆ. ಬೆಳೆ ಹಾನಿಯಿಂದ ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ವಿತರಿಸದೇ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ರೈತರ ಆತ್ಮಹತ್ಯೆ ಸರಣಿಯೋಪಾದಿಯಲ್ಲಿ ನಡೆಯುತ್ತಿದ್ದರೂ ತಡೆಯಲು ಯಾವುದೇ ಕ್ರಮ ಕೈಗೊಂಡಿಲ್ಲ. ರಾಜ್ಯ ಸರ್ಕಾರವು ರಾಜಕಾರಣದಲ್ಲೇ ಮೈಮರೆತಿದೆ ಎಂದು ಆರೋಪಿಸಿದರು.

ಎನ್‌ಡಿಆರ್‌ಎಫ್ ಮಾರ್ಗಸೂಚಿ ಅನುಸಾರ ₹17,181.44 ಕೋಟಿ ಪರಹಾರವನ್ನು ತುರ್ತಾಗಿ ಬಿಡುವಂತೆ ಕೇಂದ್ರ ಸರ್ಕಾರವನ್ನು ರಾಜ್ಯಪಾಲರು ಮನವೊಲಿಸಬೇಕು. ಬೆಳೆ ನಷ್ಟ ಅನುಭವಿಸಿದ ರೈತರಿಗೆ ವಿಮಾ ಕಂಪನಿಗಳಿಂದ ಪರಿಹಾರ ಕೊಡಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮೂಲಕ ಕ್ರಮ ಕೈಗೊಳ್ಳಬೇಕು. ಬೆಂಗಳೂರಿನಲ್ಲಿ ಕುಡಿಯುವ ನೀರಿನ ಕೊರತೆ ಉಲ್ಬಣಿಸುವ ಸಾಧ್ಯತೆ ಇರುವುದರಿಂದ ಮೇಕೆದಾಟು ಯೋಜನೆಗೆ ತ್ವರಿತವಾಗಿ ಅನುಮತಿ ನೀಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಜೆಡಿಎಸ್ ಆಗ್ರಹಿಸಿದೆ.

ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ, ಶಾಸಕ ಸಿ.ಬಿ. ಸುರೇಶ್ ಬಾಬು, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಗೋವಿಂದ ರಾಜು ಹಾಗೂ ಪಕ್ಷದ ಮುಖಂಡರು ನಿಯೋಗದಲ್ಲಿದ್ದರು.



ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ನೇತೃತ್ವದ ನಿಯೋಗವು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭಾನುವಾರ ಭೇಟಿ ಮಾಡಿ ಬರ ನಿರ್ವಹಣೆಯಲ್ಲಿ ಮಧ್ಯಪ್ರವೇಶ ಮಾಡುವಂತೆ ಮನವಿ ಸಲ್ಲಿಸಿತು

‘ಸಕಾರಾತ್ಮಕ ಸ್ಪಂದನೆ’

‘ನಮ್ಮ ಮನವಿಗೆ ರಾಜ್ಯಪಾಲರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಕೇಂದ್ರ ಸರ್ಕಾರದ ಗಮನ ಸೆಳೆದು ರಾಜ್ಯದ ಜನರ ಹಿತ ಕಾಪಾಡುವುದಾಗಿ ಭರವಸೆ ನೀಡಿದ್ದಾರೆ’ ಎಂದು ಎಚ್‌.ಡಿ. ಕುಮಾರಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯಕ್ಕೆ ಬಿಡುಗಡೆಯಾಗದ ಸಂಸದರ ನಿಧಿ’

ಬೆಂಗಳೂರು: ‘ಸ್ಥಳೀಯ ಕ್ಷೇತ್ರಾಭಿವೃದ್ಧಿ ಯೋಜನೆಯಡಿ ಸಂಸದರಿಗೆ ವಾರ್ಷಿಕ ನೀಡುವ ₹5 ಕೋಟಿಯನ್ನು ಪ್ರಸಕ್ತ ಸಾಲಿನಲ್ಲಿ ಕರ್ನಾಟಕದ ಲೋಕಸಭಾ ಸದಸ್ಯರಿಗೆ ಮತ್ತು ರಾಜ್ಯಸಭಾ ಸದಸ್ಯರಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿಲ್ಲ. ಇದು ಮೋದಿ ಸರ್ಕಾರದ ದಿವಾಳಿತನ ತೋರಿಸುತ್ತದೆ’ ಎಂದು ಕೆಪಿಸಿಸಿ ವಕ್ತಾರ ರಮೇಶ್ ಬಾಬು ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕರ್ನಾಟಕದ ಬರಗಾಲ ಪರಿಸ್ಥಿತಿಯ ಅರಿವಿದ್ದರೂ, ಹಣ ಬಿಡುಗಡೆ ಮಾಡಿಲ್ಲ. ಕರ್ನಾಟಕದ ಸಂಸದರು ತಮ್ಮ ಪಾಲಿನ ಹಣವನ್ನು ಕೇಳದೆ ಕದ್ದು ಓಡಾಡುತ್ತಿದ್ದಾರೆ’ ಎಂದರು.

ಸುದ್ದಿ 2 ನಿಮಿಷ

ಕಾರ್ಮಿಕರ ನಿಧಿ ಹೆಚ್ಚಳಕ್ಕೆ ಚಿಂತನೆ

ಬೆಂಗಳೂರು: ಭೌಗೋಳಿಕ ಮಾಹಿತಿ ವ್ಯವಸ್ಥೆಯ(ಜಿಐಎಸ್) ತಂತ್ರಜ್ಞಾನ ಬಳಸಿಕೊಂಡು ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಮಂಡಳಿಯ ಕಲ್ಯಾಣ ನಿಧಿ ಹೆಚ್ಚಿಸಲು ಕಾರ್ಮಿಕ ಇಲಾಖೆ ಚಿಂತನೆ ನಡೆಸಿದೆ.

ಕಲ್ಯಾಣ ನಿಧಿಯನ್ನು ವೈಜ್ಞಾನಿಕ ರೀತಿಯಲ್ಲಿ ಹೆಚ್ಚಳ ಮಾಡಲು ಜಿಐಎಸ್ ತಂತ್ರಜ್ಞಾನ ಬಳಸಿಕೊಳ್ಳುವಂತೆ ತಜ್ಞರು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರಿಗೆ ಸಲಹೆ ನೀಡಿದ್ದರು. ಈ ತಂತ್ರಜ್ಞಾನ ಅಳವಡಿಕೆಯಲ್ಲಿ ಅನುಭವ ಹೊಂದಿರುವ ಆರು ವೆಂಡರ್‌ಗಳ ಜತೆ ಶನಿವಾರ ಸಭೆ ನಡೆಸಿದ ಸಚಿವರು, ಜಿಐಎಸ್ ಬಳಕೆ ಕುರಿತು ಮಾಹಿತಿ ಪಡೆದರು.

ಜಿಐಎಸ್ ತಂತ್ರಜ್ಞಾನದ ಅಳವಡಿಕೆ ಹೇಗೆ? ಆ ಮೂಲಕ ಎಷ್ಟು ಪ್ರಮಾಣದ ಹೆಚ್ಚಿನ ನಿಧಿ ಸಂಗ್ರಹಿಸಬಹುದು ಎಂಬುದರ ಕುರಿತು ವೆಂಡರ್‌ಗಳು ಸಭೆಯಲ್ಲಿ ಪ್ರಾತ್ಯಕ್ಷಿಕೆ ನೀಡಿದರು. ಎಲ್ಲರಿಂದ ಮಾಹಿತಿ ಪಡೆದ ಸಚಿವರು, ಮತ್ತೊಂದು ಸುತ್ತಿನ ಸಭೆ ನಡೆಸಿ ತೀರ್ಮಾನಕ್ಕೆ ಬರುವುದಾಗಿ ತಿಳಿಸಿದರು.

ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಾರತಿ, ಜಂಟಿ ಕಾರ್ಯದರ್ಶಿ ವೆಂಕಟರಾಜು ಸಭೆಯಲ್ಲಿದ್ದರು.

ತುಂತುರು ಮಳೆ: ರಾಗಿ ಕೊಯ್ಲಿಗೆ ಅಡ್ಡಿ



ದಾಬಸ್ ಪೇಟೆ: ರಾಗಿ ಕೊಯ್ಲು ಮಾಡುವ ಸಮಯದಲ್ಲಿ ಸುರಿಯುತ್ತಿರುವ ತುಂತುರು ಮಳೆಯಿಂದಾಗಿ ಸೋಂಪುರ ಹೋಬಳಿಯ ರಾಗಿ ಬೆಳೆಗಾರರು ಸಂಕಷ್ಟ ಎದುರಿಸುವಂತಾಗಿದೆ.

ಹದಿನೈದು ದಿನಗಳಿಂದ ಮೋಡ ಕವಿದ ವಾತಾವರಣ, ಬಿಟ್ಟು ಬಿಟ್ಟು ಬರುತ್ತಿರುವ ಮಳೆಯಿಂದಾಗಿ ಕೊಯ್ಲು ಮಾಡಲಾಗುತ್ತಿಲ್ಲ. ಮತ್ತೊಂದೆಡೆ ಕೊಯ್ಲು ಮಾಡಿರುವ ರಾಗಿ ಹುಲ್ಲು ಒಣಗಿಸಲು ಪರದಾಡುತ್ತಿದ್ದಾರೆ. ಹೊಲಗಳಲ್ಲಿ ಕೊಯ್ದಿಟ್ಟ ಹುಲ್ಲು ಮಳೆಗೆ ನೆನೆಯುತ್ತಾ ಬಿದ್ದಿದೆ. ನೆಲದಲ್ಲಿ ಹರಡಿರುವ ಹುಲ್ಲು ಕೊಳೆಯುತ್ತಾ, ಗೆದ್ದಲು ಹಿಡಿಯುತ್ತಿದೆ. ಇದರಿಂದ ಮೇವಿನ ಕೊರತೆ ಉಂಟಾಗುವ ಆತಂಕ ಆವರಿಸಿದೆ.

ಕೆಲವು ರೈತರು ಮನೆಗಳ ಮುಂದೆ, ತಾರಸಿ ಮೇಲೆ ಹರಡಿರುವ ರಾಗಿ ಪೈರಿಗೆ ನೀರು ಹೋಗದಂತೆ ಪ್ಲಾಸ್ಟಿಕ್ ಕವರ್‌ನಿಂದ ಮುಚ್ಚುತ್ತಿದ್ದಾರೆ. ‘ಸಮರ್ಪಕ ಮಳೆ ಇಲ್ಲದ್ದರಿಂದ ರಾಗಿ ಹುಲ್ಲಿನ ಕೊರತೆ ಉಂಟಾಗಿದೆ. ಒಂದು ಹೊರೆ ಹುಲ್ಲಿಗೆ ₹250 ಬೆಲೆ ಇದೆ. ಮಳೆ ಹೀಗೇ ಕಾಡಿದರೆ ಹುಲ್ಲಿನ ಬೆಲೆ ಹೆಚ್ಚಾಗುತ್ತದೆ. ಜಾನುವಾರುಗಳಿಗೆ ಮೇವು ಹೊಂದಿಸುವುದೇ ಕಷ್ಟವಾಗುತ್ತದೆ’ ಎನ್ನುತ್ತಾರೆ ರೈತ ಸಿದ್ದಪ್ಪ.

ರಾಗಿ ಕಪ್ಪಾದರೆ ಮಾರುಕಟ್ಟೆಯಲ್ಲಿ ಬೆಲೆ ಸಿಗುವುದಿಲ್ಲ. ಬೆಂಬಲ ಬೆಲೆ ಯೋಜನೆಯಲ್ಲಿ ಮಾರಾಟ ಮಾಡಲು ಹೋದರೆ ತಿರಸ್ಕರಿಸುತ್ತಾರೆ ಎಂದು ಬೇಸರ ವ್ಯಕ್ತಪಡಿಸುತ್ತಾರೆ ರೈತರು.

ಸಂಕ್ಷಿಪ್ತ ಸುದ್ದಿ

ನಾಳೆ ಸಾರಿಗೆ ಅದಾಲತ್

ಬೆಂಗಳೂರು: ಬೆಂಗಳೂರು ಪೂರ್ವ ಭಾಗದ ಕಸ್ತೂರಿ ನಗರದಲ್ಲಿ ಇರುವ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಡಿ.5ರಂದು ಮಧ್ಯಾಹ್ನ 3ಕ್ಕೆ ಸಾರಿಗೆ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗಹಿಸುತ್ತಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಲಿದ್ದಾರೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ತಿಳಿಸಿದ್ದಾರೆ.

ಅವಧಿ ವಿಸ್ತರಣೆ

ಬೆಂಗಳೂರು: ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ನಿಗಮದಿಂದ ವಿವಿಧ ಯೋಜನೆಗಳಿಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಆಹ್ವಾನಿಸಿದ ಆನ್‌ಲೈನ್ ಅರ್ಜಿ ಸಲ್ಲಿಕೆ ಅವಧಿಯನ್ನು ಡಿಸೆಂಬರ್ 15ರವರೆಗೆ ವಿಸ್ತರಿಸಲಾಗಿದೆ.

ಈ ಹಿಂದೆ ನವೆಂಬರ್ 30ರವರೆಗೆ ಅರ್ಜಿ ಸಲ್ಲಿಕೆ ಅವಕಾಶ ನೀಡಲಾಗಿತ್ತು. ಈ ದಿನಾಂಕವನ್ನು ವಿಸ್ತರಿಸಲಾಗಿದ್ದು, ಇದರ ಸದುಪಯೋಗವನ್ನು ಅರ್ಹರು ಪಡೆಯಬೇಕು ಎಂದು ಸಫಾಯಿ ಕರ್ಮಚಾರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಬಿ. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಸದಾಶಿವ, ಕಾಂತರಾಜ ವರದಿ ಸ್ವೀಕರಿಸಲು ಆಗ್ರಹ

ಬೆಂಗಳೂರು: ಸದಾಶಿವ ಆಯೋಗ ಮತ್ತು ಕಾಂತರಾಜ ಆಯೋಗದ ವರದಿಗಳನ್ನು ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಬೇಕು ಎಂದು ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ಲೇಖಕಿ ಬಿ.ಟಿ. ಲಲಿತಾ ನಾಯಕ್ ಒತ್ತಾಯಿಸಿದರು.

ಶನಿವಾರ ನಡೆದ ‘ನ್ಯಾಯಮೂರ್ತಿ ಸದಾಶಿವ ಆಯೋಗ ಮತ್ತು ಕಾಂತರಾಜ ಆಯೋಗದ ವರದಿಗಳ ವಿವಾದ’ ಎಂಬ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕಾಂತರಾಜ ಅವರ ನೇತೃತ್ವದಲ್ಲಿ ನಡೆಸಿದ ಜಾತಿಗಣತಿ ವರದಿಯನ್ನು ಕೂಡಲೇ ಸ್ವೀಕರಿಸಿ, ಅದನ್ನು ಬಹಿರಂಗಗೊಳಿಸಬೇಕು. ಇದರಿಂದ, ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಸ್ಥಿತಿಯ ವಾಸ್ತವ ಅರಿಯಲು ವರದಿ ಸಹಾಯಕವಾಗಲಿದೆ. ಕಾಂತರಾಜ ವರದಿಯನ್ನು ಲಿಂಗಾಯತರು ಮತ್ತು ಒಕ್ಕಲಿಗರು ವಿರೋಧಿಸುತ್ತಿದ್ದಾರೆ. ಇದಕ್ಕೆ ಪುಷ್ಟಿ ನೀಡುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಶಾಸಕ ಶಾಮನೂರು ಶಿವಶಂಕರಪ್ಪ ಅವರು ಈ ವರದಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಯಾವುದೇ ಒತ್ತಡಗಳಿಗೆ ಮಣಿಯದೇ ವರದಿಯನ್ನು ಸ್ವೀಕರಿಸಬೇಕು’ ಎಂದರು. ಸಂವಿಧಾನ ಚಿಂತಕ ಲೋಲಾಕ್ಷ ಇದ್ದರು.

ಕುಂದು ಕೊರತೆ

ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಅಹವಾಲುಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು: ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



ರಿಚ್ಮಂಡ್ ಟೌನ್ ಪಾದಚಾರಿ ಮಾರ್ಗದ ಚಪ್ಪಡಿ ಕಲ್ಲು ಕಿತ್ತುಹೋಗಿರುವುದು

'ಪಾದಚಾರಿ ಮಾರ್ಗ ದುರಸ್ತಿಗೊಳಿಸಿ'

ರಿಚ್ಮಂಡ್ ಟೌನ್‌ನ ಅಲೆಗ್ಸಾಂಡರ್ ಸೇಂಟ್ ಕಿಂಗ್‌ಸ್ಟನ್ ರಸ್ತೆಯ ಪಾದಚಾರಿ ಮಾರ್ಗಕ್ಕೆ ಹಾಕಿದ್ದ ಚಪ್ಪಡಿ ಕಲ್ಲುಗಳು ಕಿತ್ತುಕೊಂಡು ಹೋಗಿವೆ. ಇದರಿಂದ, ಪಾದಚಾರಿಗಳ ಸಂಚಾರಕ್ಕೆ ಸಂಚಕಾರ ಬಂದಿದೆ. ಈ ರಸ್ತೆಯಲ್ಲಿ ಅನೇಕ ಶಾಲೆಗಳಿದ್ದು, ಪ್ರತಿನಿತ್ಯ ವಿದ್ಯಾರ್ಥಿಗಳು ಇದೇ ಪಾದಚಾರಿ ರಸ್ತೆಯ ಮೂಲಕ ಶಾಲೆಗಳಿಗೆ ತಲುಪಬೇಕು. ಆದರೆ, ಪಾದಚಾರಿ ಮಾರ್ಗದಲ್ಲಿ ಹಾಕಿದ್ದ ಕಲ್ಲುಗಳು ಮುರಿದು ಬಿದ್ದಿವೆ. ಇದರಿಂದ, ವೃದ್ಧರು, ಮಹಿಳೆಯರು ಮಕ್ಕಳು ಓಡಾಡುವುದೇ ದುಸ್ತರವಾಗಿದೆ. ಹಲವು ಜನ ಈ ಮಾರ್ಗದಲ್ಲಿ ಓಡಾಡುವಾಗ ಅಪಾಯಕ್ಕೆ ಸಿಲುಕಿಕೊಂಡಿದ್ದಾರೆ. ಬಿಬಿಎಂಪಿ ಕೂಡಲೇ ಪಾದಚಾರಿ ಮಾರ್ಗ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ಪಾದಚಾರಿ



ರಿಚ್ಮಂಡ್ ಟೌನ್‌ನ ರಿನಿಯಲ್ಸ್ ರಸ್ತೆ ಪಾದಚಾರಿ ಮಾರ್ಗದಲ್ಲಿನ ಕಸದ ರಾಶಿ

'ಪಾದಚಾರಿ ಮಾರ್ಗದಲ್ಲಿ ಕಸ'

ರಿಚ್ಮಂಡ್ ಟೌನ್‌ನ ರಿನಿಯಲ್ಸ್ ರಸ್ತೆ ಪಾದಚಾರಿ ಮಾರ್ಗದಲ್ಲಿ ರಾಶಿ ರಾಶಿ ಕಸ ಹಾಕಲಾಗಿದೆ. ಈ ಪಾದಚಾರಿ ಮಾರ್ಗವನ್ನು ಕಸ ಹಾಕುವ ಸ್ಥಳವನ್ನಾಗಿ ಮಾಡಿಕೊಳ್ಳಲಾಗಿದೆ. ಇದರಿಂದ, ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ. ಜತೆಗೆ ಇದು ಸೊಳ್ಳೆಗಳ ತಾಣವಾಗಿ ಮಾರ್ಪಟ್ಟಿದ್ದು, ರೋಗಗಳು ಹರಡುವ ಭೀತಿ ಶುರುವಾಗಿದೆ. ಈ ಭಾಗದಲ್ಲಿ ಹೆಚ್ಚು ಶಾಲೆಗಳಿರುವುದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಬಿಎಂಪಿ ಕೂಡಲೇ ಈ ಕಸವನ್ನು ವಿಲೇವಾರಿ ಮಾಡುವ ಮೂಲಕ ನಗರದ ಸೌಂದರ್ಯ ಹಾಗೂ ಸ್ವಚ್ಛತೆ ಕಾಪಾಡಬೇಕು.

ನಂಜುಂಡಪ್ಪ, ಸ್ಥಳೀಯ ನಿವಾಸಿ

'ಅಪಾಯಕಾರಿ ವಿದ್ಯುತ್ ಬಾಕ್ಸ್ ಸ್ಥಳಾಂತರಿಸಿ'



ಪಾದಚಾರಿ ಮಾರ್ಗದಲ್ಲಿ ತೆರೆದ ಸ್ಥಿತಿಯಲ್ಲಿರುವ ವಿದ್ಯುತ್ ಬಾಕ್ಸ್

ನಾಗವಾರ ಮುಖ್ಯ ರಸ್ತೆಯಲ್ಲಿರುವ ನಾಗಲಿಂಗ ಗಣಪತಿ ದೇವಸ್ಥಾನದ ಪಾದಚಾರಿ ಮಾರ್ಗದಲ್ಲಿ ಹೈವೋಲ್ಟೇಜ್ ವಿದ್ಯುತ್ ಟ್ರಾನ್ಸ್‌ಫಾರ್ಮರ್ ತಂತಿಗಳು ಮತ್ತು ವಿದ್ಯುತ್ ಬಾಕ್ಸ್ ಕೆಳಭಾಗದಲ್ಲಿದ್ದು, ಅದಕ್ಕೆ ಯಾವುದೇ ಸುರಕ್ಷತೆಯಿಲ್ಲ. ಕಳೆದ ಒಂದು ವರ್ಷದ ಇಲ್ಲಿನ ವಿದ್ಯುತ್ ಬಾಕ್ಸ್ ತೆರೆದ ಸ್ಥಿತಿಯಲ್ಲಿದೆ. ಈ ವಿದ್ಯುತ್ ಕಂಬ ಎರಡು ಬದಿಗಳಲ್ಲಿ ವ್ಯಾಪಿಸಿರುವ ಕಾರಣ ವಾಹನ ಸಂಚಾರ ಹಾಗೂ ಪಾದಚಾರಿಗಳ ಓಡಾಟಕ್ಕೆ ಅನನುಕೂಲವಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ, ಬೆಸ್ಕಾಂ ಅಪಾಯದ ಸ್ಥಿತಿಯಲ್ಲಿರುವ ವಿದ್ಯುತ್ ಕಂಬ ಹಾಗೂ ಬಾಕ್ಸ್ ಅನ್ನು ತೆರವುಗೊಳಿಸಬೇಕು.

ಪಟ್ಟಡಿ ಎ. ಬಸವರಾಜ್, ಸ್ಥಳೀಯ ನಿವಾಸಿ



ಹೆಬ್ಬಾಳದ ರೈಲ್ವೆ ಗೇಟ್ ದಾಟುತ್ತಿರುವ ಪ್ರಯಾಣಿಕರು

'ಹೆಬ್ಬಾಳ: ಪಾದಚಾರಿ ಮಾರ್ಗ ಒತ್ತುವರಿ'

ಹೆಬ್ಬಾಳದ ಮುಖ್ಯರಸ್ತೆಯಲ್ಲಿನ ಬಸ್ ತಂಗುದಾಣ ಮುಂಭಾಗದಲ್ಲಿರುವ ಮುಖ್ಯರಸ್ತೆ ದಾಟಿ ಹೋಗುವಾಗ ಮಾರ್ಗ ಮಧ್ಯೆ ಸಿಗುವ ರೈಲ್ವೆ ಗೇಟ್ ದಾಟಲು ಸಾರ್ವಜನಿಕರು ಪರದಾಡುತ್ತಿದ್ದಾರೆ. ಅದಕ್ಕೆ ಕಾರಣ ಬೀದಿ ವ್ಯಾಪಾರಿಗಳು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿರುವುದು. ಇದರಿಂದ ಜನಸಂಚಾರಕ್ಕೆ ಅನನುಕೂಲವಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಸ್ಥಳೀಯ ಜನಪ್ರತಿನಿಧಿಗಳಿಗೆ ಅಂಡರ್‌ಪಾಸ್ ನಿರ್ಮಿಸುವಂತೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜವಾಗಿಲ್ಲ.

ಜಿ.ಎಸ್. ಮಂಜುನಾಥ್, ಸ್ಥಳೀಯ ನಿವಾಸಿ



ಹೊಸಕೆರೆಹಳ್ಳಿಗೆ ಚರಂಡಿ ನೀರು ಹರಿದು ನೀರು ಕಲ್ಮಶವಾಗಿರುವುದು

'ಹೊಸಕೆರೆಹಳ್ಳಿ ಕೆರೆಗೆ ಚರಂಡಿ ನೀರು'


ರಾಜರಾಜೇಶ್ವರಿನಗರದ ವ್ಯಾಪ್ತಿಯ ಸಪ್ತಗಿರಿ ನಗರದ ಒಳಚರಂಡಿ ನೀರು ಹೊಸಕೆರೆಹಳ್ಳಿಗೆ ಹರಿದು ಹೋಗುತ್ತಿದೆ. ಇದರಿಂದ, ಕೆರೆಯ ನೀರೆಲ್ಲ ದುರ್ವಾಸನೆ ಬೀರುತ್ತಿದೆ. ಜೊತೆಗೆ ಕೆರೆಯಲ್ಲಿರುವ ಮೀನುಗಳು ಹಾಗೂ ಹಕ್ಕಿಗಳು ಈ ನೀರು ಕುಡಿದು ಸಾಯುತ್ತಿವೆ. ಈ ಭಾಗದಲ್ಲಿ ಒಳಚರಂಡಿ ನೀರಿನ ವ್ಯವಸ್ಥೆ ಹಾಳಾಗಿರುವ ಬಗ್ಗೆ ಬಿಡಬ್ಲ್ಯೂಎಸ್‌ಎಸ್‌ಬಿಗೆ ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ. ಇದರಿಂದ, ಕೆರೆಯ ವಾತಾವರಣ ಸಂಪೂರ್ಣ ಹಾಳಾಗಿದ್ದು, ಕೆರೆಗೆ ಹರಿಯುತ್ತಿರುವ ತ್ಯಾಜ್ಯ ನೀರನ್ನು ನಿಲ್ಲಿಸಬೇಕು.

ಎಚ್.ಸಿ.ಶ್ರೀನಿವಾಸ್, ಸ್ಥಳೀಯ ನಿವಾಸಿ

'ರಸ್ತೆ ಗುಂಡಿ ಮುಚ್ಚಿ'

ಬಾಣಸವಾಡಿಯ ಚಂದ್ರಮ್ಮ ಲೇಔಟ್‌ನ 2ನೇ ಕ್ರಾಸ್‌ನ ರಸ್ತೆಯು ಗುಂಡಿಗಳಿಂದ ಕೂಡಿದ್ದು, ಸಂಪೂರ್ಣ ಹಾಳಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಹದಗೆಟ್ಟ ಪರಿಣಾಮ ಸಂಚಾರ ದಟ್ಟಣೆಯಾಗಿ ಅಪಘಾತಗಳು ಸಂಭವಿಸುತ್ತಿವೆ. ಕಳೆದ ಎರಡು ಮೂರು ತಿಂಗಳಲ್ಲಿ 3 ಅಪಘಾತಗಳು ಸಂಭವಿಸಿವೆ. ಕೂಡಲೇ ಬಿಬಿಎಂಪಿ ಈ ರಸ್ತೆಯನ್ನು ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಸುಧಾ, ಸ್ಥಳೀಯ ನಿವಾಸಿ



ಬಾಣಸವಾಡಿಯ ಚಂದ್ರಮ್ಮ ಲೇಔಟ್‌ನ 2ನೇ ಕ್ರಾಸ್‌ನ ರಸ್ತೆಯ ದುಃಸ್ಥಿತಿ



ಕುಮಾರಕೃಪಾ ಪಾರ್ಕ್ ಈಸ್ಟ್ ರಸ್ತೆಯ ಪಾದಚಾರಿ ಮಾರ್ಗವನ್ನು ಸರಿಪಡಿಸಿರುವುದು

ಪಾದಚಾರಿ ಮಾರ್ಗ ದುರಸ್ತಿ

ವರದಿ ಪರಿಣಾಮ

ಶಿವಾನಂದ ವೃತ್ತದ ಕುಮಾರಕೃಪಾ ಪಾರ್ಕ್ ಈಸ್ಟ್ ರಸ್ತೆಯ ಪಾದಚಾರಿ ಮಾರ್ಗವನ್ನು ಸರಿಪಡಿಸಲಾಗಿದೆ. 'ಪ್ರಜಾವಾಣಿ' ಕುಂದುಕೊರತೆ ವಿಭಾಗದಲ್ಲಿ ನವೆಂಬರ್ 6ರಂದು 'ಪಾದಚಾರಿ ಮಾರ್ಗ ಸರಿಪಡಿಸಿ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಬಿಬಿಎಂಪಿ ಅಧಿಕಾರಿಗಳು ಪಾದಚಾರಿ ಮಾರ್ಗ ದುರಸ್ತಿಗೊಳಿಸಿದ್ದಾರೆ.



ನೆಲಮಂಗಲದಲ್ಲಿ ಬೀರೇಶ್ವರ ಸಮುದಾಯ ಭವನ ಮತ್ತು ಪ್ರಾರ್ಥನಾ ಮಂದಿರ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು

3 ವರ್ಷದಲ್ಲಿ ಎತ್ತಿನಹೊಳೆ ಯೋಜನೆ ಪೂರ್ಣ: ಸಿ.ಎಂ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಮೂರು ವರ್ಷಗಳ ಒಳಗೆ ಎತ್ತಿನಹೊಳೆ ಯೋಜನೆಯನ್ನು ಪೂರ್ಣಗೊಳಿಸಿ ಬೆಂಗಳೂರು ಗ್ರಾಮಾಂತರ ಪ್ರದೇಶಗಳ ಕುಡಿಯುವ ನೀರಿನ ಬವಣೆ ನೀಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿನ ಬೀರೇಶ್ವರ ಸ್ವಾಮಿ ದೇವಸ್ಥಾನ ಅಭಿವೃದ್ಧಿ ಸೇವಾ ಸಮಿತಿಯಿಂದ ಬೀರೇಶ್ವರ ಸಮುದಾಯ ಭವನ ಮತ್ತು ಪ್ರಾರ್ಥನಾ ಮಂದಿರವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಎತ್ತಿನಹೊಳೆ ಯೋಜನೆಯನ್ನು ನಾನು ಪ್ರಾರಂಭಿಸಿದ್ದೆ. ಮಧ್ಯೆ 5 ವರ್ಷ ಅನುದಾನವಿಲ್ಲದೇ ಕೆಲಸಗಳಾಗಲಿಲ್ಲ. ಈಗ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವುದರಿಂದ ಅನುದಾನ ಒದಗಿಸಲಾಗುವುದು' ಎಂದರು.

ನೆಲಮಂಗಲ ಪಟ್ಟಣಕ್ಕೆ ಕುಡಿಯುವ ನೀರಿನ ಬೇಡಿಕೆ ಇದೆ. ನೆಲಮಂಗಲ ಸುತ್ತಮುತ್ತಲ ಪ್ರದೇಶಗಳ ಕೆರೆಗಳನ್ನು ತುಂಬುವ ವೃಷಭಾವತಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು. ಈ ಯೋಜನೆಯಿಂದ ಅಂತರ್ಜಲ ಮಟ್ಟ ಹೆಚ್ಚಲಿದೆ. ಇಲ್ಲಿನ ಒಳಚರಂಡಿ ವ್ಯವಸ್ಥೆ ಸೇರಿದಂತೆ ಮೂಲ ಸೌಲಭ್ಯಗಳನ್ನು ಅಭಿವೃದ್ಧಿಗೊಳಿಸಲಾಗುವುದು ಎಂದು ಹೇಳಿದರು.

ಕುರುಬರು ಶೈವ ಪಂಥದವರು. ಬೀರೇಶ್ವರ ಕುರುಬ ಸಮುದಾಯದ ಕುಲದೇವರು. ಕನಕದಾಸರು ವೈಷ್ಣವ ಪಂಥ ಅನುಸರಿಸಿದರು. ಮನುಷ್ಯ ಮತ್ತೊಬ್ಬ ಮನುಷ್ಯನನ್ನು ದ್ವೇಷಿಸಬಾರದು. ಜಾತಿ, ಮತ, ಧರ್ಮಗಳು ಬೇರೆ ಇದ್ದರೂ ಪರಸ್ಪರ ಗೌರವದಿಂದ ಕಾಣಬೇಕು. ಕನಕದಾಸರು ಒಂದು ಜಾತಿಗೆ ಸೀಮಿತವಾಗದೇ ವಿಶ್ವ ಮಾನವರಾದವರು ಎಂದು ನೆನಪಿಸಿಕೊಂಡರು.

> ಮೆಟ್ರೊ ರೈಲು ಸಂಪರ್ಕ ಮಾದಾವರವರೆಗೆ ಇದೆ. ನೆಲಮಂಗಲದವರೆಗೂ ವಿಸ್ತರಿಸುವ ಬಗ್ಗೆ ಸರ್ಕಾರ ಪರಿಶೀಲಿಸಿ ಕ್ರಮಕೈಗೊಳ್ಳಲಿದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮುಖ್ಯಾಂಶಗಳು

- ಬೆಂಗಳೂರು ಗ್ರಾಮಾಂತರ ಪ್ರದೇಶದ ನೀರಿನ ಬವಣೆ ನೀಗಿಸಲು ಒತ್ತು
- ಎತ್ತಿನಹೊಳೆ ಯೋಜನೆ ಪೂರ್ಣಕ್ಕೆ ಅನುದಾನ ಒದಗಿಸಲು ಬದ್ಧ
- ವೃಷಭಾವತಿ ಯೋಜನೆ ಪೂರ್ಣಗೊಳಿಸಲು ಕ್ರಮ

ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಹೊಸದುರ್ಗ ಶಾಖಾಮಠದ ಈಶ್ವರಾನಂದಪುರಿ ಸ್ವಾಮೀಜಿ, ತೈಲೇಶ್ವರ ಗಾಣಿಗ ಮಠದ ಪೂರ್ಣಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕೆಪಿಸಿಸಿ ಉಪಾಧ್ಯಕ್ಷ ಎಚ್.ಎಂ. ರೇವಣ್ಣ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಎನ್. ಶ್ರೀನಿವಾಸ್, ನಗರಸಭೆ ಅಧ್ಯಕ್ಷೆ ಲತಾ ಹೇಮಂತ್ ಕುಮಾರ್, ಬಿಎಂಎಲ್ ಕಾಂತರಾಜು, ಹೊನ್ನ ಸಿದ್ಧಯ್ಯ, ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಿ.ಡಿ. ಗಂಗರಾಜು ಇದ್ದರು.



ರಾಜರಾಜೇಶ್ವರಿ ನಗರ ಬಿಬಿಎಂಪಿ ವಲಯ ಆಯುಕ್ತರ ಕಚೇರಿಯಲ್ಲಿ ಪಾಲಿಕೆಯಿಂದ ನೀಡಿದ ಉಚಿತ ಹೊಲಿಗೆ ಯಂತ್ರಗಳನ್ನು ಶಾಸಕ ಮುನಿರತ್ನ ವಿತರಿಸಿದರು. ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್, ಜಂಟಿ ಆಯುಕ್ತ ಅಜಯ್ ಇದ್ದಾರೆ

ಕಾಮಗಾರಿ ಕೈಗೊಳ್ಳುವ ಮುನ್ನ ಗಮನಕ್ಕೆ ತನ್ನಿ: ಮುನಿರತ್ನ ಸೂಚನೆ

ರಾಜರಾಜೇಶ್ವರಿನಗರ: 'ಸವಲತ್ತು, ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ನನ್ನ ಗಮನಕ್ಕೆ ತರಬೇಕು' ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಶಾಸಕ ಮುನಿರತ್ನ ಸೂಚಿಸಿದರು.

ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಲಿಗೆ ತರಬೇತಿ ಪಡೆದ 120 ಮಹಿಳೆಯರಿಗೆ ಪ್ರಮಾಣಪತ್ರ ಮತ್ತು ಉಚಿತ ಹೊಲಿಗೆ ಯಂತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

ಸವಲತ್ತುಗಳನ್ನು ಪಾಲಿಕೆ ನೀಡುತ್ತಿದೆ. ಹೊಲಿಗೆ ತರಬೇತಿ ಪಡೆದವರು ಸ್ವಯಂ ಉದ್ಯೋಗ ಕಂಡುಕೊಂಡು ಆರ್ಥಿಕವಾಗಿ ಸದೃಢಗೊಳ್ಳಬೇಕು ಎಂದರು.

ಈಶಾನ್ಯ ವಿಭಾಗದ ಸೈಬರ್ ಕ್ರೈಂ ಪೊಲೀಸರ ಕಾರ್ಯಾಚರಣೆ • ನಾಲ್ವರು ಆರೋಪಿಗಳ ಬಂಧನ

ಕೆಲಸದ ಆಮಿಷ: 350ಕ್ಕೂ ಹೆಚ್ಚು ಮಂದಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅರೆಕಾಲಿಕ ಕೆಲಸದ ಹೆಸರಿನಲ್ಲಿ ಜನರನ್ನು ವಂಚಿಸುತ್ತಿದ್ದ ಆರೋಪದಡಿ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಇತ್ತೀಚೆಗೆ ಬಂಧಿಸಿದ್ದ ನಾಲ್ವರು ಆರೋಪಿಗಳು ಇದುವರೆಗೂ 350ಕ್ಕೂ ಹೆಚ್ಚು ಮಂದಿಯನ್ನು ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ.

'ಸಂತ್ರಸ್ತರು ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು, ಆರ್.ಟಿ. ನಗರ ನಿವಾಸಿ ಸೈಯದ್ ಯೂನುಸ್ ಫಾಜಿಲ್ (31), ಭಾರತಿನಗರ ನಿವಾಸಿ ಮೊಹಮ್ಮದ್ ಕಲೀಮುಲ್ಲಾ (35), ಕಾವೇರಿನಗರ ನಿವಾಸಿ ಸೈಯದ್ ಅಬ್ರಾಜ್ (24) ಮತ್ತು ಫ್ರೇಜರ್ ಟೌನ್ ನಿವಾಸಿ ಇಬ್ರಾಹಿಂ ಕರ್ನೂಲ್ (36) ಎಂಬುವವರನ್ನು ಇತ್ತೀಚೆಗೆ ಬಂಧಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'ನಾಲ್ವರು ಆರೋಪಿಗಳು ತಮ್ಮದೇ ತಂಡ ಕಟ್ಟಿಕೊಂಡು 305 ಮಂದಿಯನ್ನು ವಂಚನೆ ಮಾಡಿರುವುದು ಗೊತ್ತಾಗಿತ್ತು. ಇದೀಗ, 350ಕ್ಕೂ ಹೆಚ್ಚು ಪ್ರಕರಣದಲ್ಲಿ ಆರೋಪಿಗಳು ಭಾಗಿಯಾಗಿರುವ ಮಾಹಿತಿ ಲಭ್ಯವಾಗಿದೆ' ಎಂದರು.

ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು: 'ವಾಟ್ಸ್‌ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಹಾಗೂ ಇತರೆ ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪಿಗಳು ಜಾಹೀರಾತು ನೀಡುತ್ತಿದ್ದರು. 'ಮನೆಯಿಂದಲೇ ಅರೆಕಾಲಿಕ ಕೆಲಸ ಮಾಡಿ. ಕೈ ತುಂಬ ಹಣ ಗಳಿಸಿ' ಎನ್ನುತ್ತಿದ್ದರು. ಇದನ್ನು ನಂಬಿ ಹಲವರು ಆರೋಪಿಗಳನ್ನು ಸಂಪರ್ಕಿಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು ಆರಂಭದಲ್ಲಿ ಯಾವುದೇ ಶುಲ್ಕವಿಲ್ಲವೆಂದು ಹೇಳುತ್ತಿದ್ದರು. ಹೋಟೆಲ್ ಬಗ್ಗೆ ಅಭಿಪ್ರಾಯ ಬರೆಯುವ ಕೆಲಸವನ್ನು ಜನರಿಗೆ ನೀಡುತ್ತಿದ್ದರು. ಮೊದಲ ಅಭಿಪ್ರಾಯಕ್ಕೆ ₹150ರಿಂದ ₹200 ನೀಡುತ್ತಿದ್ದರು. ಎರಡನೇ ಬಾರಿ ಅಭಿಪ್ರಾಯ ಬರೆಯಲು ಶುಲ್ಕವಿರುವುದಾಗಿ ತಿಳಿಸುತ್ತಿದ್ದರು. ನಂತರ, ಹಂತ ಹಂತವಾಗಿ ಹಣ ಪಡೆಯುತ್ತಿದ್ದರು.'

'ಆರೋಪಿಗಳು ಒಬ್ಬೊಬ್ಬರಿಂದ ₹10,000ದಿಂದ ₹5 ಲಕ್ಷದವರೆಗೆ ಹಣ ಪಡೆದಿದ್ದರೆಂಬ ಸಂಗತಿ ತನಿಖೆಯಲ್ಲಿ ಗೊತ್ತಾಗಿದೆ. ಹಣ ಪಡೆದ ನಂತರ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಳ್ಳುತ್ತಿದ್ದರು' ಎಂದು ಮೂಲಗಳು ಹೇಳಿವೆ.

ಪೊಲೀಸ್ ನಕಲಿ ಪರಿಶೀಲನಾ ಪತ್ರ: ಮೂವರ ವಿರುದ್ಧ ಪ್ರಕರಣ

ಬೆಂಗಳೂರು: ನಗರ ಪೊಲೀಸ್ ಕಮಿಷನರೇಟ್ ಹೆಸರಿನಲ್ಲಿ ನಕಲಿ ಪರಿಶೀಲನಾ ಪ್ರಮಾಣ ಪತ್ರ ಸೃಷ್ಟಿಸಲಾಗಿದ್ದು, ಈ ಸಂಬಂಧ ಮೂವರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಕಲಿ ಪ್ರಮಾಣ ಪತ್ರದ ಬಗ್ಗೆ ಕಮಿಷನರ್ ಕಚೇರಿಯ ಪಿಎಸ್‌ಐ ದೂರು ನೀಡಿದ್ದಾರೆ. ವೈಟ್‌ಫೀಲ್ಡ್ ನಿವಾಸಿ ಎನ್ನಲಾದ ಡಿ. ರಮೇಶ್, ರಾಜಾಜಿನಗರದ ಚಂದ್ರಪ್ರಕಾಶ್ ಗೌತಮ್ ಹಾಗೂ ಯಲಹಂಕ ನ್ಯೂ ಟೌನ್‌ನ ಪಾರ್ಥಸಾರಥಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನ. 24ರಂದು ಚಂದ್ರಪ್ರಕಾಶ್ ಹಾಗೂ ಪಾರ್ಥಸಾರಥಿ ಕಮಿಷನರ್ ಕಚೇರಿಗೆ ಬಂದಿದ್ದರು. ಸಹಾಯವಾಣಿ ಸಿಬ್ಬಂದಿಯನ್ನು ಭೇಟಿಯಾಗಿದ್ದ ಅವರಿಬ್ಬರು, ರಮೇಶ್ ಹೆಸರಿನಲ್ಲಿದ್ದ ಪೊಲೀಸ್ ಪರಿಶೀಲನಾ ಪತ್ರದ ಜೆರಾಕ್ಸ್ ಪ್ರತಿ ಕೊಟ್ಟಿದ್ದರು. ಅದೇ ಪತ್ರಕ್ಕೆ ಕಮಿಷನರ್ ಕಚೇರಿ ಸೀಲ್ ಹಾಕಿ ಕೊಡುವಂತೆ ಕೋರಿದ್ದರು.'

'ಪತ್ರ ನೋಡಿದ್ದ ಸಿಬ್ಬಂದಿಗೆ ಅನುಮಾನ ಬಂದಿತ್ತು. ಬಳಿಕ, ದಾಖಲೆಗಳನ್ನು ಪರಿಶೀಲಿಸಿದ್ದರು. ಅವಾಗಲೇ ನಕಲಿ ಪ್ರಮಾಣಪತ್ರವೆಂದು ತಿಳಿದಿತ್ತು. ನಕಲಿ ಪತ್ರದ ಸಮೇತವೇ ಠಾಣೆಗೆ ದೂರು ನೀಡಿದ್ದಾರೆ. ಮೂವರನ್ನು ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಪ್ರಧಾನಿ ಮೋದಿ ಸೆಲ್ಫಿ ಪಾಯಿಂಟ್‌ಗೆ ಆಕ್ಷೇಪ

ಬೆಂಗಳೂರು: ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಸೆಲ್ಫಿ ಪಾಯಿಂಟ್‌ಗಳನ್ನು ಸ್ಥಾಪಿಸುವಂತೆ ಯುಜಿಸಿ ಸೂಚನೆ ನೀಡಿರುವುದಕ್ಕೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಆಕ್ಷೇಪ ವ್ಯಕ್ತಪಡಿಸಿದೆ.

'ಆಡಳಿತ ಪಕ್ಷದ ನಾಯಕರನ್ನು ಬಿಂಬಿಸುವ ಯುಜಿಸಿಯ ಸೂಚನೆಯು ಅಪ್ರಜಾತಾಂತ್ರಿಕವಾಗಿದೆ. ದೇಶದ ಶೈಕ್ಷಣಿಕ ವ್ಯವಸ್ಥೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವುದರ ಬದಲು, ಒಬ್ಬ ನಾಯಕನ ವ್ಯಕ್ತಿ ಪೂಜೆ, ಒಂದು ವಿಚಾರಧಾರೆ, ಸೇರಿದಂತೆ ಏಕಮುಖ ಚಿಂತನೆಯಲ್ಲಿ ದೇಶದ ವಿದ್ಯಾರ್ಥಿಗಳನ್ನು ಮುಳುಗಿಸುವ ಅಪಾಯಕಾರಿ ನಡೆಯಾಗಿದೆ. ಇದರ ಬದಲಾಗಿ, ಶಿಕ್ಷಣದ ವ್ಯಾಪಾರಿಕರಣ, ಖಾಸಗಿಕರಣ, ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ಮುಚ್ಚುವಿಕೆ ಸೇರಿದಂತೆ ದೇಶದ ಶಿಕ್ಷಣ ವ್ಯವಸ್ಥೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಯುಜಿಸಿಯು ಕಾರ್ಯಪ್ರವೃತ್ತವಾಗಬೇಕು' ಎಂದು ಆರ್ಗನೈಸೇಷನ್‌ನ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಒತ್ತಾಯಿಸಿದ್ದಾರೆ.

ಅತ್ತಿಬೆಲೆಯಿಂದ ವಜ್ರ ಎಸಿ ಬಸ್ ಆರಂಭ



ಬೆಂಗಳೂರು: ಬಿಎಂಟಿಸಿ ವತಿಯಿಂದ ಅತ್ತಿಬೆಲೆ– ಹೊಸಕೋಟೆ ನಡುವೆ ವಜ್ರ ಹವಾನಿಯಂತ್ರಿತ ಬಸ್ ಸಂಚಾರ ಭಾನುವಾರ ಆರಂಭಗೊಂಡಿದೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಈ ಬಸ್ ಸಂಚಾರಕ್ಕೆ ಅತ್ತಿಬೆಲೆ ಬಸ್ ನಿಲ್ದಾಣದಲ್ಲಿ ಚಾಲನೆ ನೀಡಿ ಮಾತನಾಡಿ, 'ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಬಸ್‌ಗಳ ಸಂಚಾರ ಹೆಚ್ಚಿಸಲಾಗುವುದು. ಅತ್ತಿಬೆಲೆಗೆ ಸುಸಜ್ಜಿತ ಬಸ್ ನಿಲ್ದಾಣದ ಅವಶ್ಯಕತೆ ಇದೆ. ಮುಂದಿನ ದಿನಗಳಲ್ಲಿ ಆಧುನಿಕ ಬಸ್ ನಿಲ್ದಾಣ ನಿರ್ಮಿಸಲಾಗುವುದು' ಎಂದು ತಿಳಿಸಿದರು.

ಆನೇಕಲ್ ಶಾಸಕ ಬಿ. ಶಿವಣ್ಣ, ಬಿಎಂಟಿಸಿ ನಿರ್ದೇಶಕಿ ಕಲಾ ಕೃಷ್ಣಸ್ವಾಮಿ, ಮುಖ್ಯ ಸಂಚಾರ ವ್ಯವಸ್ಥಾಪಕ ಜಿ.ಟಿ.ಪ್ರಭಾಕರ ರೆಡ್ಡಿ, ಕೇಂದ್ರೀಯ ಮತ್ತು ಪೂರ್ವ ವಲಯದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಹಾಗೂ ವಿಭಾಗೀಯ ಸಂಚಾರ ಅಧಿಕಾರಿಗಳು ಇದ್ದರು.

ಈಗಾಗಲೇ ಈ ಮಾರ್ಗದಲ್ಲಿ 37 ಸಾಮಾನ್ಯ ಬಸ್‌ಗಳು 300 ಟ್ರಿಪ್‌ಗಳನ್ನು ನಡೆಸುತ್ತಿವೆ. ಇದರ ಜೊತೆಗೆ ಇನ್ನು ಮುಂದೆ 10 ಬಸ್‌ಗಳು ಪ್ರತಿದಿನ 57 ಟ್ರಿಪ್ ಸಂಚರಿಸಲಿವೆ.

ಕಾನ್‌ಸ್ಟೆಬಲ್ ಬಾಡಿವೋರ್ನ್ ಕ್ಯಾಮೆರಾ ಕದ್ದೊಯ್ದ ಕಳ್ಳರು

ಬೆಂಗಳೂರು: ನಗರದ ಸಿಟಿ ಮಾರ್ಕೆಟ್ ಸಂಚಾರ ಠಾಣೆಯ ಮಹಿಳಾ ಹೆಡ್ ಕಾನ್‌ಸ್ಟೆಬಲ್‌ವೊಬ್ಬರ ಬಾಡಿವೋರ್ನ್ ಕ್ಯಾಮೆರಾವನ್ನು ಕಳ್ಳರು ಕದ್ದೊಯ್ದಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನ. 22ರಂದು ನಡೆದಿರುವ ಕಳ್ಳತನ ಸಂಬಂಧ ಹೆಡ್ ಕಾನ್‌ಸ್ಟೆಬಲ್ ಅವರು ದೂರು ನೀಡಿದ್ದಾರೆ. ಆರೋಪಿಗಳನ್ನು ಪತ್ತೆ ಮಾಡಲು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜನಸ್ನೇಹಿ ಪೊಲೀಸ್ ವ್ಯವಸ್ಥೆ ರೂಪಿಸಲು ನಗರದ ಎಲ್ಲ ಸಂಚಾರ ಪೊಲೀಸರಿಗೆ ₹ 50 ಸಾವಿರ ಮೌಲ್ಯದ ಬಾಡಿವೋರ್ನ್ ಕ್ಯಾಮೆರಾ ನೀಡಲಾಗಿದೆ. ಪೊಲೀಸರು ಕ್ಯಾಮೆರಾ ಧರಿಸಿ ಕೆಲಸ ಮಾಡುತ್ತಿದ್ದಾರೆ. ಜನರ ಜೊತೆಗಿನ ಮಾತುಕತೆ ದೃಶ್ಯಗಳು ಕ್ಯಾಮೆರಾದಲ್ಲಿ ಸೆರೆ ಆಗುತ್ತಿವೆ' ಎಂದು ತಿಳಿಸಿವೆ.

ಅಭಿನಯ ಜಂಕ್ಷನ್‌ನಲ್ಲಿ ಕೃತ್ಯ: 'ಬ್ಯಾಗ್‌ನಲ್ಲಿ ಬಾಡಿವೋರ್ನ್ ಕ್ಯಾಮೆರಾ ಇಟ್ಟುಕೊಂಡಿದ್ದ ಹೆಡ್ ಕಾನ್‌ಸ್ಟೆಬಲ್ ಅವರು ಅಭಿನಯ ಜಂಕ್ಷನ್‌ನಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದರು. ಪೊಲೀಸ್ ಚೌಕಿಯಲ್ಲಿ ಕುಳಿತುಕೊಂಡಿದ್ದರು. ಜಂಕ್ಷನ್‌ನಲ್ಲಿ ವಾಹನಗಳ ವಿಪರೀತ ದಟ್ಟಣೆ ಉಂಟಾಗಿತ್ತು. ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಹೆಡ್ ಕಾನ್‌ಸ್ಟೆಬಲ್ ಅವರು ಚೌಕಿಯಿಂದ ಹೊರಬಂದು ರಸ್ತೆಗೆ ಇಳಿದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದಟ್ಟಣೆ ನಿಯಂತ್ರಿಸಲು ಹೋಗಿದ್ದ ಸಂದರ್ಭದಲ್ಲಿ ಹೆಡ್ ಕಾನ್‌ಸ್ಟೆಬಲ್ ಅವರು ಚೌಕಿಯಲ್ಲಿಯೇ ಬ್ಯಾಗ್ ಬಿಟ್ಟು ಹೋಗಿದ್ದರು. ಅರ್ಧ ಗಂಟೆ ಬಿಟ್ಟು ವಾಪಸು ಚೌಕಿ ಬಳಿ ಬಂದಿದ್ದಾಗ, ಬ್ಯಾಗ್ ಇರಲಿಲ್ಲ. ಸುತ್ತಮುತ್ತ ಹುಡುಕಾಡಿದರೂ ಬ್ಯಾಗ್ ಸಿಕ್ಕಿಲ್ಲ. ಹಿರಿಯ ಅಧಿಕಾರಿಗಳಿಗೆ ವಿಷಯ ತಿಳಿಸಿದ ನಂತರ ಹೆಡ್ ಕಾನ್‌ಸ್ಟೆಬಲ್ ಅವರು ಠಾಣೆಗೆ ದೂರು ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಸಹ ಕೈದಿಗಳಿಂದ ಕೃತ್ಯ

ಚೈತ್ರಾ ತಂಡದ ಚನ್ನಾನಾಯ್ಕ್ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಟಿಕೆಟ್ ವಂಚನೆ ಪ್ರಕರಣದಲ್ಲಿ ಬಂಧಿತರಾಗಿ ಜೈಲಿನಲ್ಲಿರುವ ಆರೋಪಿ ಚನ್ನಾ ನಾಯ್ಕ್ ಮೇಲೆ ಸಹ ಕೈದಿಗಳು ಹಲ್ಲೆ ಮಾಡಿದ್ದು, ಈ ಸಂಬಂಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದ್ಯಮಿ ಗೋವಿಂದ ಬಾಬು ಪೂಜಾರಿ ಅವರಿಂದ ₹5 ಕೋಟಿ ಪಡೆದು ವಂಚಿಸಿದ್ದ ಆರೋಪದಡಿ ಚೈತ್ರಾ ಕುಂದಾಪುರ, ಚನ್ನಾ ನಾಯ್ಕ್ ಸೇರಿದಂತೆ ಹಲವು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಎಲ್ಲ ಆರೋಪಿಗಳು ಸದ್ಯ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿದ್ದಾರೆ.

'ವಿಚಾರಣಾಧೀನ ಕೈದಿ ಆಗಿರುವ ಚನ್ನಾ ನಾಯ್ಕ್ ಹಾಗೂ ಇತರರನ್ನು ಜೈಲಿನ ಒಂದನೇ ಟವರ್‌ನ 4ನೇ ವಿಭಾಗದ 1ನೇ ಬ್ಯಾರಕ್‌ನಲ್ಲಿರುವ ಕೊಠಡಿಯಲ್ಲಿ ಇರಿಸಲಾಗಿದೆ. ನ. 26ರಂದು ಸಂಜೆ ಚನ್ನಾ ನಾಯ್ಕ್, ಮತ್ತೊಬ್ಬ ಆರೋಪಿ ಜೊತೆ ಮಾತನಾಡುತ್ತಿದ್ದಾಗ ಗಲಾಟೆ ಆಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಚಾರಣಾಧೀನ ಕೈದಿಗಳಾದ ಚೇತನ್, ರಾಜ್‌ಕುಮಾರ್, ಅಭಿಷೇಕ್, ಯೋಗೇಂದ್ರ ಹಾಗೂ ಧನುಷ್ ಕ್ಷುಲ್ಲಕ ಕಾರಣಕ್ಕಾಗಿ ಚನ್ನಾ ನಾಯ್ಕ್ ಜೊತೆ ಜಗಳ ಮಾಡಿದ್ದರು. ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಆರೋಪಿಗಳು ಚನ್ನಾ ನಾಯ್ಕ್‌ನ ಕಣ್ಣು ಹಾಗೂ ಮೂಗಿಗೆ ಹೊಡೆದಿದ್ದಾರೆ.'

'ಹಲ್ಲೆ ಸಂಗತಿ ತಿಳಿಯುತ್ತಿದ್ದಂತೆ ಜೈಲಿನ ಸಿಬ್ಬಂದಿ ಸ್ಥಳಕ್ಕೆ ಹೋಗಿ ಜಗಳ ಬಿಡಿಸಿದ್ದಾರೆ. ಹಲ್ಲೆ ಸಂಬಂಧ ಜೈಲಿನ ಅಧಿಕಾರಿಗಳು ಠಾಣೆಗೆ ದೂರು ನೀಡಿದ್ದಾರೆ. ಚೇತನ್, ರಾಜ್‌ಕುಮಾರ್, ಅಭಿಷೇಕ್, ಯೋಗೇಂದ್ರ ಹಾಗೂ ಧನುಷ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹುಕ್ಕಾ ಮಾರಾಟ: ಮಡ್ ಪೈಪ್ ಕೆಫೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಗ್ರಾಹಕರಿಗೆ ಅಕ್ರಮವಾಗಿ ಹುಕ್ಕಾ ಮಾರುತ್ತಿದ್ದ ಆರೋಪದಡಿ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಮಡ್ ಪೈಪ್ ಕೆಫೆ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಡೊಮಿನೊ ಪ್ಲಾಜಾ ಕಟ್ಟಡದ 3ನೇ ಮಹಡಿಯಲ್ಲಿರುವ ಕೆಫೆಯಲ್ಲಿ ಹುಕ್ಕಾ ಮಾರುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಗಸ್ತಿನಲ್ಲಿದ್ದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದ್ದರು. ಪುರಾವೆಗಳು ಸಿಕ್ಕಿದ್ದರಿಂದ ಮಾಲೀಕ ಅಂಕಿತ್ ಹಾಗೂ ವ್ಯವಸ್ಥಾಪಕ ಅತೀಕ್ ಖಾನ್ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಊಟಕ್ಕೆಂದು ಕೆಫೆಗೆ ಬರುತ್ತಿದ್ದ ಗ್ರಾಹಕರಿಗೆ ಅಕ್ರಮವಾಗಿ ಹುಕ್ಕಾ ನೀಡಲಾಗುತ್ತಿತ್ತು. ಕೆಲವು ಬಾರಿ ಬಾಲಕ–ಬಾಲಕಿಯರೂ ಹುಕ್ಕಾ ಪಡೆಯುತ್ತಿದ್ದರೆಂಬ ಮಾಹಿತಿ ಇದೆ' ಎಂದು ತಿಳಿಸಿವೆ.



ಪುರಸ್ಕಾರ

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಾಹಿತಿ ನಾ. ಡಿಸೋಜ ಹಾಗೂ ಕನ್ನಡ ಪರ ಹೋರಾಟಗಾರ್ತಿ ದು. ಸರಸ್ವತಿ ಅವರಿಗೆ 2023ನೇ ಸಾಲಿನ 'ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕಸಾಪ ಗೌರವ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜು, ನೇ.ಭ. ರಾಮಲಿಂಗ ಶೆಟ್ಟಿ, ಸಾಹಿತಿ ಹಂಪ ನಾಗರಾಜಯ್ಯ, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಸಾಮಾಜಿಕ ಹೋರಾಟಗಾರ್ತಿ ರುತ್ ಮನೋರಮಾ, ಸಂಚಲನಾ ಬಳಗದ ರೀಟಾರೀನಿ ಹಾಗೂ ನಾವಿಕ ಸಂಸ್ಥೆಯ ಅಧ್ಯಕ್ಷ ಶಿವಕುಮಾರ್ ಇದ್ದಾರೆ. ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿದೆ

ಸಾಮಗ್ರಿಗಳು ಮೈಮೇಲೆ ಬಿದ್ದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸ್ತೂರ್ ಬಾ ರಸ್ತೆಯಲ್ಲಿ ಚಲಿಸುತ್ತಿದ್ದ ಕ್ಯಾಂಟರ್ ವಾಹನದಲ್ಲಿದ್ದ ಸಾಮಗ್ರಿಗಳು ಮೈ ಮೇಲೆ ಬಿದ್ದು ಉಮೇಶ್ (38) ಮೃತಪಟ್ಟಿದ್ದಾರೆ.

'ಕಾಕ್ಸ್‌ಟೌನ್ ನಿವಾಸಿ ಉಮೇಶ್, ಕಾರ್ಯಕ್ರಮ ಸಂಘಟನಾ ಏಜೆನ್ಸಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅವರ ಸಾವಿನ ಸಂಬಂಧ ತಾಯಿ ದೂರು ನೀಡಿದ್ದಾರೆ. ಸಾವಿಗೆ ಕಾರಣವಾದ ಆರೋಪದಡಿ ಏಜೆನ್ಸಿ ಮಾಲೀಕ ಅಜ್ಮದ್ ಪಾಷಾ, ವ್ಯವಸ್ಥಾಪಕ ರಮೇಶ್ ಹಾಗೂ ಕ್ಯಾಂಟರ್ ಚಾಲಕನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಕನಕಪುರ ರಸ್ತೆಯಲ್ಲಿ ಕಾರ್ಯಕ್ರಮವೊಂದನ್ನು ಆಯೋಜಿಸಲಾಗುತ್ತಿತ್ತು. ಇದರ ಸಂಘಟನೆ ಜವಾಬ್ದಾರಿಯನ್ನು ಏಜೆನ್ಸಿ ವಹಿಸಿಕೊಂಡಿತ್ತು. ಕಾರ್ಯಕ್ರಮಕ್ಕೆ ಅಗತ್ಯವಿದ್ದ ಸಾಮಗ್ರಿಗಳನ್ನು ಫ್ರೇಜರ್ ಟೌನ್‌ನಿಂದ ಕನಕಪುರ ರಸ್ತೆಗೆ ಡಿ. 1ರಂದು ಕ್ಯಾಂಟರ್ ವಾಹನದಲ್ಲಿ ಸಾಗಿಸಲಾಗುತ್ತಿತ್ತು. ವಾಹನದಲ್ಲಿ ಉಮೇಶ್ ಕುಳಿತುಕೊಂಡಿದ್ದರು' ಎಂದು ತಿಳಿಸಿದರು.

'ಕಸ್ತೂರ್ ಬಾ ರಸ್ತೆಯಲ್ಲಿ ಕ್ಯಾಂಟರ್ ವಾಹನ ಹೊರಟಿದ್ದಾಗ, ಸಾಮಗ್ರಿಗಳ ಸಮೇತ ಉಮೇಶ್ ರಸ್ತೆಗೆ ಬಿದ್ದಿದ್ದರು. ಇದೇ ಸಂದರ್ಭದಲ್ಲಿ ಉಮೇಶ್ ಮೈ ಮೇಲೆ ಸಾಮಗ್ರಿಗಳು ಬಿದ್ದಿದ್ದವು. ತೀವ್ರ ಗಾಯಗೊಂಡಿದ್ದ ಉಮೇಶ್ ಅವರನ್ನು ಸಮೀಪದ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಅವರು ಮಾರ್ಗಮಧ್ಯೆಯೇ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು' ಎಂದು ಪೊಲೀಸರು ವಿವರಿಸಿದರು.

ಶಾಲಾ ಬಸ್ ಚಾಲಕ ವಶಕ್ಕೆ

ಬೆಂಗಳೂರು: ನೋಂದಣಿ ಸಂಖ್ಯೆ ಫಲಕ ಮರೆಮಾಚಿದ್ದ ಶಾಲೆಯೊಂದರ ಬಸ್ ಚಾಲಕನನ್ನು ವೈಟ್‌ಫೀಲ್ಡ್ ಸಂಚಾರ ಪೊಲೀಸರು ವಶಕ್ಕೆ ಪಡೆದಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಾಗಿದೆ.

'ವೈಟ್‌ಫೀಲ್ಡ್ ಮುಖ್ಯರಸ್ತೆಯಲ್ಲಿ ಶಾಲಾ ಬಸ್ ಹೊರಟಿತ್ತು. ಅದರ ನೋಂದಣಿ ಸಂಖ್ಯೆ ಫಲಕವನ್ನು ಚಾಲಕ ಮರೆ ಮಾಚಿದ್ದ. ಅದನ್ನು ಗಮನಿಸಿದ್ದ ಸ್ಥಳೀಯ, ಫೋಟೊ ತೆಗೆದು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಫೋಟೊ ಆಧರಿಸಿ ತನಿಖೆ ಕೈಗೊಂಡು ಬಸ್ ಪತ್ತೆ ಮಾಡಲಾಗಿದೆ. ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ಚಾಲಕನ ವಿರುದ್ಧ ವೈಟ್‌ಫೀಲ್ಡ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ತಿಳಿಸಿವೆ.

'ದೇಶದಲ್ಲಿ ಹಾಲಿನ ಉತ್ಪಾದನೆ ಪ್ರಮಾಣ ಕಡಿಮೆ'

ಬೆಂಗಳೂರು: 'ವಿಶ್ವದ ಸರಾಸರಿ ಹಾಲು ಉತ್ಪಾದನೆಗೆ ಹೋಲಿಸಿದರೆ ಭಾರತದ ಸರಾಸರಿ ಹಾಲಿನ ಉತ್ಪಾದನೆ ಪ್ರಮಾಣ ಕಡಿಮೆ ಇದೆ' ಎಂದು ಭಾರತೀಯ ಹುಲ್ಲುಗಾವಲು, ಮೇವು ಸಂಶೋಧನಾ ಸಂಸ್ಥೆಯ ನಿರ್ದೇಶಕ ಅಮರೇಶ ಚಂದ್ರ ಹೇಳಿದರು.

ನಗರದ ಜಿಕೆವಿಕೆ ಆವರಣದಲ್ಲಿ ಶನಿವಾರ ನಡೆದ 'ಸುಸ್ಥಿರ ಪರಿಸರ ಸ್ನೇಹಿ ಹುಲ್ಲುಗಾವಲು, ಮೇವು ಮತ್ತು ಪ್ರಾಣಿ ವಿಜ್ಞಾನ ನಾವೀನ್ಯತೆಯಿಂದ ಭವಿಷ್ಯದ ಘೋಷಣೆ' ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ದೇಶದಲ್ಲಿ ಉತ್ಕೃಷ್ಟ ಮೇವು, ರಸಮೇವು, ಪಶು ಆಹಾರ ಹಾಗೂ ಆಧುನಿಕ ತಾಂತ್ರಿಕತೆಗಳ ಕೊರತೆಯಿಂದ ಹಾಲಿನ ಉತ್ಪಾದನೆಯ ಪ್ರಮಾಣ ಕುಸಿದಿದೆ. ಪ್ರಸ್ತುತ ದೇಶದಾದ್ಯಂತ 20 ದಶಲಕ್ಷ ಹೆಕ್ಟೇರ್ ಹುಲ್ಲುಗಾವಲು ಇದ್ದರೂ ಶೇ 12ರಷ್ಟು ಹಸಿಮೇವು, ಶೇ 23ರಷ್ಟು ಒಣಮೇವು ಹಾಗೂ ಶೇ 24ರಷ್ಟು ಪಶು ಆಹಾರದ ಕೊರತೆ ಇದೆ' ಎಂದು ಹೇಳಿದರು.

ಪತ್ತೆಯಾಗದ ಸಿ.ಪಿ. ಯೋಗೇಶ್ವರ್ ಭಾವ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಶನಿವಾರ ಬೆಳಿಗ್ಗೆಯಿಂದ ನಾಪತ್ತೆಯಾಗಿರುವ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರ ಭಾವ ಮಹದೇವಯ್ಯ ಅವರ ಬಗ್ಗೆ ಭಾನುವಾರ ಸಂಜೆಯಾದರೂ ಯಾವುದೇ ಸುಳಿವು ಪತ್ತೆಯಾಗಿಲ್ಲ.

ಮಹದೇವಯ್ಯ ಅವರು ತಾಲ್ಲೂಕಿನ ಚಕ್ಕೆರೆ ಗ್ರಾಮದ ತಮ್ಮ ತೋಟದ ಮನೆಯಿಂದ ನಾಪತ್ತೆಯಾಗಿದ್ದರು. ಮನೆಯಲ್ಲಿಯ ವಸ್ತುಗಳ ಚೆಲ್ಲಾಪಿಲ್ಲಿ, ದಾಖಲೆಗಳ ಹುಡುಕಾಟ ಗಮನಿಸಿ ಮಹದೇವಯ್ಯ ಅಪಹರಣವಾಗಿರುವ ಬಗ್ಗೆ ಶಂಕೆ ವ್ಯಕ್ತವಾಗಿತ್ತು. ಅವರ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಈ ಬಗ್ಗೆ ಮಹದೇವಯ್ಯ ಅವರ ಪುತ್ರ ಪ್ರಶಾಂತ್ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಘಟನೆಗೆ ಸಂಬಂಧಿಸಿದಂತೆ ಭಾನುವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕರಿ ಕಾರ್ತಿಕ್ ರೆಡ್ಡಿ ಅವರು ಚನ್ನಪಟ್ಟಣ ಡಿವೈಎಸ್ಪಿ ಕಚೇರಿಗೆ ತೆರಳಿ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದರು. ಮಹದೇವಯ್ಯ ಅವರ ಪತ್ತೆಗೆ ಡಿವೈಎಸ್ಪಿ ಗಿರೀಶ್ ನೇತೃತ್ವದಲ್ಲಿ ಐದು ವಿಶೇಷ ತನಿಖಾ ತಂಡ ರಚಿಸಿದ್ದಾರೆ.

'ಪ್ರಕರಣದ ಸಂಪೂರ್ಣ ತನಿಖೆ ನಡೆಸಲಾಗುತ್ತಿದೆ. ಮೊಬೈಲ್ ಸ್ವಿಚ್ ಆಫ್ ಆಗಿದೆ. ಜೊತೆಗೆ ಅವರ ಕಾರು ಸಹ ಪತ್ತೆಯಾಗಿಲ್ಲ. ನಿರಂತರವಾಗಿ ಮೊಬೈಲ್ ಲೊಕೇಷನ್ ಪರಿಶೀಲನೆ ನಡೆಸಲಾಗುತ್ತಿದೆ. ಅವರ ಮನೆಯಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾ ಕೆಟ್ಟಿರುವ ಕಾರಣ ಅಕ್ಕಪಕ್ಕದಲ್ಲಿ ಇರುವ ಸಿ.ಸಿ. ಟಿವಿಗಳನ್ನು ಪರಿಶೀಲನೆ ನಡೆಸುತ್ತಿದ್ದೇವೆ. ಎಲ್ಲಾ ಆಯಾಮದಲ್ಲಿಯೂ ತನಿಖೆ ನಡೆಸಲಾಗುತ್ತಿದ್ದು, ಶೀಘ್ರವೇ ಪ್ರಕರಣ ಬೇಧಿಸಲಾಗುವುದು' ಎಂದು ಎಸ್ಪಿ ಕಾರ್ತಿಕ್ ರೆಡ್ಡಿ ತಿಳಿಸಿದರು.

ನವ ವಿವಾಹಿತೆ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೀತಿಸಿದ್ದ ಹುಡುಗನನ್ನು ಎರಡು ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದ ಅನುಷಾ (23) ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ನೇಣು ಬಿಗಿದ ಸ್ಥಿತಿಯಲ್ಲಿ ಅವರ ಮೃತದೇಹ ಪತ್ತೆಯಾಗಿದೆ.

'ಮಂಡ್ಯ ಜಿಲ್ಲೆಯ ಅನುಷಾ, ಪ್ರವೀಣ್ ಅವರನ್ನು ಪ್ರೀತಿಸಿ ಮದುವೆಯಾಗಿದ್ದರು. ಮಹದೇವಪುರ ಠಾಣೆ ವ್ಯಾಪ್ತಿಯ ಸಿಂಗಯ್ಯಪಾಳ್ಯದಲ್ಲಿ ದಂಪತಿ ನೆಲೆಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತಿ ಮನೆಯವರು ಅನುಷಾ ಅವರಿಗೆ ವರದಕ್ಷಿಣೆ ತರುವಂತೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತ ಅನುಷಾ, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ. ಪೋಷಕರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.



ನಟಿ ಲೀಲಾವತಿ ಅವರ ನಿವಾಸಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಭೇಟಿ ನೀಡಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿದರು

'ನಟಿ ಲೀಲಾವತಿಯವರ ಚಿಕಿತ್ಸಾ ವೆಚ್ಚ ಭರಿಸಲಿದೆ ಸರ್ಕಾರ'

ಪ್ರಜಾವಾಣಿ ವಾರ್ತೆ

ನೆಲಮಂಗಲ: ನಟಿ ಲೀಲಾವತಿಯವರನ್ನು ಆಸ್ಪತ್ರೆಗೆ ಸೇರಿಸಿದರೆ ಅವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸೋಲದೇವನಹಳ್ಳಿಯಲ್ಲಿ ಲೀಲಾವತಿ ಅವರ ನಿವಾಸಕ್ಕೆ ಭೇಟಿ ನೀಡಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

'ಲೀಲಾವತಿಯವರು ಒಬ್ಬ ನೈಜ ಪ್ರತಿಭೆಯಿದ್ದ ಕಲಾವಿದೆ. ಅವರ ಮಗ ವಿನೋದ್ ರಾಜ್ ಕೂಡ ಚೆನ್ನಾಗಿ ನೋಡಿಕೊಳ್ಳಲಿ ಎಂದು ಹೇಳಿದ್ದೇನೆ. ಸರ್ಕಾರದಿಂದ ಏನೇ ಸಹಾಯ ಬೇಕಿದ್ದರೂ ಒದಗಿಸುವುದಾಗಿ ತಿಳಿಸಿದ್ದೇನೆ' ಎಂದರು.

ಅಸಭ್ಯ ವರ್ತನೆ: ಪ್ರಾಂಶುಪಾಲ ವಿರುದ್ಧ ಪ್ರಕರಣ

ಬೆಂಗಳೂರು: ಕಾಲೇಜಿನಲ್ಲಿ ನಡೆದ ಗಲಾಟೆ ವಿಚಾರವಾಗಿ ವಿದ್ಯಾರ್ಥಿನಿಯೊಬ್ಬರಿಂದ ಬಸ್ಕಿ ಹೊಡೆಸಿ ಅಸಭ್ಯವಾಗಿ ವರ್ತಿಸಿದ್ದ ಆರೋಪದಡಿ ಪ್ರಾಂಶುಪಾಲ ಹಾಗೂ ವಿಭಾಗದ ಮುಖ್ಯಸ್ಥ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಠಾಣೆ ವ್ಯಾಪ್ತಿಯ ಕಾಲೇಜೊಂದರಲ್ಲಿ ಓದುತ್ತಿರುವ 16 ವರ್ಷ ವಯಸ್ಸಿನ ವಿದ್ಯಾರ್ಥಿನಿ ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಬಾಲ ನ್ಯಾಯ ಕಾಯ್ದೆ ಹಾಗೂ ಲೈಂಗಿಕ ದೌರ್ಜನ್ಯ ಆರೋಪದಡಿ ಪ್ರಾಂಶುಪಾಲ ಹಾಗೂ ವಿಭಾಗದ ಮುಖ್ಯಸ್ಥರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಇಬ್ಬರನ್ನೂ ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾಲೇಜು ವಿದ್ಯಾರ್ಥಿಗಳ ಎರಡು ಗುಂಪಿನ ನಡುವೆ ಗಲಾಟೆ ಆಗಿತ್ತು. ಈ ಸಂಬಂಧ ಸಂತ್ರಸ್ತ ವಿದ್ಯಾರ್ಥಿನಿಯನ್ನು ನಿಂದಿಸಿದ್ದ ಆರೋಪಿಗಳು, ಸಹಪಾಠಿಗಳ ಎದುರು ಬಸ್ಕಿ ಹೊಡೆಸಿದ್ದರು. ವಿಡಿಯೊ ಚಿತ್ರೀಕರಣ ಮಾಡಿ ಪೋಷಕರಿಗೆ ತೋರಿಸಿದ್ದರು. ವಿದ್ಯಾರ್ಥಿನಿ ಜೊತೆ ಅಸಭ್ಯವಾಗಿ ವರ್ತಿಸಿದ್ದರೆಂದು ಹೇಳಲಾಗಿದೆ.'

'ಶಾಲಾ ವರ್ಗಾವಣೆ ಪತ್ರ (ಟಿ.ಸಿ) ನೀಡುವುದಾಗಿ ಆರೋಪಿಗಳು ಬೆದರಿಸಿದ್ದರು. ಇದರಿಂದ ನೊಂದ ವಿದ್ಯಾರ್ಥಿನಿ ಠಾಣೆಗೆ ದೂರು ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಕಾರಿಗೆ ಡಿಕ್ಕಿ: ಸವಾರನಿಗೆ ಭವಾನಿ ರೇವಣ್ಣ ತರಾಟೆ

ಪ್ರಜಾವಾಣಿ ವಾರ್ತೆ



ಭವಾನಿ ರೇವಣ್ಣ

ಮೈಸೂರು: ದ್ವಿಚಕ್ರ-ವಾಹನದಲ್ಲಿ ಬಂದು ತಮ್ಮ ಕಾರಿಗೆ ಡಿಕ್ಕಿ ಮಾಡಿದ ವ್ಯಕ್ತಿಯನ್ನು ಜೆಡಿಎಸ್ ನಾಯಕಿ ಭವಾನಿ ರೇವಣ್ಣ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಭಾನುವಾರ ಹರಿದಾಡಿದೆ.

ಅವರು ಸಾಲಿಗ್ರಾಮದಿಂದ ಹೊಳೆನರಸೀಪುರಕ್ಕೆ ಪ್ರಯಾಣಿಸುತ್ತಿದ್ದಾಗ ರಾಂಪುರ ಗ್ರಾಮದ ಗೇಟ್‌ನಲ್ಲಿ ಘಟನೆ ನಡೆದಿದೆ. ಇದರಿಂದ ಕೆಂಡಾಮಂಡಲವಾದ ಭವಾನಿ, 'ಸುಟ್ರು ಹಾಕ್ರೋ ಈ ಗಾಡಿನ' ಎಂದು ಅವಾಚ್ಯ ಶಬ್ದಗಳಿಂದ ರೇಗಾಡಿದ್ದಾರೆ. 'ಅಂತಹ ಅರ್ಜೆಂಟ್ ಏನಿತ್ತು? ಗಾಡಿಗೆ ಎಷ್ಟು ಡ್ಯಾಮೇಜ್ ಆಗಿದೆ, ರೆಡಿ ಮಾಡಿಸುವುದು ಹೇಗೆ?' ಎಂದು ಕೇಳಿದ್ದಾರೆ.

ಮಧ್ಯಪ್ರವೇಶಿಸಿದ ಸ್ಥಳೀಯರನ್ನು, 'ಕೊಡ್ತಿಯಾ ₹ 50 ಲಕ್ಷ ರಿಪೇರಿ ಮಾಡ್ಸಕ್ಕೇ, ದುಡ್ಡ್ ಕೊಡಂಗಿದ್ರೆ ನ್ಯಾಯ ಮಾತಾಡಕ್ಕ್ ಬನ್ನಿ' ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಸವಾರನ ಮೊಬೈಲ್ ಫೋನ್ ಕಸಿದುಕೊಂಡು, ಗಾಡಿ ಸೀಜ್ ಮಾಡು. ಸಾಲಿಗ್ರಾಮ ಎಸ್‌ಐ ಬರೋಕೆ ಹೇಳಿ' ಎಂದು ಸಹಾಯಕರಿಗೆ ತಿಳಿಸಿರುವುದು ವಿಡಿಯೊದಲ್ಲಿದೆ.

'₹ 1.50 ಕೋಟಿ ಗಾಡಿ ಇದು. ಡ್ಯಾಮೇಜ್ ಮಾಡಿಟ್ಟವ್ನಲ್ಲ, ದೇಶ ಮುಳುಗಿ ಹೋಗಿತ್ತಾ, ರೈಟಲ್ಲಿ ಬಂದು ಗುದ್ದಿದ್ದೀಯಲ್ಲಾ. ಸಾಯಂಗಿದ್ರೆ ಬಸ್‌ಗೆ ಸಿಕ್ಕಾಕೊಂಡು ಸಾಯಬೇಕಿತ್ತು. ನನ್ನ ಕಾರ್ ಡ್ಯಾಮೇಜ್ ಮಾಡೋಕೆ ನೀನ್ಯಾವನು?' ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. 'ಅವ್ನು ಸತ್ತೋಯ್ತನೆ ಅಂತ, ಅವ್ನ್ ಬಗ್ಗೆ ಯೋಚ್ನೆ ಮಾಡ್ತಾ ಇದ್ದೀಯಲ್ಲಾ, ಒಂದೂವರೆ ಕೋಟಿ ರೂಪಾಯಿ ಗಾಡಿ ಡ್ಯಾಮೇಜ್ ಯಾರ್ ಕಟ್ಕೊಡ್ತಾರೆ?' ಎಂದೂ ಸ್ಥಳೀಯರನ್ನು ಕೋಪದಿಂದ ಕೇಳಿದ್ದಾರೆ.

ಸವಾರ ಹಾಗೂ ಜೊತೆಗಿದ್ದವರನ್ನು ಕಾರ್ ಹಾಗೂ ದ್ವಿಚಕ್ರವಾಹನದ ಬಳಿ ನಿಲ್ಲಿಸಿ ತಮ್ಮ ಮೊಬೈಲ್ ಫೋನ್‌ನಲ್ಲಿ ಫೋಟೊ ತೆಗೆದುಕೊಂಡಿದ್ದಾರೆ.

ಸಿಪಿಐ ಜಿ.ಕೃಷ್ಣರಾಜು ಸ್ಥಳಕ್ಕೆ ಭೇಟಿ ನೀಡಿದ್ದರು. ತಂದ್ರೆಕೊಪ್ಪಲು ಗ್ರಾಮದ ಶಿವಣ್ಣ ಅವರ ವಿರುದ್ಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳಾ ಪಿಎಸ್‌ಐಗೆ ಜೀವ ಬೆದರಿಕೆ ಮೂವರ ಬಂಧನ

ಬೆಂಗಳೂರು: ಅವಧಿ ಮೀರಿ ಹೋಟೆಲ್ ತೆರೆದಿದ್ದನ್ನು ಪ್ರಶ್ನಿಸಿದ್ದ ಮಹಿಳಾ ಪಿಎಸ್‌ಐ ಜೊತೆ ಅನುಚಿತವಾಗಿ ವರ್ತಿಸಿ ಜೀವ ಬೆದರಿಕೆಯೊಡ್ಡಿದ್ದ ಮೂವರು ಆರೋಪಿಗಳನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮುದ್ದಿನಪಾಳ್ಯ ಮುಖ್ಯ ರಸ್ತೆಯಲ್ಲಿರುವ ಅಶ್ವ ಹೋಟೆಲ್ ಮಾಲೀಕ ಸಂಜೀವ್ ಗೌಡ, ಕ್ಯಾಷಿಯರ್ ಸಂದೀಪ್ ಕುಮಾರ್, ಹೇಮಂತ್ ಬಂಧಿತರು. ಮೂವರು ಮಹಿಳಾ ಪಿಎಸ್‌ಐ ಪ್ರತಿಮಾ ಅವರಿಗೆ ಜೀವ ಬೆದರಿಕೆಯೊಡ್ಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಡಿ. 1ರಂದು ರಾತ್ರಿ ಪಿಎಸ್‌ಐ ಪ್ರತಿಮಾ ಗಸ್ತಿನಲ್ಲಿದ್ದರು. ತಡರಾತ್ರಿ 1:30 ಗಂಟೆಯಾದರೂ ಹೋಟೆಲ್ ತೆರೆದಿತ್ತು. ಅದನ್ನು ಪ್ರಶ್ನಿಸಿದ್ದ ಪ್ರತಿಮಾ, ಹೋಟೆಲ್ ಬಂದ್ ಮಾಡಲು ಸೂಚಿಸಿದ್ದರು. ಅದಕ್ಕೆ ಒಪ್ಪದ ಮಾಲೀಕ ಹಾಗೂ ಇತರರು, '24 ಗಂಟೆಯೂ ಹೋಟೆಲ್ ತೆರೆಯಲು ಅನುಮತಿ ಇದೆ' ಎಂದು ವಾದಿಸಿದ್ದರು. ಒತ್ತಾಯದಿಂದ ಹೋಟೆಲ್ ಬಂದ್ ಮಾಡಿಸಿದರೆ ಪರಿಣಾಮ ನೆಟ್ಟಗಿರುವುದಿಲ್ಲವೆಂದು ಬೆದರಿಕೆಯೊಡ್ಡಿದ್ದರು.'

'ವಿಷಯ ತಿಳಿದು ಸ್ಥಳಕ್ಕೆ ಹೋಗಿದ್ದ ಹೆಚ್ಚುವರಿ ಸಿಬ್ಬಂದಿ ಆರೋಪಿಗಳನ್ನು ಬಂಧಿಸಿದೆ. ಮೂವರು ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ, ಅಧಿಕಾರಿಗಳ ಸಂಚಾರಕ್ಕಾಗಿ ಸಾರ್ವಜನಿಕರ ವಾಹನಗಳಿಗೆ ತಡೆ

ತುಮಕೂರು ರಸ್ತೆಯಲ್ಲಿ ದಟ್ಟಣೆ, ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅಧಿಕಾರಿಗಳು ಸಂಚಾರಕ್ಕೆಂದು ತುಮಕೂರು ರಸ್ತೆಯಲ್ಲಿ ಸಾರ್ವಜನಿಕರ ವಾಹನಗಳನ್ನು ತಡೆದು ನಿಲ್ಲಿಸಿದ್ದರಿಂದ ವಿಪರೀತ ದಟ್ಟಣೆ ಉಂಟಾಯಿತು.

ನೆಲಮಂಗಲದಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹಾಗೂ ಸೋಲದೇವನಹಳ್ಳಿಯಲ್ಲಿ ನಟಿ ಲೀಲಾವತಿ ಅವರ ಆರೋಗ್ಯ ವಿಚಾರಿಸಲೆಂದು ಸಿದ್ದರಾಮಯ್ಯ ಅವರು ಹೊರಟಿದ್ದರು.

ಮುಖ್ಯಮಂತ್ರಿ ವಾಹನ ಸಂಚಾರಕ್ಕೆ ಅನುಕೂಲ ಕಲ್ಪಿಸಲೆಂದು ಪೊಲೀಸರು, ರಾಷ್ಟ್ರೀಯ ಹೆದ್ದಾರಿ ಹಾಗೂ ಒಳ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳನ್ನು ತಡೆದು ನಿಲ್ಲಿಸಿದ್ದರು. ಇದರಿಂದಾಗಿ ನೆಲಮಂಗಲ ಟೋಲ್‌ಗೇಟ್ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ವಾಹನಗಳು ನಿಂತಲೇ ನಿಂತಿದ್ದರಿಂದ ಜನರು ಪರದಾಡಿದರು.

'ತುಮಕೂರು ರಸ್ತೆಯಲ್ಲಿ ನಿತ್ಯವೂ ಲಕ್ಷಾಂತರ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತವೆ. ಇಂಥ ರಸ್ತೆಯಲ್ಲಿ 25 ನಿಮಿಷ ವಾಹನಗಳ ಸಂಚಾರ ತಡೆಯಲಾಗಿತ್ತು. ಇದರಿಂದಾಗಿ ದಟ್ಟಣೆ ಉಂಟಾಗಿ ತೊಂದರೆ ಆಯಿತು' ಎಂದು ಕಾರು ಚಾಲಕ ನವೀನ್ ಅಳಲು ತೋಡಿಕೊಂಡರು.

ವಾಗ್ವಾದ: 'ಸಿಗ್ನಲ್ ಮುಕ್ತ ಸಂಚಾರ ಬೇಡ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿಕೊಂಡಿದ್ದರು. ಆದರೆ, ಅವರ ಸಂಚಾರಕ್ಕಾಗಿ ಪೊಲೀಸರು ವಾಹನ ತಡೆದು ನಿಲ್ಲಿಸಿದ್ದಕ್ಕೆ ಜನರು ಆಕ್ರೋಶ ವ್ಯಕ್ತಪಡಿಸಿದರು. ಇದರಿಂದಾಗಿ ಪೊಲೀಸರು ಹಾಗೂ ಜನರ ನಡುವೆ ವಾಗ್ವಾದ ನಡೆಯಿತು. ಹಿರಿಯ ಅಧಿಕಾರಿಗಳು ಪರಿಸ್ಥಿತಿ ತಿಳಿಗೊಳಿಸಿದರು.



ನೆಲಮಂಗಲ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಉಂಟಾಗಿದ್ದ ದಟ್ಟಣೆಯಲ್ಲಿ ಸಾಲುಗಟ್ಟಿ ನಿಂತಿದ್ದ ವಾಹನಗಳು



ಸಾಹಿತ್ಯ ಉತ್ಸವದಲ್ಲಿ ಭಾಗವಹಿಸಿದ್ದ ಮಕ್ಕಳು ಕಥೆಗಳನ್ನು ಕೇಳಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬಹುಭಾಷಿಕ ಜಗತ್ತಿನ ಸಾಹಿತ್ಯ ಹಬ್ಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯ, ಸಿನಿಮಾ, ರಾಜಕೀಯ, ವಿಜ್ಞಾನ, ಭಾಷೆ, ಕ್ರೀಡೆಗಳಂಥ ಹಲವು ವಿಷಯಗಳ ಬಗ್ಗೆ ಒಳನೋಟಗಳಿಂದ ಕೂಡಿದ ಚರ್ಚೆ–ಸಂವಾದಗಳಿಗೆ ವೇದಿಕೆಯಾದ ಬೆಂಗಳೂರು ಸಾಹಿತ್ಯೋತ್ಸವದ 12ನೇ ಆವೃತ್ತಿ ಭಾನುವಾರ ಸಂಪನ್ನವಾಯಿತು.

ಬೆಂಗಳೂರು ಲಿಟೇರಚರ್ ಫೆಸ್ಟ್ (ಬಿಎಲ್‌ಎಫ್) ಸಮಿತಿ ಆಯೋಜಿಸಿದ್ದ ಈ ಉತ್ಸವಕ್ಕೆ ಎರಡನೇ ದಿನವೂ ಸಾಹಿತ್ಯಾಸಕ್ತರಿಂದ ಉತ್ತಮ ಸ್ಪಂದನೆ ದೊರೆಯಿತು. ಐದು ವೇದಿಕೆಗಳಲ್ಲಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಲೋಕದ ಆಗುಹೋಗುಗಳ ಬಗ್ಗೆ ಒಂದೆಡೆ ಚಿಂತನ ಮಂಥನ ನಡೆದರೆ, ಇನ್ನೊಂದೆಡೆ ಹೊಸ ಪುಸ್ತಕಗಳ ಹೂರಣಗಳ ಬಗ್ಗೆ ಅವಲೋಕನ ನಡೆಯಿತು. ಮಕ್ಕಳ ಕಲರವ ಉತ್ಸವದ ಮೆರಗನ್ನು ಹೆಚ್ಚಿಸಿತು.

ಹಿಂದೂಸ್ಥಾನಿ ಸಂಗೀತ, ಯಕ್ಷಗಾನ ತಾಳಮದ್ದಳೆಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರನ್ನು ರಂಜಿಸಿತು. ನಗರದ ವಿವಿಧೆಡೆಯಿಂದ ಬಂದ ಸಾಹಿತ್ಯಾಸಕ್ತರು, ಬೆಳಿಗ್ಗೆಯಿಂದ ಸಂಜೆಯವರೆಗೆ ಉತ್ಸಾಹದಿಂದ ಗಹನವಾದ ಚರ್ಚೆಗಳನ್ನು ಆಲಿಸಿದರು. ದೇಶದ ವಿವಿಧೆಡೆಗಳಿಂದ ಬಂದಿದ್ದ ವಿದ್ವಾಂಸರು, ಲೇಖಕರು ಹಾಗೂ ವಿವಿಧ ಕ್ಷೇತ್ರಗಳ ಪ್ರಮುಖರು ಹಂಚಿಕೊಂಡ ಹೊಳಹುಗಳ ಬೆಳಕಿನೊಂದಿಗೆ ಈ ಉತ್ಸವ ಕಳೆಗಟ್ಟಿತು. ತಮ್ಮಿಷ್ಟದ ಸಾಹಿತಿಗಳ ಮಾತುಗಳನ್ನು ಆಲಿಸಿದ ಅಭಿಮಾನಿ ಬಳಗ, ಪುಸ್ತಕಗಳಿಗೆ ಅವರ ಹಸ್ತಾಕ್ಷರಗಳನ್ನು ಪಡೆದುಕೊಂಡಿತು.

ಮಕ್ಕಳಿಗೆ ಪ್ರತ್ಯೇಕವಾಗಿ ನಾಲ್ಕು ವೇದಿಕೆಗಳನ್ನು ರೂಪಿಸಲಾಗಿತ್ತು. ಮಕ್ಕಳ ಜತೆಗೆ ಸಂಭಾಷಣೆ ನಡೆಸಿದ ಲೇಖಕರು, ಕಥೆಗಳನ್ನು ಹೇಳಿ ರಂಜಿಸಿದರು. ಅಮರ ಚಿತ್ರಕಥಾ ರಸಪ್ರಶ್ನೆ, ವಿವಿಧ ಮನೋರಂಜನೆಯ ಕಾರ್ಯಕ್ರಮಗಳನ್ನು ಮಕ್ಕಳಿಗಾಗಿ ಆಯೋಜಿಸಲಾಗಿತ್ತು.

'ಕನ್ನಡ ಕಿರುಪತ್ರಿಕೆಗಳು' ಗೋಷ್ಠಿಯಲ್ಲಿ ಪ್ರತಿಧ್ವನಿಸಿದ ವಿಮರ್ಶೆಯ ಸವಾಲುಗಳು

'ಲೇಖಕರಿಗೆ ವಸ್ತುನಿಷ್ಠ ವಿಮರ್ಶೆ ಬೇಡ!'

• ಮಂಜುಶ್ರೀ ಎಂ. ಕಡಕೋಳ



12ನೇ ಆವೃತ್ತಿಯ ಬೆಂಗಳೂರು ಸಾಹಿತ್ಯೋತ್ಸವದಲ್ಲಿನ 'ಕನ್ನಡದಲ್ಲಿ ಕಿರುಪತ್ರಿಕೆಗಳು' ವಿಚಾರಗೋಷ್ಠಿಯಲ್ಲಿ ಕೆ.ವಿ.ಅಕ್ಷರ, ವಿವೇಕ ಶಾನಭಾಗ, ಸಿರಾಜ್ ಅಹಮದ್, ಟಿ.ಎಸ್. ಗೊರವರ ಪಾಲ್ಗೊಂಡಿದ್ದರು

ಬೆಂಗಳೂರು: 'ಕನ್ನಡದಲ್ಲಿ ಲೇಖಕರು ತಮ್ಮ ಕೃತಿಗಳ ವಸ್ತುನಿಷ್ಠ ವಿಮರ್ಶೆಯನ್ನು ಸ್ವೀಕರಿಸುತ್ತಿಲ್ಲ' ಎಂದು 'ಅಕ್ಷರ ಸಂಗಾತ' ಸಾಹಿತ್ಯ ಮಾಸಪತ್ರಿಕೆಯ ಸಂಪಾದಕ ಟಿ.ಎಸ್. ಗೊರವರ ಅಭಿಪ್ರಾಯಪಟ್ಟರು.

ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಭಾನುವಾರ ನಡೆದ 'ಕನ್ನಡದಲ್ಲಿ ಕಿರುಪತ್ರಿಕೆಗಳು' ಗೋಷ್ಠಿಯಲ್ಲಿ ಲೇಖಕ ವಿವೇಕ ಶಾನಭಾಗ ಅವರ 'ಇಂದಿನ ವಾತಾವರಣದಲ್ಲಿ ವಸ್ತುನಿಷ್ಠ ವಿಮರ್ಶೆ ಕಡಿಮೆಯಾಗುತ್ತಿದೆಯೇ' ಪ್ರಶ್ನೆಗೆ ಉತ್ತರಿಸಿದ ಅವರು, 'ವಸ್ತುನಿಷ್ಠ ವಿಮರ್ಶೆ ಕಡಿಮೆಯಾಗುತ್ತಿದೆ ಅನ್ನುವುದಕ್ಕಿಂತ, ಅಂಥ ವಿಮರ್ಶೆಯನ್ನು ಲೇಖಕರು ಸ್ವೀಕರಿಸುತ್ತಿಲ್ಲ. ಬಹು ತೇಕ ಲೇಖಕರಲ್ಲಿ ನಿಷ್ಠುರವಾದ ವಿಮರ್ಶೆಯನ್ನು ತಾಳಿಕೊಳ್ಳುವ ಸಹನೆಯ ಗುಣವೇ ಇಲ್ಲದಂತಾಗಿದೆ. ಪಿ. ಲಂಕೇಶ್ ಅವರ ಕಾಲಘಟ್ಟದಲ್ಲಿ ಬಂದಂಥ ಕಟು ವಿಮರ್ಶೆಯನ್ನು ಈ ಕಾಲಘಟ್ಟದಲ್ಲಿ ಮಾಡಿ ದಕ್ಕಿಸಿಕೊಳ್ಳುವುದು ಕಷ್ಟ' ಎಂದರು.

'ನಮ್ಮ ಪತ್ರಿಕೆಗೆ ಒಬ್ಬರು ವಾಟ್ಸ್‌ಆ್ಯಪ್ ಮೂಲಕ ಪುಸ್ತಕವೊಂದರ ವಿಮರ್ಶೆ ಕಳಿಸಿದ್ದರು. ಅದರ ಬೆನ್ನಲ್ಲೇ ಪರಿಚಿತ ಹಿರಿಯರೊಬ್ಬರಿಂದ ಕರೆಯೂ ಬಂದಿತು. ವಿಮರ್ಶೆ ಓದಿದ ಬಳಿಕ ಪುಸ್ತಕದ ಮುಖಪುಟದ ಚಿತ್ರವನ್ನು ಕಳಿಸಲು ತಿಳಿಸಿದೆ. ಸೋಜಿಗವೆಂದರೆ ಇನ್ನೂ ಆ ಪುಸ್ತಕವೇ ಪ್ರಕಟವಾಗಿರಲಿಲ್ಲ. ಆದರೆ, ವಿಮರ್ಶೆ ಬಂದಿತ್ತು. ಬರಹ ಅನ್ನುವುದು ಲೇಖಕನ ಒಳಗಿನ ತುಡಿತ. ಆದರೆ, ಈಚೆಗೆ ಲೇಖಕರು ಕೀರ್ತಿ, ಪ್ರಶಸ್ತಿಗಳನ್ನೇ ಹೆಚ್ಚು ಬಯಸುತ್ತಿದ್ದಾರೆ. ವಸ್ತುನಿಷ್ಠ ವಿಮರ್ಶೆಯೂ ಬೇಡವಾಗಿದೆ' ಎಂದರು.

ಪ್ರತಿಕ್ರಿಯಿಸಿದ 'ಬಹುವಚನ' ಕಿರುಪತ್ರಿಕೆಯ ಸಂಪಾದಕ, ಪ್ರಾಧ್ಯಾಪಕ ಸಿರಾಜ್ ಅಹಮದ್ ಅವರು, 'ವಿಮರ್ಶೆ ಅನ್ನುವ ಪ್ರಕಾರವೇ ದಿವಂಗತವಾಗಿದೆ. ವಿಮರ್ಶೆಯ ಮರಣವನ್ನು ವಿಮರ್ಶಕರೇ ತುದಿಗಾಲಿನಲ್ಲಿ ನಿಂತು ಘೋಷಿಸಿರಬಹುದು. ಅದಕ್ಕೆ ಸಕಾರ ಣವೂ ಇರಬಹುದು. ಆದರೆ ಇಂದು ವಸ್ತುನಿಷ್ಠ ವಿಮರ್ಶೆಯನ್ನು ಬರೆಯಲು ಯಾರೂ ತಯಾರಿಲ್ಲ' ಎಂದರು.

ಆಯೋಜಕರಿಗೆ ತರಾಟೆ: ಗೋಷ್ಠಿಯ ಆರಂಭ, ಮಧ್ಯದಲ್ಲಿ ಸಭಾಂಗಣದ ಮತ್ತೊಂದು ಮೂಲೆಯಿಂದ ಜನರ ಗುಸುಗುಸು ಶಬ್ದ ಕೇಳಿ ಲೇಖಕ ವಿವೇಕ ಶಾನಭಾಗ ಗರಂ ಆದರು. 'ಜನರನ್ನು ಅಲ್ಲಿಂದ ಕಳಿಸಿ' ಎಂದರು. ಕೆಲ ಹೊತ್ತಿನ ಬಳಿಕ ಮತ್ತೆ ಗುಸುಗುಸು ಶಬ್ದ ಕೇಳಿದಾಗ 'ಜನರ ಧ್ವನಿ ಕಡಿಮೆಯಾಗದ ಹೊರತು ಗೋಷ್ಠಿ ಮುಂದುವರಿಸುವುದಿಲ್ಲ' ಎಂದು ಆಯೋಜಕರನ್ನು ತರಾಟೆಗೆ ತೆಗೆದುಕೊಂಡರು. ವಾತಾವರಣ ನಿಶ್ಶಬ್ಧವಾದ ಬಳಿಕ ಗೋಷ್ಠಿಮುಂದುವರಿಸಿದರು.

ಕನ್ನಡದ ಲೇಖಕರ ಹಸ್ತಾಕ್ಷರಕ್ಕೆ ಕ್ಯೂ ಯಾವಾಗ: ಗೊರವರ ಪ್ರಶ್ನೆ

ಸಾಹಿತ್ಯೋತ್ಸವಕ್ಕೆ ಬಂದಿದ್ದ ಹತ್ತಾರು ಇಂಗ್ಲಿಷ್ ಭಾಷೆ ಲೇಖಕರ ಹಸ್ತಾಕ್ಷರ ಪಡೆಯಲು ಓದುಗರ ದೊಡ್ಡ ಸಾಲೇ ಇತ್ತು. ಆದರೆ, ಇದು ಕನ್ನಡ ಸಂದರ್ಭದಲ್ಲಿ ಕಷ್ಟ ಅನಿಸಿತು ಎಂದು ಲೇಖಕ ಟಿ.ಎಸ್. ಗೊರವರ ಬೇಸರಿಸಿದರು.

'ನಮ್ಮಲ್ಲಿ ಓದು ಮತ್ತು ಬರವಣಿಗೆಗಾಗಿಯೇ ಸಂಬಳ ಪಡೆಯುತ್ತಿರುವ ಶಿಕ್ಷಕರು, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು, ಪಿಎಚ್.ಡಿ ಸ್ಕಾಲರ್‌ಗಳಲ್ಲಿ ಓದುವಿಕೆಯೇ ಇಲ್ಲದಂತಾಗಿದೆ. ಇವರೆಲ್ಲರೂ ಹೆಚ್ಚು ಹೆಚ್ಚು ಓದಿದರೆ ಬರವಣಿಗೆ ಹೆಚ್ಚಾಗಿಯೂ ಚೆನ್ನಾಗಿಯೂ ಹುಟ್ಟಿಕೊಳ್ಳುತ್ತದೆ' ಎಂದರು.


ಸಾಹಿತ್ಯಕ ಜಗಳಗಳೇ ಇಲ್ಲ: ಅಕ್ಷರ

ಕನ್ನಡದಲ್ಲಿಯ ವಿಮರ್ಶೆಯನ್ನು 'ಸಾಕ್ಷಿ' ಕಡೆಯ ದಿನಗಳಿಂದಲೂ ಗಮನಿಸಿದ್ದೇನೆ. ಆಗ ಸಾಹಿತ್ಯ ಸಂಬಂಧ ಜಗಳಗಳು ನಡೆಯುತ್ತಿದ್ದವು. ಆದರೆ, ಈಗ ಅಂಥ ಜಗಳಗಳೇ ಇಲ್ಲ. ಈಗ ಆ ಕಡೆ ಒಬ್ಬರಿದ್ದರೆ, ಮತ್ತೊಂದು ಕಡೆ ಇನ್ನೊಬ್ಬರು ಮಾತಾಡುತ್ತಾರೆ. ಇಂಥ ವಾತಾವರಣದಲ್ಲಿ ವಿಮರ್ಶೆ ಹುಟ್ಟುವುದು ಕಷ್ಟ ಎಂದು 'ನೀನಾಸಂ ಮಾತುಕತೆ'ಯ ಸಂಪಾದಕ ಕೆ.ವಿ. ಅಕ್ಷರ ಬೇಸರಿಸಿದರು.

'ಇದು ವಿಮರ್ಶಕರ ಅಥವಾ ಓದುಗರ ಸಮಸ್ಯೆ ಅಲ್ಲ; ಸಂಸ್ಕೃತಿ, ಸಮಾಜಕ್ಕೆ ವ್ಯಾಪಿಸುತ್ತಿರುವ ರೋಗ ಇರಬಹುದು. ಇದು ಸಕಾರಾತ್ಮಕ ರೋಗವೂ ಆಗಿರಬಹುದೇನೋ? ಒಟ್ಟಿನಲ್ಲಿ ದೊಡ್ಡ ಬದಲಾವಣೆಯಂತೂ ಆಗುತ್ತಿದೆ. ಸಾಹಿತ್ಯ ಅನ್ನುವುದು ಮೊದಲು ಸಂವಹನೆ ಮತ್ತು ಪ್ರತಿಸ್ಪಂದನೆ ಆಗಿತ್ತು. ಆದರೆ, ಅದು ಈಗ ಉತ್ಪಾದನೆ ಮತ್ತು ಬಳಕೆ ಎಂಬುದಾಗಿ ವಿಸ್ತಾರವಾಗಿದೆ' ಎಂದು ಅಭಿಪ್ರಾಯಪಟ್ಟರು.

'ಮುಸ್ಲಿಮರಲ್ಲೂ ಜಾತಿಗಳಿವೆ: ಲೇಖಕ ಮುಜಾಫರ್'

ಪ್ರಜಾವಾಣಿ ವಾರ್ತೆ



ಮುಜಾಫರ್ ಅಸ್ಸಾದಿ

ಬೆಂಗಳೂರು: 'ಮುಸ್ಲಿಮರಲ್ಲೂ ಜಾತಿ ಶ್ರೇಣಿಕೃತ ವ್ಯವಸ್ಥೆ ಇದೆ. ಇದನ್ನು ಅವಗಣನೆ ಮಾಡಲು ಸಾಧ್ಯವಿಲ್ಲ' ಎಂದು ಲೇಖಕ ಮುಜಾಫರ್ ಅಸ್ಸಾದಿ ಅಭಿಪ್ರಾಯಪಟ್ಟರು.

ನಗರದಲ್ಲಿ ಭಾನುವಾರ ನಡೆದ ಬೆಂಗಳೂರು ಸಾಹಿತ್ಯೋತ್ಸವದಲ್ಲಿ 'ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ' ವಿಚಾರ ಗೋಷ್ಠಿಯಲ್ಲಿ ಪತ್ರಕರ್ತ ವಿಕಾರ್ ಅಹಮದ್ ಸಯೀದ್ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಭಾರತದ ಮುಸ್ಲಿಮರಲ್ಲಿ ಮೇಲ್ಜಾತಿ, ಕೆಳಜಾತಿ ಮತ್ತು ಹಿಂದುಳಿದ ಜಾತಿ ಎಂಬ ಮೂರು ವರ್ಗೀಕರಣವಿದೆ. ಕರ್ನಾಟಕಕ್ಕೆ ಸಂಬಂಧಿಸಿದ ವಸಾಹತುಶಾಹಿ ದಾಖಲೆಗಳು (ಬಾಂಬೆ ಮತ್ತು ಮದ್ರಾಸ್ ಪ್ರೆಸಿಡೆನ್ಸಿ, ಕೂರ್ಗ್ ಮುಖ್ಯ ಕಮಿಷನರೇಟ್) ಮುಸ್ಲಿಮರಲ್ಲಿನ ಜಾತಿಗಳನ್ನು ದಾಖಲಿಸಿವೆ ಎಂದರು.

ವಸಾಹತುಶಾಹಿಯ ಪೂರ್ವದಲ್ಲಿ ಜಾತಿಗೆ ಸಂಬಂಧಿಸಿದ ಯಾವುದೇ ದಾಖಲಾತಿ ಇರಲಿಲ್ಲ. ಆದರೆ, ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ನಡೆಸಿದ ಜನಗಣತಿಯಲ್ಲಿ ಮುಸ್ಲಿಮರ ಜಾತಿ ವ್ಯವಸ್ಥೆಯ ಬಗ್ಗೆ ದಾಖಲಿಸಲಾಗಿದೆ. ಹಿಂದೂಗಳ ಮೇಲೆ ಹಿಡಿತವನ್ನು ಸಾಧಿಸುವ ಗುರಿ ಹೊಂದಿದ್ದ ಬ್ರಿಟಿಷರು ಮುಸ್ಲಿಮರ ಮೇಲೂ ಹಿಡಿತ ಸಾಧಿಸಬಯಸಿದ್ದರು. ಅದರ ಭಾಗವಾಗಿಯೇ ಈ ಸಮುದಾಯದಲ್ಲಿ ಜಾತಿ ಶ್ರೇಣೀಕರಣವನ್ನು ದಾಖಲಿಸಿದ್ದರು ಎಂದು ಹೇಳಿದರು. ಇಂದಿನ ಮೀಸಲಾತಿ ಸಂದರ್ಭದಲ್ಲಿ ಮುಸ್ಲಿಮರು ತಮ್ಮೊಳಗಿನ ಜಾತಿಗಳನ್ನು ಅವಗಣನೆ ಮಾಡಬಾರದು. ಹಾಗೆ ಮಾಡಿದರೆ ಈ ಸಮುದಾಯವು ಧಾರ್ಮಿಕ ಗುಂಪಾಗಿ ಗುರುತಾಗುತ್ತದೆ. ಧರ್ಮ ಬೇರೆಯಾಗಿದ್ದರೂ ಮುಸ್ಲಿಮರಲ್ಲಿನ ಜಾತಿಗಳು ಭಾರತೀಯತೆಯಿಂದಲೇ ರೂಪುಗೊಂಡಿವೆ ಎಂಬುದನ್ನು ನಿರಾಕರಿಸಲಾಗದು. ಮುಸ್ಲಿಮರು ಜಾತಿಯ ಹಕ್ಕನ್ನು ಪಡೆಯಬೇಕು ಎಂದು ಅಭಿಪ್ರಾಯಪಟ್ಟರು.



ಬೆಂಗಳೂರು ಸಾಹಿತ್ಯ ಉತ್ಸವದ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಸಾಹಿತ್ಯಾಸಕ್ತರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ವಿದ್ವಾಂಸ ಕೃಷ್ಣಮೂರ್ತಿ ಹನೂರು

ಜಾನಪದ: ಸಾಮಾನ್ಯರ ಚರಿತ್ರೆ

• ರೂಪಾ ಕೆ.ಎಂ.



ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಭಾನುವಾರ ಕತೆಗಾರ ಕೃಷ್ಣಮೂರ್ತಿ ಹನೂರು ಮಾತನಾಡಿದರು. ದೀಪಾ ಗಣೇಶ ಇದ್ದಾರೆ

ಬೆಂಗಳೂರು: 'ದೊಡ್ಡವರು ಮಾತನಾಡುವ ಸುವರ್ಣಯುಗ, ವೈಭವದ ಇತಿಹಾಸಗಳೇ ಬೇರೆ. ಸಾಮಾನ್ಯರು ಆಡುವ ಸಾಮಾಜಿಕ ಚರಿತ್ರೆಯೇ ಬೇರೆ. ಜನಪದ ಇರುವುದೇ ತೆರೆಮರೆಯ ನಾಯಕರ ಹಿರಿಮೆ ಸಾರಲು' ಎಂದು ವಿದ್ವಾಂಸ ಕೃಷ್ಣಮೂರ್ತಿ ಹನೂರು ತಿಳಿಸಿದರು. ತಮ್ಮ 'ದೇವಮೂಲೆಯ ಮಳೆ' ಕಥಾಸಂಕಲನದ ಕುರಿತು ಬೆಂಗಳೂರು ಸಾಹಿತ್ಯೋತ್ಸವದಲ್ಲಿ ಮಾತನಾಡಿದರು.

ನಿನ್ನೆಯಿಂದಲೂ ಬೇರೆಯದ್ದೆ ಜಗತ್ತಿನಲ್ಲಿರುವಂತೆ ಭಾಸವಾಗುತ್ತಿದೆ. ಈ ವೇದಿಕೆಗಳಲ್ಲಿ ದೊಡ್ಡ ರಾಜಕಾರಣಿಗಳ, ದೊಡ್ಡ ಸಂಗತಿಗಳ ಬಗ್ಗೆ ವಿಶ್ಲೇಷಣೆ ನಡೆಯುತ್ತಿದೆ. ಆದರೆ, ಕಳೆದ 40 ವರ್ಷಗಳಲ್ಲಿ ನಾನು ಕಂಡುಕೊಂಡ ಜಗತ್ತಿನಲ್ಲಿ ಸಾಮಾನ್ಯ ಜನ ದೇವಮೂಲೆಯತ್ತ ಚಿತ್ತ ನೆಡುತ್ತಾರೆ. ಪೂರ್ವ ಮತ್ತು ಉತ್ತರ ದಿಕ್ಕಿನ ಮಧ್ಯಭಾಗವೇ ಈ ದೇವಮೂಲೆ. ಅಲ್ಲೊಂದು ಮೋಡ ಸುಳಿದರೂ ಮಿಂಚಿನ ಸೆಳಕು ಕಂಡರೂ ಮಳೆ ಬಂದೇ ಬರುತ್ತೆ ಎನ್ನುವ ಭರವಸೆ ತಾಳುತ್ತಾರೆ. ಮಳೆ ಬಂದರಷ್ಟೆ ಬದುಕು; ಕೇವಲ ಮಾತಿನಿಂದಲ್ಲ ಎಂದು ಮಾರ್ಮಿಕವಾಗಿ ತಿಳಿಸಿದರು.

ಜನಸಾಮಾನ್ಯರು ಯಾವ ಕಡೆಗೆ ಮುಖ ಮಾಡಿದ್ದಾರೆ ಎಂದು ಅರಿಯುವುದೇ ನಿಜವಾದ ಅರಿವು. ನನ್ನ ಓಡಾಟದಲ್ಲಿ ಭೇಟಿ ಮಾಡಿದ್ದ 70 ವರ್ಷದ ಅವಿದ್ಯಾವಂತ ಭೋವಿ ಜನಾಂಗದ ಹೆಣ್ಣುಮಗಳು ಆಡಿದ ಮಾತು ಇಂದಿಗೂ ಕಿವಿಯಲ್ಲಿ ಅನುರಣಿಸುತ್ತಿದೆ. 'ಕಾಲು ಒದ್ದೆಯಾಗದೆ ಸಮುದ್ರ ದಾಟಬಹುದು. ಕಣ್ಣು ಒದ್ದೆಯಾಗದೆ ಈ ಬದುಕನ್ನು ದಾಟಲು ಆಗುವುದಿಲ್ಲ'. ಈ ಮಾತಿನಲ್ಲಿರುವ ಜೀವನದರ್ಶನವೇ ಬೇರೆ. ಇದು ಯಾವ ಪಠ್ಯ, ಭಾಷಣಗಳಲ್ಲಿಯೂ ಸಿಗಲಾರದು ಎಂದು ಅಭಿಪ್ರಾಯಪಟ್ಟರು.

ಹಟ್ಟಿಯಲ್ಲಿ ಒಮ್ಮೆ ಸಿರಿಯಜ್ಜಿಯನ್ನು ಭೇಟಿ ಮಾಡಿದ್ದೆ. ಕಡುಬಡತನದ ನಡವೆಯೂ 'ಸಿರಿ' ಎಂಬ ಚಂದದ ಹೆಸರು. ಅದರ ಬಗ್ಗೆ ವಿಚಾರಿಸುತ್ತ ಹೋದಂತೆ ತಿಳಿಯಿತು. ಆ ಬುಡಕಟ್ಟಿನ ತ್ಯಾಗಮಯಿ ನಾಯಕನ ಹೆಸರು 'ಸಿರಿ' ಎಂದು. ಇಡೀ ಊರೇ ಲಿಂಗಭೇದವಿಲ್ಲದೇ ಆ ಹೆಸರನ್ನು ಇಟ್ಟುಕೊಂಡಿತ್ತು. ತಮ್ಮವರ ಒಳಿತಿಗಾಗಿ ಹೋರಾಡಿದ ನಾಯಕನನ್ನು ಇಡೀ ಊರೇ ಆರಾಧಿಸುವುದು ಹೀಗೆ ಎಂದು ವಿವರಿಸಿದರು.

ಯಾರಪ್ಪ ನೀನು?: ಸಾಮಾನ್ಯರು ಎಂದಾಕ್ಷಣ ಅಸಡ್ಡೆ ತೋರುವಂತಿಲ್ಲ. ಅವರಿಗಿರುವ ತಿಳಿವಳಿಕೆ ದೊಡ್ಡದು. ಸಿರಿಯಜ್ಜಿ ಅಹೋರಾತ್ರಿ ಹಾಡುವ ಪ್ರತಿಭಾವಂತೆ. ಒಮ್ಮೆ ಸಿರಿಯಜ್ಜಿ ಬೆಂಗಳೂರಿನ ಕಲಾಕ್ಷೇತ್ರಕ್ಕೆ ಬಂದಿದ್ದಳು. ಎದುರಾದ ಆಗಿನ ಮುಖ್ಯಮಂತ್ರಿ ಕುಮಾರಸ್ವಾಮಿ ಅವರನ್ನೆ 'ಯಾರಪ್ಪ ನೀನು' ಎಂದು ಮುಗ್ದವಾಗಿ ಕೇಳಿದಳು. 'ನಿನ್ನ ಮಗ ಕಣವ್ವ' ಎಂದು ಜಾಣ ಉತ್ತರ ನೀಡಿದರು ಮುಖ್ಯಮಂತ್ರಿ. ಸಿರಿಯಜ್ಜಿಯ ಮುಂದಿನ ಪ್ರಶ್ನೆ 'ನಿನ್ನ ಹೆಂಡತಿ, ಮಕ್ಕಳು ಚಂದಾಗ್ವರ' ಎಂದು ಕೇಳುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಕುಟುಂಬ ಸಂಸ್ಕೃತಿ ದೊಡ್ಡದು ಎಂದು ಸಾರಿದಳು ಎಂದು ಕೃಷ್ಣಮೂರ್ತಿ ಅವರು ಘಟನೆಯೊಂದನ್ನು ನೆನಪಿಸಿಕೊಂಡರು.

ಒಬ್ಬ ರಾಜನ ಪರಾಕ್ರಮದ ಕತೆಗಳನ್ನು ಕೇಳಿರುತ್ತೇವೆ. ಆದರೆ ಅದೇ ರಾಜನ ಸೈನ್ಯ ಒಂದೂರಿನಿಂದ ಮತ್ತೊಂದು ಊರಿಗೆ ಹೋಗುವ ಮಧ್ಯೆ ಸಿಗುವ ಹಳ್ಳಿಗಳ ಮೇಲೆ ನಡೆಸುತ್ತಿದ್ದ ಶೋಷಣೆಯ ಕತೆಗಳು ಎಂಥವರನ್ನೂ ತಲ್ಲಣಗೊಳಿಸುತ್ತವೆ. ಅಧಿಕಾರ ಇರುವವರ ಪರ ಅಥವಾ ವಿರೋಧಿಸಿ ಮಾತನಾಡಿದರೂ ಜನಪ್ರಿಯತೆ ಸಿಗುತ್ತದೆ. ಆದರೆ, ಸಾಮಾನ್ಯರ ಚಿಂತನಾಕ್ರಮವನ್ನು ಅರಿಯಲು ಪ್ರಯತ್ನಪಡಬೇಕಿದೆ. ಸಾಮಾಜಿಕ ಚರಿತ್ರೆಯ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳದ ಹೊರತು ರಾಜಕೀಯ ಇತಿಹಾಸವನ್ನು ಸರಿಯಾಗಿ ಗ್ರಹಿಸಲು ಆಗುವುದಿಲ್ಲ ಎಂದರು.



'ಹೇಳತೇನ ಕೇಳ' ಗೋಷ್ಠಿಯಲ್ಲಿ ಚಂದ್ರಶೇಖರ ಕಂಬಾರ ಮಾತನಾಡಿದರು. ಬಸವರಾಜ ಕಲ್ಗುಡಿ ಇದ್ದಾರೆ –ಪ್ರಜಾವಾಣಿ ಚಿತ್ರ

'ನಾಯಕನಿಗಿಂತ ಜನರೇ ದೊಡ್ಡವರು'

• ವರುಣ್ ಹೆಗಡೆ

ಬೆಂಗಳೂರು: 'ಎಷ್ಟೇ ದೊಡ್ಡ ನಾಯಕನಾದರೂ ಆತ ಜನರಿಗಿಂತ ದೊಡ್ಡವನಾಗಲು ಸಾಧ್ಯವಿಲ್ಲ. ಯಾವಾಗಲೂ ಜನರೇ ದೊಡ್ಡವರು.'

ಹೀಗೆ ಹೇಳಿದ್ದು ಸಾಹಿತಿ ಚಂದ್ರಶೇಖರ ಕಂಬಾರ. ತಾವು ಬರವಣಿಗೆ ಪ್ರಾರಂಭಿಸಿದ ಬಗೆಯನ್ನು ಬೆಂಗಳೂರು ಸಾಹಿತ್ಯೋತ್ಸವದ ಎರಡನೇ ದಿನವಾದ ಭಾನುವಾರ ನಡೆದ 'ಹೇಳತೇನ ಕೇಳ' ಗೋಷ್ಠಿಯಲ್ಲಿ ವಿವರಿಸಿದರು.

'ರಸಾನುಭವ ನೀಡುವುದೇ ಕಾವ್ಯದ ಉದ್ದೇಶ. ಕವಿತೆ ಇರುವುದು ಹಾಡಲು ಹಾಗೂ ಸಂವಹನ ನಡೆಸಲು. ನಾನು ಬರವಣಿಗೆ ಪ್ರಾರಂಭಿಸಿದ ಕಾಲದಲ್ಲಿ ಚೀನಾದ ಕಮ್ಯೂನಿಸ್ಟ್ ಕ್ರಾಂತಿಕಾರಿ ಮಾವೊತ್ಸೆ ತುಂಗ ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆದಿದ್ದರು. ಆ ವೇಳೆ ಜನರು ಯಾವುದಕ್ಕೆ ಸ್ಪಂದಿಸಬಲ್ಲರು ಎನ್ನುವುದನ್ನು ಅರಿತು, ಮಾವೊತ್ಸೆ ತುಂಗನ ಬಗ್ಗೆಯೇ ಪದ್ಯ ಬರೆದೆ' ಎಂದು ಹೇಳಿದ ಅವರು, 'ಮರೆತೇನೆಂದಾರ ಮರೆಯಲಿ ಹ್ಯಾಂಗ ಮಾವೊತ್ಸೆ ತುಂಗ, ಮರೆತೇನೆಂದಾರ ಮರೆಯಲಿ ಹ್ಯಾಂಗ...' ಎಂದು ಪದ್ಯ ಹಾಡಿದರು.

'ಕಾವ್ಯವನ್ನು ನಾವು ಹಾಡಿನ ರೂಪದಲ್ಲಿಯೇ ಕಂಡಿರುವುದು. ಆಧುನಿಕ ವಿಚಾರಗಳು ಹಾಡಿನ ರೂಪದಲ್ಲಿ ಧ್ವನಿಸಬೇಕು. ಈ ವಿಧಾನದಲ್ಲಿ ವಿಷಯವನ್ನು ಪರಿಣಾಮಕಾರಿಯಾಗಿ ತಲುಪಿಸಲು ಸಾಧ್ಯ' ಎಂದರು.

ತಮ್ಮ ಕಾವ್ಯದಲ್ಲಿ ಸಾವಳಗಿ ಶಿವಲಿಂಗದ ಬಗ್ಗೆ ಸ್ಮರಿಸಿಕೊಳ್ಳುವ ಬಗ್ಗೆ ವಿವರಿಸಿದ ಅವರು, 'ನನ್ನ ಹಾಡನ್ನು ಯಾರೂ ಕೇಳದೆ ಇರುವ ಸಂದರ್ಭದಲ್ಲಿ ಸಾವಳಗಿ ಸ್ವಾಮೀಜಿ ಪ್ರೋತ್ಸಾಹಿಸಿದರು. ಶಿಕ್ಷಣಕ್ಕೂ ನೆರವಾದರು. ಇದರಿಂದಾಗಿ ಅವರನ್ನು ಸ್ಮರಿಸಿಕೊಳ್ಳುತ್ತೇನೆ' ಎಂದರು. ಗೋಷ್ಠಿ ನಡೆಸಿಕೊಟ್ಟ ವಿಮರ್ಶಕ ಬಸವರಾಜ ಕಲ್ಗುಡಿ, 'ಕಂಬಾರರು ಕನ್ನಡ ಸಾಹಿತ್ಯವನ್ನು ಹೊಸ ದಿಕ್ಕಿನತ್ತ ಕೊಂಡೊಯ್ದರು. ಅವರ ಕಾದಂಬರಿ, ನಾಟಕ, ಕವನಗಳಲ್ಲಿ ಹೊಸ ಶೈಲಿಯನ್ನು ನೋಡಬಹುದು. ಕನ್ನಡ ಇವರ ಕೈ ಹಿಡಿದರೆ, ಇವರು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಗುಡಿಸಿಲಿನ ಕವಿ ಕುಮಾರವ್ಯಾಸ'

• ಎಸ್. ಸೂರ್ಯಪ್ರಕಾಶ ಪಂಡಿತ್



ಕುಮಾರವ್ಯಾಸನ ಕನ್ನಡ ಮಹಾಭಾರತ' ವಿಚಾರಗೋಷ್ಠಿಯಲ್ಲಿ ಎಸ್.ಎನ್.ಶ್ರೀಧರ್, ಸಿ.ಎನ್.ರಾಮಚಂದ್ರನ್, ಕೃಷ್ಣಮೂರ್ತಿ ಹನೂರು ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪಂಪ ಅರಮನೆಯ ಕವಿಯಾದರೆ, ಕುಮಾರವ್ಯಾಸ ಗುಡಿಸಿಲಿನ ಕವಿ' ಎಂದು ವಿದ್ವಾಂಸ ಕೃಷ್ಣಮೂರ್ತಿ ಹನೂರು ಅಭಿಪ್ರಾಯ ಪಟ್ಟಿದ್ದಾರೆ.

ಕುಮಾರವ್ಯಾಸಭಾರತದ ಇಂಗ್ಲಿಷ್ ಅನುವಾದದ ಬಗ್ಗೆ ಬೆಂಗಳೂರು ಸಾಹಿತ್ಯೋತ್ಸವದಲ್ಲಿ ನಡೆದ ಗೋಷ್ಠಿಯಲ್ಲಿ ಅವರು ಮಾತನಾಡಿದರು. ಪಂಪನನ್ನೂ ಕುಮಾರವ್ಯಾಸನನ್ನೂ ಪರಸ್ಪರ ವಿರುದ್ಧ ನೆಲೆಯಲ್ಲಿ ನೋಡುತ್ತಿಲ್ಲ. ಆದರೆ ಇಬ್ಬರ ಕಾವ್ಯಪರಂಪರೆಯಲ್ಲಿ ಕಂಡುಬರುವ ಮನೋಧರ್ಮಗಳ ನೆಲೆಯಿಂದಷ್ಟೆ ಈ ಮಾತನ್ನು ಹೇಳುತ್ತಿರುವೆ ಎಂದು ಅವರು ತಮ್ಮ ಮಾತಿಗೆ ಸ್ಪಷ್ಟನೆ ನೀಡಿದರು.

ಕುಮಾರವ್ಯಾಸಭಾರತದ ಹಸ್ತಪ್ರತಿಗಳು ರಾಜ್ಯದ ಉದ್ದಕ್ಕೂ ನೂರಾರು ಸಿಕ್ಕಿವೆ. ಕುಮಾರವ್ಯಾಸನ ಜನಪ್ರಿಯತೆಗೆ ಇದೂ ಸಾಕ್ಷಿ. ಮನಸ್ಸನ್ನು ಉದ್ಧರಿಸುವ ಮಾತುಗಳನ್ನು ಆಡಿರುವ ಕವಿಗೆ ಜನರಿಂದ ಸಹಜವಾಗಿಯೇ ಆದರಣೆ ಸಿಗುತ್ತದೆ. ಕುಮಾರವ್ಯಾಸ ಅಂಥ ಜನಪ್ರಿಯ ಕವಿ. ಜತೆಗೆ ಅವನ ವಿನಯವೂ ದೊಡ್ಡದು. ವೀರನಾರಾಯಣನನ್ನೇ ತನ್ನ ಕೃತಿಯ ನಿಜವಾದ ಕವಿ ಎಂದು ಘೋಷಿಸಿಕೊಂಡವನು ಅವನು ಎಂದು ಅವರು ವಿವರಿಸಿದರು.

ಕುಮಾರವ್ಯಾಸನ ಕಾವ್ಯಪರಂಪರೆಯ ರುಚಿಯನ್ನು ಜನರಿಗೆ ನಿರಂತರವಾಗಿ ಉಣಿಸುತ್ತಬಂದವರು ಗಮಕಿಗಳು. ಹಳ್ಳಿಗಳಲ್ಲಿ ಕುಮಾರವ್ಯಾಸನ ಸಂಘಗಳೇ ಇದ್ದವು. 1954ರಲ್ಲಿ ಕೆಂಗಲ್ ಹನುಮಂತಯ್ಯನವರ ಉತ್ತೇಜನದಿಂದ ಕುಮಾರವ್ಯಾಸಭಾರತ ಪ್ರಕಟವಾದಾಗ ಆರು ತಿಂಗಳಲ್ಲಿಯೇ ಸುಮಾರು 40 ಸಾವಿರ ಪ್ರತಿಗಳು ಮಾರಾಟವಾದವು ಎಂದೂ ಹನೂರು ಸ್ಮರಿಸಿದರು.

'ಕುಮಾರವ್ಯಾಸನನ್ನು ಓದಿದರೆ ಅವನ ಬಗ್ಗೆ ಜನರಿಗೆ ಇರುವ ಗೌರವಕ್ಕೆ ಕಾರಣ ತಿಳಿಯುತ್ತದೆ' ಎಂದು ಕುಮಾರವ್ಯಾಸಭಾರತದ ಅನುವಾದಕರಲ್ಲಿ ಒಬ್ಬರಾದ ಸಿ. ಎನ್. ರಾಮಚಂದ್ರ ಹೇಳಿದರು. ಕುಮಾರವ್ಯಾಸನನ್ನು ಅನುವಾದಿಸುವಾಗ ಎದುರಿಸಬೇಕಾದ ಸವಾಲುಗಳ ಬಗ್ಗೆ ಅವರು ವಿವರಿಸಿದರು.

ಅನುವಾದ ಯೋಜನೆಯ ಪ್ರಧಾನ ಸಂಪಾದಕ ಎಸ್.ಎನ್. ಶ್ರೀಧರ್ 'ಇಂಗ್ಲಿಷ್ ಅನುವಾದದ ಮೂಲಕ ಕುಮಾರವ್ಯಾಸಭಾರತ ಈಗ ಜಗತ್ತಿನಾದ್ಯಂತ ತಲುಪಲಿದೆ' ಎಂದರು. ಕುಮಾರವ್ಯಾಸಭಾರತದ ಕನ್ನಡ ಗದ್ಯಾನುವಾದಗಳಲ್ಲಿಯೇ ಹಲವು ಸಮಸ್ಯೆಗಳಿವೆ. ಹೀಗಾಗಿ ನಮ್ಮ ಇಂಗ್ಲಿಷ್ ಅನುವಾದದಲ್ಲೂ ದೋಷಗಳು ಇರಬಹುದು. ಓದುಗರ ಮತ್ತು ವಿದ್ವಾಂಸರ ಸಲಹೆಗಳಿಗೆ ಸ್ವಾಗತ. ದೋಷಗಳನ್ನು ಪ್ರೀತಿಯಿಂದ ತಿದ್ದಿರಿ. ಗುಣಗಳನ್ನು ಸಹೃದಯತೆಯಿಂದ ಸ್ವೀಕರಿಸಿ ಎಂದು ಮನವಿ ಮಾಡಿದರು.

ಕುಮಾರವ್ಯಾಸಭಾರತ ಇಂಗ್ಲಿಷ್ ಅನುವಾದ ಸಮಗ್ರ ಅನುವಾದವಲ್ಲ, ಸಂಗ್ರಹಾನುವಾದ ಮಾತ್ರ. ಮೊದಲ ಸಂಪುಟವನ್ನು ಗಮಕಿಗಳಿಗೆ ಮತ್ತು ವಿದ್ವಾಂಸರಿಗೆ ಅರ್ಪಿಸಿದ್ದೇವೆ. ಇನ್ನೂ ಎರಡು ಸಂಪುಟಗಳು ಪ್ರಕಟವಾಗಲಿವೆ. ಇವು ಓಪನ್ ಸೋರ್ಸ್‌'ನಲ್ಲೂ ಲಭ್ಯವಾಗಲಿವೆ ಎಂದು ಮಾಹಿತಿ ನೀಡಿದರು. ಇದಕ್ಕೂ ಮೊದಲು ಅವರು 'ನಮ್ಮ ಪರಂಪರೆಯಲ್ಲಿ ಎಲ್ಲ ಕಾರ್ಯಕ್ರಮಗಳೂ ಗುರುನಮನದೊಂದಿಗೆ ಆರಂಭವಾಗುತ್ತದೆ' ಎನ್ನುತ್ತ, ಅನುವಾದ ಯೋಜನೆಯಲ್ಲಿ ಸಹಕರಿಸುತ್ತಿರು ಹಲವರು ವಿದ್ವಾಂಸರನ್ನು ಸ್ಮರಿಸಿಕೊಂಡು ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು.

ಕೇಂದ್ರಿಯ ಸಂಸ್ಕೃತ ವಿ.ವಿ ಕುಲಪತಿ ಶ್ರೀನಿವಾಸ ವರಖೇಡಿ ಅಭಿಮತ

'ಆತ್ಮಕಥೆಗಳು ನೈಜತೆಯಿಂದ ಕೂಡಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆತ್ಮಕಥೆ ಎನ್ನುವುದು ಇತಿಹಾಸ, ಪ್ರವಾಸ ಕಥನವಾದರೆ ಅಲ್ಲಿ ವ್ಯಕ್ತಿ ಮರೆಯಾಗುತ್ತಾನೆ. ಸಾಹಿತ್ಯದ ಗದ್ಯ ಕೃತಿಯಾದರೆ ಅದು ಕಲ್ಪನಾ ಲೋಕವಾಗಲಿದೆ. ಆದ್ದರಿಂದ, ಆತ್ಮಕಥೆಗಳು ನೈಜತೆಯಿಂದ ಕೂಡಿರಬೇಕು' ಎಂದು ಕೇಂದ್ರಿಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ವರಖೇಡಿ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಅಂಕಿತ ಪುಸ್ತಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಲ್ಲೇಪುರಂ ಜಿ. ವೆಂಕಟೇಶ ಅವರ 'ದಿಟದ ದೀವಟಿಗೆ' ಆತ್ಮಕಥೆ ಗ್ರಂಥ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಬಹಳಷ್ಟು ಜನ ಆತ್ಮಕಥೆಯ ಹೆಸರಿನಲ್ಲಿ ಸ್ವಗತವನ್ನು ಬರೆಯುತ್ತಾರೆ. ಆತ್ಮಕಥೆಯಲ್ಲಿ ಸ್ವ ಮತ್ತು ಅಹಂ ಇದ್ದರೆ ಅದು ಅಹಂಕಥನವಾಗುತ್ತದೆ. ಆತ್ಮಕಥೆ ಬರೆಯಬೇಕಾದರೆ ಮೊದಲು ಆ ವ್ಯಕ್ತಿಯೇ ಅದಕ್ಕೆ ಸಾಕ್ಷಿಯಾಗಬೇಕು. ಏಕೆಂದರೆ ತಾನು ಲೇಖಕನಾಗಿ ತನ್ನನ್ನು ತಾನು ಕಾಣದೇ ಒಬ್ಬ ಸಾಕ್ಷಿಯಾಗಿ ತನ್ನ ಜೀವನವನ್ನು ನೋಡಬೇಕಾಗುತ್ತದೆ. ಇಂತಹ ವಿಚಾರವನ್ನು ನಾನು ಮಲ್ಲೇಪುರಂ ಅವರ ಆತ್ಮಕಥೆಯಲ್ಲಿ ಕಂಡಿದ್ದೇನೆ' ಎಂದರು.


ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ, 'ದಿಟದ ದೀವಟಿಗೆ' ಆತ್ಮಕಥೆಯಲ್ಲಿ ಎಲ್ಲೂ ನಾನು ಆತ್ಮಸಾಕ್ಷಿಗೆ ವಿರುದ್ಧವಾಗಿ ಬರೆದಿಲ್ಲ. ನನ್ನ ಜೀವನದಲ್ಲಿ ಮೂರ್ನಾಲ್ಕು ಮಂದಿ ಬಹಳಷ್ಟು ನೋವು, ಸಂಕಷ್ಟಗಳನ್ನು ಕೊಟ್ಟಿದ್ದರು. ಹೀಗಾಗಿ ಈ ಜೀವನವೇ ಬೇಡ ಅನಿಸಿದ್ದೂ ಇದೆ. ಆದರೆ ಅದ್ಯಾವುದನ್ನು ಕೂಡ ಆತ್ಮಕಥೆಯಲ್ಲಿ ಬರೆದುಕೊಂಡಿಲ್ಲ. ಗುರುಬಲ ಮತ್ತು ಮಿತ್ರ ಬಲದಿಂದ ಎಲ್ಲ ಸಂಕಷ್ಟಗಳನ್ನು ಗೆದ್ದಿದ್ದೇನೆ' ಎಂದು ಹೇಳಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್. ವೀರಯ್ಯ, ವಿದ್ವಾಂಸ ಎ.ವಿ. ಪ್ರಸನ್ನ, ಕಾದಂಬರಿಕಾರ ಕು. ವೀರಭದ್ರಪ್ಪ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಮುಂತಾದವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್, ಅಖಿಲ ಕರ್ನಾಟಕ ಕೊರಮ ಸಂಘದ ಅಧ್ಯಕ್ಷ ಜಿ. ಮಾದೇಶ ಇದ್ದರು.

ಪುಸ್ತಕ ಪರಿಚಯ

ಪುಸ್ತಕ: ದಿಟದ ದೀವಟಿಗೆ
ಲೇಖಕ: ಮಲ್ಲೇಪುರಂಜಿ. ವೆಂಕಟೇಶ
ಪ್ರಕಾಶನ: ಅಂಕಿತ ಪುಸ್ತಕ
ಪುಟ: 568
ಬೆಲೆ: ₹595



ನಗರದ ಗಾಂಧಿಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮಲ್ಲೇಪುರಂ ಜಿ. ವೆಂಕಟೇಶ್ ಅವರ ಆತ್ಮಕಥೆ 'ದಿಟದ ದೀವಟಿಗೆ' ಪುಸ್ತಕವನ್ನು ಕೇಂದ್ರಿಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ವರಖೇಡಿ (ಎಡದಿಂದ ನಾಲ್ಕನೆಯವರು) ಬಿಡುಗಡೆಗೊಳಿಸಿದರು. (ಎಡದಿಂದ) ಜಿ. ಮಾದೇಶ, ಮಲ್ಲೇಪುರಂ ಜಿ. ವೆಂಕಟೇಶ, ವೂಡೇ ಪಿ. ಕೃಷ್ಣ, ಸಿ. ಸೋಮಶೇಖರ್ ಇದ್ದಾರೆ.

ಅಧ್ಯಕ್ಷರಾಗಿ ಸಾಯಿನಾರಾಯಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಕಲಾವಿದರ ಒಕ್ಕೂಟದ ಅಧ್ಯಕ್ಷರಾಗಿ ಸಾಯಿನಾರಾಯಣ ಕಲ್ಮಡ್ಕ ಆಯ್ಕೆಯಾಗಿದ್ದಾರೆ.

ಶ್ವೇತಾ ವಿಜಯ್ (ಉಪಾಧ್ಯಕ್ಷೆ), ಮೈಸೂರು ಸಂಜೀವ್ ಕುಮಾರ್ (ಪ್ರಧಾನ ಕಾರ್ಯದರ್ಶಿ), ಬೆಟ್ಟ ವೆಂಕಟೇಶ್ (ಕಾರ್ಯದರ್ಶಿ), ಜಲಜಾ ಪ್ರಸಾದ್ (ಖಜಾಂಚಿ), ಮಮತಾ ಎಸ್ (ಸಹ ಖಜಾಂಚಿ), ವಿನಯಾ ರಾವ್ (ಸಂಘಟನಾ ಕಾರ್ಯದರ್ಶಿ), ಅಂಕಿತಾ (ಸಂಘಟನಾ ಕಾರ್ಯದರ್ಶಿ), ಕೆ.ಎಸ್. ಮೋಹನ್ ಕುಮಾರ್ (ಗೌರವಾಧ್ಯಕ್ಷ), ಎಂ.ವಿ. ಶ್ರೀನಿವಾಸಮೂರ್ತಿ (ಸಂಚಾಲಕ) ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಒಡಿಶಾದಲ್ಲಿ ಭಾರಿ ಮಳೆ ಸಾಧ್ಯತೆ

ಭುವನೇಶ್ವರ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ರೂಪುಗೊಂಡಿರುವ 'ಮಿಚಾಂಗ್' ಚಂಡಮಾರುತವು ತೀವ್ರತೆ ಪಡೆದುಕೊಂಡಿದ್ದು, ಇದೇ 6ರವರೆಗೆ ಒಡಿಶಾದ ದಕ್ಷಿಣ ಮತ್ತು ಕರಾವಳಿ ಪ್ರದೇಶಗಳಲ್ಲಿ ಭಾರಿ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) ಅಧಿಕಾರಿಗಳು ತಿಳಿಸಿದ್ದಾರೆ.

ಚಂಡಮಾರುತದ ಪರಿಣಾಮ ಒಡಿಶಾದ ಮಲ್ಕನ್‌ಗಿರಿ, ರಾಯಗಢ, ಗಂಜಂ ಮೊದಲಾದೆಡೆ ಭಾನುವಾರ ಸಾಧಾರಣ ಮಳೆ ಸುರಿದಿದ್ದು, ಯೆಲ್ಲೊ ಅಲರ್ಟ್ ಘೋಷಿಸಲಾಗಿತ್ತು.

ಚಂಡಮಾರುತವು ವಾಯವ್ಯದ ಕಡೆಗೆ ಬೀಸುತ್ತಿದ್ದು, ಇದೇ 4ರಂದು ಆಂಧ್ರಪ್ರದೇಶ ಮತ್ತು ತಮಿಳುನಾಡು ಪ್ರವೇಶಿಸಲಿದೆ. ನೆಲ್ಲೂರು ಮತ್ತು ಮಚಲಿಪಟ್ಟಣ ನಡುವೆ ದಕ್ಷಿಣ ಆಂಧ್ರಪ್ರದೇಶದ ಕರಾವಳಿ ಪ್ರದೇಶವನ್ನು ಹಾದುಹೋಗುವ ಸಾಧ್ಯತೆ ಇದ್ದು, ಗಂಟೆಗೆ 80ರಿಂದ 90 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಐಎಂಡಿ ಅಧಿಕಾರಿಗಳು ವಿವರಿಸಿದ್ದಾರೆ.

ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಕರೆ ಮಾಡಿ, ಚಂಡಮಾರುತದ ಪರಿಣಾಮವನ್ನು ಎದುರಿಸಲು ಕೈಗೊಂಡಿರುವ ಸಿದ್ಧತೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಚಂಡಮಾರುತ ಎದುರಿಸಲು ಸಜ್ಜು: ಚಂಡಮಾರುತದ ಪರಿಣಾಮ ಎದುರಿಸಲು ಸಜ್ಜಾಗಿದ್ದೇವೆ ಎಂದು ತಮಿಳುನಾಡು ಸರ್ಕಾರ ಹೇಳಿದೆ.

ನಗರದಲ್ಲಿ ಇಂದು


ವೈಬ್ರೆಷನ್ಸ್–2023: ಅತಿಥಿಗಳು: ಗುರುಕಿರಣ್, ಕಿರಣ್ ರಾಜ್, ಅಧ್ಯಕ್ಷತೆ: ಬಿ.ಜಿ. ಪ್ರಸಾದ್, ಗಾಳಿಸ್ವಾಮಿ, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಇನ್‌ಸ್ಟಿಟ್ಯೂಷನ್ಸ್, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 9ರಿಂದ

ಅಮರರಂಗೋತ್ಸವ: 'ರಣದುಂದುಭಿ' ನಾಟಕ ಪ್ರದರ್ಶನ: ರಚನೆ: ಎನ್.ಎಸ್. ರಾವ್, ನಿರ್ದೇಶನ: ವೆಂಕಟರಮಣಯ್ಯ ಡಿ., ಅಧ್ಯಕ್ಷತೆ: ಡಿ. ಗಂಗಮ್ಮ, ಅತಿಥಿಗಳು: ಆರ್.ಎಸ್. ನಟರಾಜು, ಎ.ಬಿ. ಬಸವರಾಜು, 'ಮಿ ಡೂಪ್ಲಿಕೇಟ್' ನಾಟಕ ಪ್ರದರ್ಶನ: ಪರಿಕಲ್ಪನೆ: ಜೀ.ಜೀ., ನಿರ್ದೇಶನ: ಸುರೇಶ್ ಜಿ., ಆಯೋಜನೆ: ಅಮರೇಶ್ವರ ವಿಜಯ ನಾಟಕ ಮಂಡಳಿ, ಸ್ಥಳ: ತಿಮ್ಮೇಗೌಡ ಸಭಾಂಗಣ, ವಿದ್ಯಾನಿಕೇತನ್ ಶಾಲೆ, ಸುಂಕದಕಟ್ಟೆ, ಸಂಜೆ 6ರಿಂದ

ರವೀಂದ್ರ ಕಲಾಕ್ಷೇತ್ರ–60 ವಜ್ರ ಮಹೋತ್ಸವ ಸಂಭ್ರಮ: ಉದ್ಘಾಟನೆ: 'ಮುಖ್ಯಮಂತ್ರಿ' ಚಂದ್ರು, ಕೆ.ಎ. ದಯಾನಂದ, ಧರಣಿದೇವಿ, ಜಯರಾಂ ರಾಯಪುರ, 'ಮುಖ್ಯಮಂತ್ರಿ' ನಾಟಕ ಪ್ರದರ್ಶನ: ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

'ನೂರ್ ಅಹಮದ್ ಅಲಿ ಖಾನ್' ಸ್ಮಾರಕ ದತ್ತಿ ಉಪನ್ಯಾಸ: 'ಗುರೂಜಿ ಮತ್ತು ಹಿಂದೂ ಸಮಾಜದಲ್ಲಿ ಸಾಮಾಜಿಕ ಸಾಮರಸ್ಯತೆ' ಕುರಿತು: ದತ್ತಾತ್ರೇಯ ಹೊಸಬಾಳೆ, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in




ಯೂ–ಗೋ ಸ್ಕಾಲರ್‌ಶಿಪ್

ವಿವರ: ವೃತ್ತಿಪರ ಪದವಿ ಕೋರ್ಸ್ ಮಾಡುತ್ತಿರುವ ಯುವತಿಯರನ್ನು ಆರ್ಥಿಕವಾಗಿ ಬೆಂಬಲಿಸಲು ಯೂ-ಗೋ ಸ್ಕಾಲರ್‌ಶಿಪ್ ನೀಡಲಾಗುತ್ತಿದೆ.
ಅರ್ಹತೆ: ಭಾರತದಲ್ಲಿ ಶಿಕ್ಷಕ, ನರ್ಸಿಂಗ್, ಫಾರ್ಮಸಿ, ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಮಾಡುತ್ತಿರುವ ಯುವತಿಯರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು 10 ಮತ್ತು 12ನೇ ತರಗತಿಗಳಲ್ಲಿ ಕನಿಷ್ಠ ಶೇ 70ರಷ್ಟು ಅಂಕಗಳನ್ನು ಪಡೆದಿರಬೇಕು. ಎಲ್ಲ ಮೂಲಗಳಿಂದ ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ₹ 5 ಲಕ್ಷಕ್ಕಿಂತ ಕಡಿಮೆ ಇರಬೇಕು.
ಆರ್ಥಿಕ ಸಹಾಯ: ವರ್ಷಕ್ಕೆ ₹ 60,000
ಅರ್ಜಿ ಸಲ್ಲಿಸಲು ಕೊನೆ ದಿನ: 19-12-2023
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.
ಮಾಹಿತಿಗೆ: Short Url: www.b4s.in/praja/UGO2

ಬಯೋಡೇಟಾ ಆಕರ್ಷಕವಾಗಿರಲಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಎಸ್ಸೆಸ್ಸೆಲ್ಸಿ ಓದುತ್ತಿದ್ದು, ಮುಂದೆ ಐಎಎಸ್/ಐಪಿಎಸ್ ಅಧಿಕಾರಿಯಾಗುವ ಆಸೆಯಿದೆ. ಕನ್ನಡ ಮಾಧ್ಯಮದ ವಿದ್ಯಾರ್ಥಿಯಾಗಿದ್ದು, ಇಂಗ್ಲಿಷ್ ಕಷ್ಟವೆನಿಸುತ್ತಿದೆ. ಎಸ್ಸೆಸ್ಸೆಲ್ಸಿ ನಂತರ ಯಾವ ಕೋರ್ಸ್ ತೆಗೆದುಕೊಳ್ಳಬೇಕು?

ಗಂಗಪ್ಪ, ಊರು ತಿಳಿಸಿಲ್ಲ.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಯಾಗಿರುವಾಗಲೇ ಐಎಎಸ್/ಐಪಿಎಸ್ ಅಧಿಕಾರಿಯಾಗುವ ನಿಮ್ಮ ಗುರಿ ಶ್ಲಾಘನೀಯ.
ಯಾವುದೇ ಪದವಿಯ ನಂತರ ಯುಪಿಎಸ್‌ಸಿ ಪರೀಕ್ಷೆ ಬರೆಯುವ ಅರ್ಹತೆ ಸಿಗುತ್ತದೆ. ಹಾಗಾಗಿ, ನಿಮ್ಮ ಆಸಕ್ತಿಯನುಸಾರ ಬಿಎ, ಬಿ.ಎಸ್ಸಿ, ಬಿಕಾಂ, ಬಿ.ಟೆಕ್ ಪದವಿಯನ್ನು ಮಾಡಬಹುದು. ಎರಡನೇ ವರ್ಷದ ಪದವಿಯಲ್ಲಿರುವಾಗಲೇ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ಮಾಡುವುದು ಸೂಕ್ತ.

ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಬಹುಆಯ್ಕೆ ಮಾದರಿಯಾಗಿರುತ್ತದೆ; ಮುಖ್ಯಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಬಹುದು; ಸಂದರ್ಶನವನ್ನು ಕನ್ನಡದಲ್ಲಿ ನೀಡಬಹುದು. ಇಂಗ್ಲಿಷ್ ಕಲಿಕೆಗೆ ಸಹಾಯವಾಗಬಹುದಾದ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=NoFcIQAFDCA

2. ಸರ್, ನಾನು ಅಂತಿಮ ವರ್ಷದ ಪದವಿಯಲ್ಲಿದ್ದು, ಪೊಲೀಸ್ ಆಗುವ ಕನಸಿದೆ. ಇತಿಹಾಸ ವಿಷಯದಲ್ಲಿ ಎಂಎ ಮಾಡಿ, ಶಿಕ್ಷಕನಾಗುವ ಆಸೆಯೂ ಇದೆ. ಯಾವುದು ಸೂಕ್ತ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ವೃತ್ತಿಯ ಯಶಸ್ಸಿಗೆ ವೃತ್ತಿ ಸಂಬಂಧಿತ ಜ್ಞಾನ ಮತ್ತು ಕೌಶಲಗಳಿರಬೇಕು. ಪೊಲೀಸ್ ವೃತ್ತಿಗೆ ನಾಯಕತ್ವದ ಕೌಶಲ, ದಿಟ್ಟತನ, ಸಹಭಾಗಿತ್ವದ ಕೌಶಲ, ಉತ್ತಮ ಸಂವಹನ, ಪರಿಶೋಧನಾ ಕೌಶಲವಿರಬೇಕು. ಮಾನಸಿಕ ಮತ್ತು ದೈಹಿಕ ಸದೃಢತೆಯಿರಬೇಕು. ಶಿಕ್ಷಕರಾಗಲು, ವೃತ್ತಿ ಸಂಬಂಧಿತ ಕೌಶಲಗಳಾದ ತಾಳ್ಮೆ, ಸಹನೆ, ಸಂವಹನ, ಸೃಜನಾತ್ಮಕ ಮತ್ತು ವಿಮರ್ಶಾತ್ಮಕ ಕೌಶಲವಿರಬೇಕು.

ಹಾಗಾಗಿ, ನೀವು ಪರಿಶೀಲಿಸುತ್ತಿರುವ ಎರಡೂ ವೃತ್ತಿಗಳ ಯಶಸ್ಸಿಗೆ ಬೇಕಾಗುವ ಅಂಶಗಳು ವಿಭಿನ್ನ. ಸೂಕ್ತವೆನಿಸುವ, ಆತ್ಮಸಂತೃಪ್ತಿಯನ್ನು ತಂದುಕೊಡುವ ವೃತ್ತಿಯನ್ನು ಅನುಸರಿಸುವುದು ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು. ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=MHnPg_sp6E0

3. 2020ರಲ್ಲಿ ಬಿಕಾಂ ಪದವಿ ಪಡೆದಿದ್ದೇನೆ. ಈವರೆಗೆ ಯಾವುದೇ ಒಳ್ಳೆಯ ಕೆಲಸ ಸಿಕ್ಕಿಲ್ಲ. ಸಲಹೆ ನೀಡಿ.

ಹೆಸರು, ಊರು ತಿಳಿಸಿಲ್ಲ.

ಬೇಡಿಕೆಯಲ್ಲಿರುವ ಬಿಕಾಂ ಪದವಿಯ ನಂತರವೂ ಉದ್ಯೋಗ ಸಿಗದಿರಲು ಕಾರಣಗಳೇನು ಎಂದು ವಿಶ್ಲೇಷಿಸಬೇಕು. ಪ್ರಮುಖವಾಗಿ, ನಿಮ್ಮ ಬಯೋಡೇಟಾ ನಿಮ್ಮಲ್ಲಿರುವ ವಿಶಿಷ್ಟ ಅರ್ಹತೆ, ಕೌಶಲ ಮತ್ತು ಸಾಮರ್ಥ್ಯಗಳನ್ನು ಪ್ರತಿಬಿಂಬಿಸುವುದೇ? ನೀವು ಈವರೆಗೆ ಮಾಡಿರುವ ಪ್ರಯತ್ನಗಳಿಂದ ಸಂದರ್ಶನಗಳು ಸಿಗುತ್ತಿದೆಯೇ? ಅಥವಾ, ಸಂದರ್ಶನದಲ್ಲಿ ಸಮಸ್ಯೆಯಾಗುತ್ತಿದೆಯೇ? ವೃತ್ತಿಯ ಅವಕಾಶಗಳನ್ನು ಹೆಚ್ಚಿಸುವ ಅಲ್ಪಾವಧಿ ಸರ್ಟಿಫಿಕೇಟ್/ಡಿಪ್ಲೊಮಾ ಕೋರ್ಸ್‌ಗಳನ್ನು ಮಾಡಬಹುದೇ? ಈ ಎಲ್ಲಾ ಸಾಧ್ಯತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ. ಸಂದರ್ಶನವನ್ನು ಯಶಸ್ವಿಯಾಗಿ ಎದುರಿಸುವ ಕಾರ್ಯತಂತ್ರದ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=T_z3ngIeyWk

4. ನಾನು ಬಿ.ಕಾಂ ಮುಗಿಸಿದ್ದು, ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಉತ್ತಮ ಅಕೌಂಟೆಂಟ್ ಆಗಲು ಬಯಸುತ್ತೇನೆ. ಈ ವೃತ್ತಿಯಲ್ಲಿ ಭವಿಷ್ಯವಿದೆಯೇ?


ವೀರೇಶ್, ಯಾದಗಿರಿ.

ಅಕೌಂಟೆನ್ಸಿ ಕ್ಷೇತ್ರದಲ್ಲಿ ಒಲವು ಮತ್ತು ಸ್ವಾಭಾವಿಕ ಪ್ರತಿಭೆಯಿದ್ದರೆ , ಬಿ.ಕಾಂ ಪದವೀಧರರಿಗೆ ಚಾರ್ಟರ್ಡ್ ಅಕೌಂಟೆಂಟ್ ವೃತ್ತಿ ಅತ್ಯುತ್ತಮ ಆಯ್ಕೆ. ಪರಿಶ್ರಮ, ಬದ್ಧತೆ, ಆತ್ಮವಿಶ್ವಾಸ ಮತ್ತು ಸಮಯದ ನಿರ್ವಹಣೆಯಿಂದ ಸಿಎ ಕೋರ್ಸ್ ಮಾಡಬಹುದು. ಕೋಚಿಂಗ್ ಕಡ್ಡಾಯವಲ್ಲ. ಮೇಲಾಗಿ, ಚಾರ್ಟರ್ಡ್ ಅಕೌಂಟೆಂಟ್ ಇನ್‌ಸ್ಟಿಟ್ಯೂಟ್‌ನಿಂದ ನೀಡುವ ಕೋಚಿಂಗ್ ಮತ್ತು ಮಾರ್ಗದರ್ಶನದ ಸೌಲಭ್ಯ ಪಡೆಯಬಹುದು.

ಒಟ್ಟಾರೆ, ಬಿಕಾಂ ನಂತರ ಸಿಎ ಕೋರ್ಸ್ ಮಾಡಲು ಕನಿಷ್ಠ 3-4 ವರ್ಷ ಬೇಕಾಗುತ್ತದೆ. ಸಿಎ ಸರಿಹೊಂದುವುದಿಲ್ಲವೆಂದರೆ ಎಸಿಎಸ್, ಸಿಎಂಎ, ಎಂಕಾಂ, ಎಂಬಿಎ (ಹಣಕಾಸು) ಕೋರ್ಸ್‌ಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿಕೊಳ್ಳಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=RyNVWuRVjbA
ಹೆಚ್ಚಿನ ಪ್ರಶ್ನೆಗಳಿಗೆ https://www.prajavani.net/education-career/guide ಓದಿ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು

ಕಲಿಕಾ ಸಾಮರ್ಥ್ಯ ವೃದ್ಧಿಸುವ ಕ್ವಿಜ್



ಮಂಜುಶ್ರೀ ಎಂ. ಕಡಕೋಳ

ವಿದ್ಯಾರ್ಥಿಗಳಲ್ಲಿನ ಅಪಾರ ಕುತೂಹಲವನ್ನು ತಣಿಸುವ, ಅವರ ಜ್ಞಾನವನ್ನು ಒರೆಹಚ್ಚುವ 'ಪ್ರಜಾವಾಣಿ ಕ್ವಿಜ್ ಚಾಂಪಿಯನ್' ಮತ್ತೆ ಬಂದಿದೆ. ಈ ಬಾರಿಯ ಕ್ವಿಜ್‌ನ ವಿಶೇಷವೇನು ಎನ್ನುವ ಕುರಿತು ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಕಲಿಕೆಯಲ್ಲಿ ಆಸಕ್ತಿ ಹಾಗೂ ಜ್ಞಾನ ಸಾಮರ್ಥ್ಯವನ್ನು ವೃದ್ಧಿಸುವ ರಸಪ್ರಶ್ನೆ ಸ್ಪರ್ಧೆ ಶೈಕ್ಷಣಿಕ ಪ್ರಗತಿಗಷ್ಟೇ ಅಲ್ಲ, ಮಕ್ಕಳ ವ್ಯಕ್ತಿತ್ವ ಬೆಳವಣಿಗೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಗ್ರಾಮೀಣ ಹಾಗೂ ನಗರ ವಿದ್ಯಾರ್ಥಿಗಳಲ್ಲಿ ಸಂವಹನ ಕಲೆ ಹಾಗೂ ಆತ್ಮವಿಶ್ವಾಸವನ್ನು ವೃದ್ಧಿಸುವಲ್ಲಿ ಪಾತ್ರ ವಹಿಸುತ್ತಿರುವ 'ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್' ಈ ವರ್ಷ ಮಕ್ಕಳ ಕುತೂಹಲ ತಣಿಸಲು ಸಜ್ಜಾಗಿದೆ.

ಕರ್ನಾಟಕದ ದ್ವಿಭಾಷಾ ರಸಪ್ರಶ್ನೆ ಕಾರ್ಯಕ್ರಮವೆಂದೇ ಜನಪ್ರಿಯವಾಗಿರುವ 'ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್' ಮಕ್ಕಳಲ್ಲಿನ ಜ್ಞಾನವನ್ನು ಒರೆಹಚ್ಚುವ ವೇದಿಕೆಯಾಗಿದೆ. ಪಠ್ಯವಷ್ಟೇ ಅಲ್ಲ, ಪಠ್ಯೇತರ ಓದು, ಸ್ಥಳೀಯ ವಿದ್ಯಮಾನ, ಪ್ರಸಕ್ತ ಬೆಳವಣಿಗೆಗಳು ಹೀಗೆ ಬಹುಮುಖಿ ಆಯಾಮವನ್ನೊಳಗೊಂಡ ಕ್ವಿಜ್, ಮಕ್ಕಳಲ್ಲಿ ಜೀವನಕ್ಕೆ ಬೇಕಾದ ಅಗತ್ಯ ಕೌಶಲಗಳನ್ನು ಕಲಿಸಲು ಪೂರಕವಾಗಿದೆ. ಈ ಬಾರಿಯ ಕ್ವಿಜ್ ಚಾಂಪಿಯನ್‌ಶಿಪ್‌ನಲ್ಲಿ 8ನೇ ತರಗತಿಯಿಂದ 10ನೇ ತರಗತಿಯ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಅವಕಾಶ ಕಲ್ಪಿಸಿರುವುದು ವಿಶೇಷ.

'ರಸಪ್ರಶ್ನೆ ಸ್ಪರ್ಧೆಯಲ್ಲಿ ಮಕ್ಕಳು ಗೆಲ್ಲುವುದಷ್ಟೇ ಗುರಿಯಲ್ಲ. ಅವರ ಭಾಗವಹಿಸುವಿಕೆಯೂ ಅಷ್ಟೇ ಮುಖ್ಯ. ಈ ಸ್ಪರ್ಧೆ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಪ್ರಗತಿಗಷ್ಟೇ ಅಲ್ಲ, ಭವಿಷ್ಯದಲ್ಲಿ ಅವರ ಉದ್ಯೋಗ, ವ್ಯಕ್ತಿತ್ವ ರೂಪುಗೊಳ್ಳುವಿಕೆಯಲ್ಲೂ ಮಹತ್ತರ ಪರಿಣಾಮ ಬೀರುವಂಥದ್ದು' ಎನ್ನುತ್ತಾರೆ 'ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್' ನಡೆಸಿಕೊಡುವ ಕ್ಯೂರಿಯಾಸಿಟಿ ನಾಲೆಜ್ ಸಲ್ಯೂಷನ್ಸ್‌ನ ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್.

ಸಾಮಾನ್ಯ ಜ್ಞಾನವೇ ಮುಖ್ಯ

ಸಾಮಾನ್ಯ ಜ್ಞಾನವೇ ರಸಪ್ರಶ್ನೆ ಸ್ಪರ್ಧೆಯ ಕೇಂದ್ರ ಬಿಂದು. ಇಲ್ಲಿ ತರಗತಿಗಳಲ್ಲಿದ್ದಂತೆ ನಿರ್ದಿಷ್ಟ ಸ್ವರೂಪದ ಪಠ್ಯವಾಗಲೀ, ವಿಷಯವಾಗಲಿ ಇರುವುದಿಲ್ಲ. ಮಕ್ಕಳು ಪ್ರತಿನಿತ್ಯ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಏನು ನೋಡುತ್ತಾರೋ, ಓದುವರೋ ಅದಕ್ಕೆ ಸಂಬಂಧಿಸಿದ ವಿಷಯಗಳೇ ಇರುತ್ತವೆ. ಮಕ್ಕಳಲ್ಲಿ ಸಾಮಾನ್ಯವಾಗಿ ಎಲ್ಲ ವಿಷಯಗಳ ಬಗ್ಗೆ ಕುತೂಹಲವಿರುತ್ತದೆ. ಆ ಕುತೂಹಲವೇ ಜ್ಞಾನ ಸಂಪಾದನೆಯತ್ತ ಕೊಂಡೊಯ್ಯುವ ಮಾರ್ಗ. ಓದುವ ಸಂಸ್ಕೃತಿ ಕಡಿಮೆಯಾಗಿದೆ ಎಂದು ಹೇಳುತ್ತಿರುವ ಈ ದಿನಗಳಲ್ಲಿ ಮಕ್ಕಳಲ್ಲಿ ಓದುವ ಕಲೆಯನ್ನು ರೂಢಿಗತ ಮಾಡಲು ರಸಪ್ರಶ್ನೆ ಸ್ಪರ್ಧೆ ಸಹಕಾರಿಯಾಗಲಿದೆ.

ಅಕ್ಕಪಕ್ಕದ ದೇಶಗಳಷ್ಟೇ ಅಲ್ಲ ಸ್ಥಳೀಯವಾಗಿ ಘಟಿಸುತ್ತಿರುವ ಸಂಗತಿಗಳ ಬಗ್ಗೆಯೂ ರಸಪ್ರಶ್ನೆ ಸ್ಪರ್ಧೆಯಲ್ಲಿ ಗಮನ ಹರಿಸಲಾಗುತ್ತದೆ. ಸ್ಥಳೀಯ, ರಾಜ್ಯ, ರಾಷ್ಟ್ರೀಯ, ವಿದೇಶದಲ್ಲಿನ ಬೆಳವಣಿಗೆಗಳ ಬಗ್ಗೆಯೂ ಗಮನಕೇಂದ್ರೀಕೃತವಾಗಿರುತ್ತದೆ. ಇದರ ಜತೆಗೆ ವಿವಿಧ ಕ್ಷೇತ್ರಗಳ ಕುರಿತಂತೆಯೂ ಪ್ರಶ್ನೆಗಳಿರುತ್ತವೆ. ಪ್ರೌಢಶಾಲಾ ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ರೂಪಿಸಲಾಗಿರುವ ಈ ರಸಪ್ರಶ್ನೆ ಸ್ಪರ್ಧೆಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಮಾಧ್ಯಮಗಳ ವಿದ್ಯಾರ್ಥಿಗಳಿಗೆ ಸಮಾನವಾಗಿ ಅವಕಾಶ ಕಲ್ಪಿಸಿರುವುದು ವಿಶೇಷ ಎನ್ನುತ್ತಾರೆ ಮೇಘವಿ.

ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್‌ನಲ್ಲಿ ಮುಖ್ಯವಾಗಿ ಎರಡು ಘಟ್ಟಗಳಿವೆ. ನೋಂದಾಯಿತ ವಿದ್ಯಾರ್ಥಿಗಳಿಗೆ ವಲಯವಾರುಮಟ್ಟದಲ್ಲಿ ಲಿಖಿತ ಪರೀಕ್ಷೆ ಇರುತ್ತದೆ. ಇದರಲ್ಲಿ ಆಯ್ಕೆಯಾದ ಆರು ವಿದ್ಯಾರ್ಥಿಗಳಿಗೆ ವೇದಿಕೆಯಲ್ಲಿ ಒಟ್ಟು ಐದು ಸುತ್ತುಗಳಲ್ಲಿ ರಸಪ್ರಶ್ನೆ ಸ್ಪರ್ಧೆ ನಡೆಯುತ್ತದೆ. ಒಟ್ಟು 90 ನಿಮಿಷಗಳ ಈ ಸ್ಪರ್ಧೆಯಲ್ಲಿ ಆಯ್ಕೆಯಾದವರು ರಾಜ್ಯಮಟ್ಟಕ್ಕೆ ಬರುತ್ತಾರೆ. ಅಲ್ಲಿ ಸರಿಯಾಗಿ ಉತ್ತರಿಸಿದವರೇ 'ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್' ಗೆಲುವಿನ ವಾರಸುದಾರರಾಗುತ್ತಾರೆ.

ಕ್ವಿಜ್ ಕಾರ್ಯಕ್ರಮಗಳ ಮುಖ್ಯ ಆಕರ್ಷಣೆಯೇ ವಿಷಯ ಸಂಪತ್ತು ಹಾಗೂ ಪ್ರಶ್ನೆಗಳ ನಿರೂಪಣೆ. ಇಲ್ಲಿ ನಮ್ಮ ನೆನಪಿನ ಶಕ್ತಿಗಿಂತ ಬುದ್ಧಿಮತ್ತೆಯ ಪರೀಕ್ಷೆ ನಡೆಯುತ್ತದೆ. ನಮ್ಮಲ್ಲಿರುವ ತಾರ್ಕಿಕ ಆಲೋಚನಾ ಶಕ್ತಿಯನ್ನು ಒರೆಗೆ ಹಚ್ಚಲು ಇದು ಉತ್ತಮ ವೇದಿಕೆ. ಸತತವಾಗಿ ಕ್ವಿಜ್ ಚಾಂಪಿಯನ್‌ಶಿಪ್ ನಡೆಸುತ್ತಿರುವ 'ಪ್ರಜಾವಾಣಿ' ಈಗಾಗಲೇ ಗ್ರಾಮೀಣ ಮಟ್ಟದಲ್ಲಿ ಕ್ವಿಜ್ ಸಂಸ್ಕೃತಿ ರೂಪುಗೊಳ್ಳಲು ಕಾರಣವಾಗಿದೆ. ಗ್ರಾಮೀಣ ಮಕ್ಕಳಲ್ಲಿ ಆತ್ಮವಿಶ್ವಾಸ ಹಾಗೂ ಸಂವಹನ ಕಲೆಯನ್ನು ವೃದ್ಧಿಸುವಲ್ಲಿ ಇದು ಪ್ರಮುಖ ಪಾತ್ರ ಬೀರುತ್ತಿದೆ.

ಕೂತಹಲ ತಣಿಸುವ ರಸಪ್ರಶ್ನೆ

ಮಕ್ಕಳಲ್ಲಿನ ಅಪಾರ ಕುತೂಹಲವನ್ನು ತಣಿಸುವ ಕೆಲಸ ಮಾಡುವ ರಸಪ್ರಶ್ನೆ ಸ್ಪರ್ಧೆಯು ಅವರಲ್ಲಿ ನಾಯಕತ್ವ ಗುಣ, ಗುಂಪಿನೊಂದಿಗೆ ಹೊಂದಾಣಿಕೆ, ಸ್ವಕಲಿಕಾ ಸಾಮರ್ಥ್ಯವನ್ನೂ ಅಭಿವೃದ್ಧಿಪಡಿಸುತ್ತದೆ. ಗುಂಪಿನಲ್ಲಿದ್ದುಕೊಂಡು ಹೇಗೆ ಕೆಲಸ ಮಾಡಬೇಕು. ಎಲ್ಲರೊಂದಿಗೆ ಹೇಗೆ ಸಮನ್ವಯ ಸಾಧಿಸಬೇಕೆಂಬ ಕೌಶಲ ವೃದ್ಧಿಸುವುದು ರಸಪ್ರಶ್ನೆ ಕಾರ್ಯಕ್ರಮಗಳ ಮುಖ್ಯ ಉದ್ದೇಶ. ಒಬ್ಬೊಬ್ಬರಲ್ಲೂ ಒಂದೊಂದು ರೀತಿಯ ಜ್ಞಾನ, ಮಾಹಿತಿ ಇರುತ್ತದೆ. ಅದನ್ನು ಸಮಗ್ರವಾಗಿ ಹೇಗೆ ಪ್ರಸ್ತುತಪಡಿಸಬೇಕು ಎಂಬುದನ್ನು ಮಕ್ಕಳನ್ನು ಕಲಿಯುತ್ತಾರೆ. ಸಮಸ್ಯೆಗಳನ್ನು ಬಗೆಹರಿಸುವ ಕೌಶಲವನ್ನು ಕಲಿಯುತ್ತಾರೆ.

ಅಂಕ ಗಳಿಕೆಯಷ್ಟೇ ಅಲ್ಲ, ಸಂವಹನ ಕಲೆಯೂ ಮುಖ್ಯ

ಈಗಿನ ಪೀಳಿಗೆಯ ಮಕ್ಕಳು ಬುದ್ಧಿವಂತರು. ಚೆನ್ನಾಗಿ ಓದುತ್ತಾರೆ. ಒಳ್ಳೆಯ ಅಂಕಗಳನ್ನೂ ಗಳಿಸುತ್ತಾರೆ ನಿಜ. ಆದರೆ, ಯಾವುದಾದರೊಂದು ವಿಷಯ ಕೊಟ್ಟು ಮಾತನಾಡಿ ಅಂದರೆ, ಅಲ್ಲಿ ಅವರಿಗೆ ಸಂವಹನದ ಸಮಸ್ಯೆ ಎದುರಾಗುತ್ತದೆ. ಈ ಸಮಸ್ಯೆ ಬಹುತೇಕ ಮಕ್ಕಳದ್ದಾಗಿದೆ, ಇದಕ್ಕೆ ಮುಖ್ಯ ಕಾರಣ ನಮ್ಮ ಶಿಕ್ಷಣ ವ್ಯವಸ್ಥೆ. ಶಿಕ್ಷಕರು ಪಾಠ ಮಾಡಿದರೆ, ಮಕ್ಕಳದ್ದು ಗ್ರಹಿಸುವ ಕಾರ್ಯ. ಆದರೆ, ಇಲ್ಲಿ ಇಬ್ಬರ ನಡುವೆ ಸಂವಾದ, ಪ್ರಶ್ನೋತ್ತರಕ್ಕೆ ಅತಿ ಕಡಿಮೆ ಅವಕಾಶವಿರುತ್ತದೆ.ಆದರೆ, ಕ್ವಿಜ್ ಹಾಗಲ್ಲ. ಇಲ್ಲಿ ನೀವು ಮಾತನಾಡುವುದು ಅನಿವಾರ್ಯ. ಕೆಲವೊಮ್ಮೆ ಒಂದು ಪದದ ಉತ್ತರವಷ್ಟೇ ಸಾಲದು, ವಿಷಯವನ್ನು ವಿಶ್ಲೇಷಿಸಿ, ತಾರ್ಕಿಕ ರೀತಿಯಲ್ಲಿ ವ್ಯಾಖ್ಯಾನಿಸಬೇಕಾಗುತ್ತದೆ. ಆಗ ಅಲ್ಲಿ ಸಂವಹನ ಕಲೆ ಉಪಯೋಗಕ್ಕೆ ಬರುತ್ತದೆ. ಕ್ವಿಜ್‌ನ ಕೌಶಲಯುಕ್ತ ಚಟುವಟಿಕೆಗಳು ಮಕ್ಕಳಲ್ಲಿ ಕ್ರೀಡಾ ಮನೋಭಾವವನ್ನೂ ಬೆಳೆಸುತ್ತದೆ. ಸೋಲು-ಗೆಲುವು ಎರಡನ್ನೂ ಸ್ವೀಕರಿಸುವ ಮನೋಭಾವವನ್ನು ಬೆಳೆಸುವುದು ಈ ಕಾಲಕ್ಕೆ ಮುಖ್ಯವಾದ ಸಂಗತಿ. ಒಟ್ಟಾರೆ ಹೇಳುವುದಾದರೆ ಮಕ್ಕಳ ವ್ಯಕ್ತಿತ್ವದ ಸಮಗ್ರ ಅಭಿವೃದ್ಧಿಗೆ ಕ್ವಿಜ್ ಸಹಕಾರಿ ಎನ್ನುತ್ತಾರೆ ಮೇಘವಿ. ❖

SCAN ME

ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ಕ್ವಿಜ್ ಎಲ್ಲೆಲ್ಲಿ? (ವಲಯವಾರು)	
ಡಿ.11	ಮೈಸೂರು
ಡಿ.12	ಮಂಗಳೂರು
ಡಿ.13	ಧಾರವಾಡ
ಡಿ.14	ದಾವಣಗೆರೆ
ಡಿ.16	ಬೆಂಗಳೂರು

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

42) ಪರ್ಯಾಯ ಪ್ರಸ್ಥಭೂಮಿ ಕುರಿತು ಬರೆಯಿರಿ

ಉತ್ತರ: ಪರ್ಯಾಯ ಪ್ರಸ್ಥಭೂಮಿಯು ಭಾರತದ ಭೂಸ್ವರೂಪ ವಿಭಾಗಗಳಲ್ಲಿ ಅತಿ ದೊಡ್ಡದು. ಅಲ್ಲದೆ ಭೂ ಇತಿಹಾಸದ ಪ್ರಕಾರ ಇದು 'ಅತಿ ಪುರಾತನ'ವಾಗಿದ್ದು ಭೂ ಖಂಡಗಳ ಆರಂಭದಲ್ಲಿದ್ದ ಗೊಂಡ್ವಾನ ಭೂರಾಶಿಯ ಒಂದು ಭಾಗವಾಗಿದೆಯೆಂದು ಭೂ–ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಈ ಪ್ರಸ್ಥಭೂಮಿಯು ಸಟ್ಲಜ್–ಗಂಗಾ ಮೈದಾನದ ದಕ್ಷಿಣದಲ್ಲಿ ಹಿಂದೂ ಮಹಾಸಾಗರದವರೆಗೂ ಚಾಚಿಕೊಂಡಿದೆ. ಇದರ ಒಟ್ಟು ಕ್ಷೇತ್ರ ಸುಮಾರು 16 ಲಕ್ಷ ಚ.ಕಿ.ಮೀ. ಇದು ಉತ್ತರದಲ್ಲಿ ಅರಾವಳಿ ಪರ್ವತದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೂ ಹರಡಿದೆ. ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿಂದ ಪೂರ್ವದಲ್ಲಿ 'ಜಾರ್ಖಂಡ್'ನ ರಾಜಮಹಲ್ ಬೆಟ್ಟಗಳವರೆಗೆ ಸುಮಾರು 1400 ಕಿ.ಮೀ ಅಗಲವಾಗಿದೆ. ಈ ಪರ್ಯಾಯ ಪ್ರಸ್ಥಭೂಮಿಯು ತ್ರಿಕೋನಾಕೃತಿಯಲ್ಲಿದ್ದು ಉತ್ತರದಲ್ಲಿ ಅಗಲವಾಗಿದ್ದು ದಕ್ಷಿಣದ ಕಡೆಗೆ ಕಿರಿದಾಗಿದೆ. ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಪೂರ್ವದಲ್ಲಿ ಬಂಗಾಳಕೊಲ್ಲಿ ಹಾಗೂ ದಕ್ಷಿಣದಲ್ಲಿ ಹಿಂದೂ ಮಹಾಸಾಗರಗಳನ್ನು ಇದು ಒಳಗೊಂಡಿದೆ

ಈ ಪ್ರಸ್ಥಭೂಮಿಯ ಉತ್ತರಭಾಗದಲ್ಲಿ ಪ್ರಮುಖವಾಗಿ ವಿಂಧ್ಯ ಪರ್ವತಗಳು, ಸಾತ್ಪುರಾ ಬೆಟ್ಟ, ಅರಾವಳಿ ಬೆಟ್ಟಗಳು, ಮಾಳ್ವ ಪ್ರಸ್ಥಭೂಮಿಗಳಿದ್ದು ಇವುಗಳ ಮಧ್ಯದಲ್ಲಿ ನರ್ಮದಾ ಮತ್ತು ತಪತಿ ನದಿ ಹಾಗೂ ದಾಮೋದರ ನದಿಗಳಲ್ಲದೇ ಅನೇಕ ಚಿಕ್ಕ ನದಿಗಳು ಹರಿಯುತ್ತವೆ. ಇವೆಲ್ಲವುಗಳನ್ನು ಕೇಂದ್ರ ಪ್ರಸ್ಥಭೂಮಿ ಎನ್ನುವರು. ಇವುಗಳ ದಕ್ಷಿಣದಲ್ಲಿ ದಖನ್ ಪ್ರಸ್ಥಭೂಮಿಯಿದ್ದು, ಮಹಾದೇವ, ಮೈಕಲ್ ಶ್ರೇಣಿ, ಅಮರ ಕಂಟಕ ಬೆಟ್ಟಗಳು, ರಾಜಮಹಲ ಬೆಟ್ಟಗಳು ಇದರ ಉತ್ತರದಲ್ಲಿವೆ. ದಖನ್ ಪ್ರಸ್ಥಭೂಮಿಯ ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿವೆ. ಇವುಗಳನ್ನು ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಸಹ್ಯಾದ್ರಿ ಎಂದು ಕರೆಯುತ್ತಾರೆ.

ಅಣ್ಣಾಮಲೈ ಸರಣಿಯ ಆನೈಮುಡಿ ಶಿಖರ ದಕ್ಷಿಣ ಭಾರತದಲ್ಲಿಯೇ ಅತ್ಯುನ್ನತ ಪ್ರದೇಶವಾಗಿದೆ.

ದಖನ್ ಪ್ರಸ್ಥಭೂಮಿಯ ಪೂರ್ವಕ್ಕೆ ಪೂರ್ವಘಟ್ಟಗಳಿವೆ. ಅವು ಪಶ್ಚಿಮ ಘಟ್ಟಗಳನ್ನು ನೀಲಗಿರಿ ಬೆಟ್ಟಗಳಲ್ಲಿ ಸಂಧಿಸುತ್ತವೆ. ಪೂರ್ವ ಘಟ್ಟಗಳು ಹೆಚ್ಚು ಎತ್ತರವಾಗಿಲ್ಲ ಮತ್ತು ನಿರಂತರವಾಗಿಯೂ ಇಲ್ಲ. ಆರ್ಮಕೊಂಡ ಮತ್ತು ಮಹೇಂದ್ರಗಿರಿ ಇಲ್ಲಿರುವ ಎತ್ತರವಾದ ಶಿಖರಗಳು. ಈ ಘಟ್ಟಗಳು ನದಿ ಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ.

43) ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ:– ನಿಜ! ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ. ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

44) ಕರಾವಳಿಯ ಬಗ್ಗೆ ಬರೆಯಿರಿ

ಉತ್ತರ:– ಭಾರತದ ಕರಾವಳಿಯನ್ನು 'ಪಶ್ಚಿಮ ಕರಾವಳಿ' ಮತ್ತು 'ಪೂರ್ವ ಕರಾವಳಿ' ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಪಶ್ಚಿಮ ಕರಾವಳಿಯು ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಗುಜರಾತಿನ ಕಛ್‌ನಿಂದ ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಗುಜರಾತಿನ ಕಛ್‌ನಿಂದ ಕನ್ಯಾಕುಮಾರಿ ಭೂಶಿರದವರೆಗೆ 1500 ಕಿ.ಮೀ.ಗಳಷ್ಟು ಉದ್ದವಾಗಿದೆ. ಇದನ್ನು ಕೇರಳದಲ್ಲಿ ಮಲಬಾರ್ ತೀರ, ಕರ್ನಾಟಕದಲ್ಲಿ ಕರ್ನಾಟಕ ಅಥವಾ ಕೆನರಾ ತೀರ, ಗೋವಾ ಮತ್ತು ಮಹಾರಾಷ್ಟ್ರದಲ್ಲಿ ಕೊಂಕಣ ತೀರ ಮತ್ತು ಗುಜರಾತಿನಲ್ಲಿ ಗುಜರಾತ್ ತೀರ ಎಂದು ವಿಂಗಡಸಲಾಗಿದೆ.

ಮುಂಬೈ, ಮರ್ಮಗೋವಾ, ಕೊಚ್ಚಿನ್, ಕಾಂಡ್ಲಾ, ಕಾರವಾರ, ಮಂಗಳೂರು ಇಲ್ಲಿನ ಮುಖ್ಯ ಬಂದರುಗಳಾಗಿವೆ.

ಕನ್ಯಾಕುಮಾರಿಯಿಂದ ಉತ್ತರದಲ್ಲಿ ಗಂಗಾ ನದಿ ಮುಖಜ ಭೂಮಿಯವರೆಗೆ ಪೂರ್ವ ಘಟ್ಟಗಳು ಹಬ್ಬಿವೆ. ಪೂರ್ವ ಘಟ್ಟ ಹಾಗೂ ಬಂಗಾಳಕೊಲ್ಲಿಯ ನಡುವೆ ಪೂರ್ವ ಕರಾವಳಿ ಮೈದಾನವಿದೆ. ಈ ಕರಾವಳಿಯ ಮೈದಾನವು ಹೆಚ್ಚು ಅಗಲ ಮತ್ತು ಒಂದೇ ರೀತಿ ಸಮತಟ್ಟಾಗಿದೆ. ಇದು ಮಹಾನದಿ, ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳ ಮುಖಜ ಭೂಮಿಗಳನ್ನು ಒಳಗೊಂಡಿದೆ. ಪೂರ್ವ ತೀರದಲ್ಲಿ ಸಮುದ್ರದ ಉಪ್ಪು ನೀರಿನಿಂದ ನಿರ್ಮಿತವಾದ ಕೆಲವು ಸರೋವರ ಅಥವಾ ಲಗೂನ್‌ಗಳಿವೆ. ಇವುಗಳಲ್ಲಿ ಒಡಿಸ್ಸಾದ ಚಿಲ್ಕಾ, ತಮಿಳುನಾಡಿನ 'ಪುಲಿಕಾಟ್' ಸರೋವರಗಳು ಮುಖ್ಯವಾಗಿವೆ. ಪೂರ್ವ ಕರಾವಳಿಯನ್ನು ಉತ್ಕಲ ತೀರ ಮತ್ತು ಕೋರಮಂಡಲ ತೀರ ಎಂದು ವಿಂಗಡಿಸಲಾಗಿದೆ.

45) ಭಾರತದ ದಕ್ಷಿಣದ ತುತ್ತತುದಿ ಯಾವುದು?

ಉತ್ತರ:– ನಿಕೋಬಾರ್ ದ್ವೀಪದಲ್ಲಿ ಇಂದಿರಾ ಪಾಯಿಂಟ್ ಭಾರತದ ದಕ್ಷಿಣದ ತುತ್ತತುದಿಯಾಗಿದೆ.

46) ಬಿಟ್ಟ ಸ್ಥಳ ತುಂಬಿ

1) ಇಂಡಿಯಾ ಎಂಬ ಹೆಸರು ...... ನದಿಯಿಂದ ಬಳಕೆಗೆ ಬಂದಿದೆ.
ಉತ್ತರ:– ಸಿಂಧೂ

2) ಭಾರತವು ಒಟ್ಟು .... ಚದರ ಕಿ.ಮೀಗಳಷ್ಟು ವಿಸ್ತಾರವಾಗಿದೆ.
ಉತ್ತರ:– 32,87,263 (ಅಂದರೆ 32.87 ಲಕ್ಷ) ಚದರ ಕಿ.ಮಿ

3) ಭಾರತದ ಮಧ್ಯಭಾಗದಲ್ಲಿ..................ಉತ್ತರ ಅಕ್ಷಾಂಶ ಹಾಯ್ದು ಹೋಗುತ್ತದೆ.
ಉತ್ತರ:– $82^{0}.5'$

4) ಭಾರತದ ದಕ್ಷಿಣ ತುದಿಯಲ್ಲಿರುವ ದೇಶ ....
ಉತ್ತರ:– ಶ್ರೀಲಂಕ

5) ಭಾರತವು ಹೊಂದಿರುವ ಉದ್ದವಾದ ಕರಾವಳಿಯು ....ಕಿ.ಮೀ.ಗಳಷ್ಟು ಆಗಿದೆ.
ಉತ್ತರ:– 6100

6) ದಕ್ಷಿಣ ಭಾರತದ ಎತ್ತರವಾದ ಶಿಖರ ....
ಉತ್ತರ:– ಆನೆಮುಡಿ

7) ಮಹಾ ಹಿಮಾಲಯವನ್ನು ....ಎಂದೂ ಕರೆಯುವರು.
ಉತ್ತರ:– ಹಿಮಾದ್ರಿ

8)..................ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾಗಿದೆ.
ಉತ್ತರ:– ಮೌಂಟ್ ಎವೆರೆಸ್ಟ್

9) ಉತ್ತರ ಭಾರತದ ಮೈದಾನವು .... ಮಣ್ಣಿನಿಂದ ನಿರ್ಮಾಣವಾಗಿದೆ.
ಉತ್ತರ:– ಮೆಕ್ಕಲು

10) ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳನ್ನು .... ಎಂದು ಕರೆಯುವರು.
ಉತ್ತರ:– ಸಹ್ಯಾದಿ

11) ....ಎಂಬುದು ಭಾರತದಲ್ಲಿ ಅತಿ ಎತ್ತರವಾದ ಶಿಖರವಾಗಿದೆ.
ಉತ್ತರ:– ಗಾಡ್ವಿನ್‌ಆಸ್ಟಿನ್ ಅಥವಾ $ಕೆ_2$

13) ಭಾರತದ ಉತ್ತರದ ತುತ್ತತುದಿ.......................
ಉತ್ತರ:– ಇಂದಿರಾಕೂಲ್

14) ಭಾರತದ ದಕ್ಷಿಣದ ತುತ್ತತುದಿ ....
ಉತ್ತರ:– ಇಂದಿರಾ ಪಾಯಿಂಟ್

15) ಭಾರತದ ಭೂಸ್ವರೂಪಗಳಲ್ಲಿ ಅತಿದೊಡ್ಡದು ....
ಉತ್ತರ:– ಪರ್ಯಾಯ ಪ್ರಸ್ಥಭೂಮಿ

16) ಭಾರತ ಮತ್ತು ಚೀನಾದ ನಡುವೆ ಎಳೆದಿರುವ ರೇಖೆ ....
ಉತ್ತರ:– 'ಮ್ಯಾಕ್‌ಮೋಹನ್' (McMohan line) ರೇಖೆ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

II PUC : CHEMISTRY
CHEMICAL KINETICS

3. Define rate constant of the reaction.
Ans:- The rate constant or the velocity constant 'k' of the reaction is equal to the velocity of the reaction when the molar concentrations of the reactant are unity.

4. What is mechanism of the reaction?
Ans:- The step by step sequence in which a chemical reaction takes place is called the mechanism of the reaction.

5. What is molecularity of the reaction?
Ans:- The molecularity is the total number of the molecules or atoms of various reactants that take part in a chemical reaction as represented by a balanced chemical equation for a single step reaction or an elementary reaction.

6. Mention the factors influencing the rates of Chemical reactions.
Ans:- The factors influencing the rates of Chemical reactions are –
(a) Concentration of reactants
(b) Temperature
(c) Presence of Catalyst
(d) Nature of reactants
(e) Surface area
(f) Exposure to radiations.

7. State the law of mass action?
Ans:- The law of mass action states that –
"The rate of the reaction is directly proportional to the product of the active masses of the reactants, at constant temperature."
For a reaction A + B → C + D, velocity of the reaction is

$$v \alpha [A][B] \text{ (or) } v = k[A][B]$$

8. What is rate equation?
Ans:- The rate equation (rate law) is an expression that relates velocity of the reaction to the molar concentrations of the reactants.
Eg:- For a reaction A + B → C + D, the rate equation is $v = k[A][B]$

9. How does the presence of a catalyst influence the rate of a reaction?
Ans:- The catalyst is a substance which influences the rate of the reaction without undergoing any chemical change by itself.
Eg:- A mixture of H_2 and O_2 does not react at the room temperature. However, in the presence of the catalyst such as finely divided platinum, the reaction becomes quite vigorous.

10. What is unimolecular reaction?
Ans:- A reaction in which only one molecule takes part is called the unimolecular reaction.
Eg:- $PCl_5 \rightarrow PCl_3 + Cl_2$

11. What is bimolecular reaction?
Ans:- A reaction is said to be bimolecular if two molecules take part in the reaction.
Eg:- Formation of hydrogen iodide

$$H_2 + I_2 \rightarrow 2HI$$

12. What is termolecular reaction?
Ans:- A reaction is said to be termolecular if three molecules take part in the reaction. *Eg:-* Oxidation of stannous chloride by ferric chloride

$$2FeCl_3 + SnCl_2 \rightarrow 2FeCl_2 + SnCl_4$$

13. What is homogeneous reaction?
Ans:- The homogeneous reaction is the reaction in which all the reactants and products are in the same physical state. *Eg:-* Formation of nitric oxide from nitrogen & oxygen in the gaseous phase.

$$N_2(g) + O_2(g) \rightarrow 2NO(g)$$

14. What is heterogeneous reaction?
Ans:- The heterogeneous reaction is the reaction in which the reactants and products constitute more than one phase.
Eg:- Dissociation of calcium carbonate

$$CaCO_3(s) + CaO(s) \rightarrow CO_2(g)$$

15. Give the relation between the half life period and the zero order reaction.
Ans:- The relation between the half life period and the zero order reaction is given by -

$$t_{1/2} = \frac{a}{2k} \text{ (or) } t_{1/2} \alpha a$$

Hence, the half life of the zero order reaction is directly proportional to the initial concentration.

16. Give the relation between the half life period and the first order reaction.
Ans:- The relation between the half life period and the first order reaction is given by -

$$t_{1/2} = \frac{0.693}{k}$$

Hence, the half life of the first order reaction is independent of the initial concentration.

17. Give the relation between the half life period and the second order reaction.
Ans:- The relation between the half life period and the second order reaction is given by -

$$t_{1/2} = \frac{1}{ak} \text{ (or) } t_{1/2} \alpha \frac{1}{a}$$

Hence, the half life of the second order reaction is inversely proportional to the initial concentration.

18. Give the relation between the half life period and the nth order reaction.
Ans:- The relation between the half life period and the nth order reaction is given by -

$$t_{1/2} \alpha \frac{1}{a^{n-1}}$$

19. Mention the methods of determining the order of the reaction.
Ans:- The methods of determining the order of the reaction are – Graphical method and Ostwald's isolation method.

20. What is meant by temperature coefficient of the reaction?
Ans:- The ratio of the rate constant of a reaction at a given temperature to its rate constant at a ten degree lower temperature is called the temperature coefficient of the reaction.

$$\frac{k_{t+10}}{k_t} = 2 \text{ to } 3 = \text{temperature coefficient}$$

(Contd.....)

ಸಿದ್ಧಲಿಂಗ ಪಟ್ಟಣಶೆಟ್ಟಿ ಅಭಿಮತ • 'ಪ್ರಜಾವಾಣಿ' ದೀಪಾವಳಿ ವಿಶೇಷಾಂಕ ಕಥೆ, ಕಾವ್ಯ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ


'ಸ್ವವಿಮರ್ಶೆಯಿಂದ ಉತ್ತಮ ಬರಹ ಸಾಧ್ಯ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಬಹುಮಾನ ದೊಡ್ಡದಲ್ಲ. ಶಾಶ್ವತ ಹಾಗೂ ಸ್ಥಿರವಾದದ್ದೂ ಅಲ್ಲ. ಆದರೆ, ನಿಮ್ಮ ಕಥೆ, ಕವನದ ಓದುಗರ ಬಳಗವು ಕೊಡುವಂತಹ ಪ್ರಶಸ್ತಿಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಹೀಗಾಗಿ ಬರವಣಿಗೆಯನ್ನು ನಿಲ್ಲಿಸಬಾರದು. ರಚನಾತ್ಮಕ, ಕ್ರಿಯಾತ್ಮಕವಾದ ಬರಹವನ್ನು ಮುಂದುವರಿಸಬೇಕು' ಎಂದು ಸಾಹಿತಿ ಸಿದ್ಧಲಿಂಗ ಪಟ್ಟಣಶೆಟ್ಟಿ ಸಲಹೆ ನೀಡಿದರು.

ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಭಾನುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಪ್ರಜಾವಾಣಿ' ದೀಪಾವಳಿ ವಿಶೇಷಾಂಕ–2023ರ ಕಥೆ ಹಾಗೂ ಕಾವ್ಯ ಸ್ಪರ್ಧೆಗಳ ವಿಜೇತರಿಗೆ ಬಹುಮಾನವನ್ನು ವಿತರಿಸಿ ಅವರು ಮಾತನಾಡಿದರು.

'ಬಹುಮಾನಗಳು ಎಂದಿಗೂ ನಿಮ್ಮ ಜವಾಬ್ದಾರಿಯನ್ನು ಹೆಚ್ಚಿಸುತ್ತವೆ. ಹೊಸ ವಿಷಯಗಳ ಕುರಿತು ನಿರಂತರವಾಗಿ ಬರೆಯುತ್ತಲೇ ಇರಬೇಕು. ಬರಹಗಾರನು ಖುಷಿ ಮನಸ್ಥಿತಿಯನ್ನು ಹೊಂದಿರಬೇಕು. ಆಗ ಸಹಜವಾಗಿಯೇ ಉತ್ತಮ ಕಥೆ, ಕವನ ರೂಪುಗೊಳ್ಳುತ್ತವೆ. ಕಥೆ, ಕವನ, ಬರಹ ರಚಿತವಾದ ನಂತರ ಬರೆದವರು ತನ್ನ ಕೃತಿಗೆ ಸ್ವತಃ ತಾನೇ ಓದುಗ, ವಿಮರ್ಶಕನಾಗಬೇಕು. ಆಗ ಮಾತ್ರ ಇನ್ನೂ ಉತ್ತಮವಾದ ಬರಹಗಳು ರೂಪುಗೊಳ್ಳಲು ಸಾಧ್ಯವಾಗುತ್ತವೆ' ಎಂದು ಸ್ಪರ್ಧಾ ವಿಜೇತರಿಗೆ ಕಿವಿಮಾತು ಹೇಳಿದರು.



ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಭಾನುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಪ್ರಜಾವಾಣಿ' ದೀಪಾವಳಿ ವಿಶೇಷಾಂಕ–2023ರ ಕಥೆ ಹಾಗೂ ಕಾವ್ಯ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು. (ನಿಂತವರು–ಎಡದಿಂದ) 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿ, ಧಾರವಾಡದ ಉನ್ನತ ಶಿಕ್ಷಣ ಅಕಾಡೆಮಿಯ ನಿವೃತ್ತ ನಿರ್ದೇಶಕ ಪ್ರೊ.ಎಸ್ ಎಂ.ಶಿವಪ್ರಸಾದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಇದ್ದಾರೆ –ಪ್ರಜಾವಾಣಿ ಚಿತ್ರ

'ಪ್ರಜಾವಾಣಿ' ಏರ್ಪಡಿಸುವ ಕಥಾ ಸ್ಪರ್ಧೆಯಲ್ಲಿ ಬಹುಮಾನ ಗೆಲ್ಲಬೇಕು ಎನ್ನುವುದು ಎಲ್ಲ ಬರಹಗಾರರ ಕನಸಾಗಿರುತ್ತದೆ. ನನಗೆ ಈ ಅವಕಾಶ ಸಿಕ್ಕಿದ್ದು ಖುಷಿ ಕೊಟ್ಟಿದೆ. ಬರಹಗಾರರಿಗೆ ಇಂತಹ ಸ್ಪರ್ಧೆಗಳು ಅನುಕೂಲಕರ. ಈ ಪ್ರಶಸ್ತಿಯು ನನ್ನಲ್ಲಿ ಹುಮ್ಮಸ್ಸು ಮತ್ತು ಜವಾಬ್ದಾರಿ ಹೆಚ್ಚಿಸಿದೆ

ಸಂಪತ್ ಸಿರಿಮನೆ, ಕಥಾಸ್ಪರ್ಧೆಯ ಪ್ರಥಮ ಬಹುಮಾನ ವಿಜೇತರು

'ಪ್ರಜಾವಾಣಿ' ಏರ್ಪಡಿಸುವ ಕವನ ಸ್ಪರ್ಧೆಯಲ್ಲಿ ಪ್ರಶಸ್ತಿ ಸಿಕ್ಕರೆ ಅದು ನೊಬೆಲ್ ಪ್ರಶಸ್ತಿ ಸಿಕ್ಕಷ್ಟೇ ಖುಷಿ. ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕೆಲಸವನ್ನು 'ಪ್ರಜಾವಾಣಿ' ಮಾಡುತ್ತಿದೆ. ನಾನು ಕಲಿತ ಊರಿನಲ್ಲೇ ಪ್ರಶಸ್ತಿ ಪಡೆದಿರುವುದು ಸಂತಸ ತಂದಿದೆ

ಲಕ್ಷ್ಮಣ ವಿ.ಎ., ಕವನ ಸ್ಪರ್ಧೆಯ ಪ್ರಥಮ ಬಹುಮಾನ ವಿಜೇತರು

'ಯಾವುದೇ ಕಥೆ, ಕವನ ಬರೆದ ನಂತರ ಸಾಧ್ಯವಾದರೆ ಸ್ನೇಹಿತರ ಬಳಗದೊಂದಿಗೆ ಚರ್ಚಿಸಿ, ಅವರ ಮಾತುಗಳನ್ನೂ ಆಲಿಸಿ. ಅದು ಕ್ರಿಯಾತ್ಮಕ ಬರಹಕ್ಕೆ ನೆರವಾಗಲಿದೆ. ನಮ್ಮ ಕೃತಿಗಳಿಗೆ ಓದುಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುವಂತಿರಬೇಕು' ಎಂದರು.

'ಪ್ರಜಾವಾಣಿ' ದೀಪಾವಳಿ ವಿಶೇಷಾಂಕದ ಸ್ಪರ್ಧೆಯಲ್ಲಿ ಬಹುಮಾನ ದೊರೆಯುವುದೇ ದೊಡ್ಡ ಗೌರವ. ಈ ಗೌರವ ಸಿಕ್ಕ ನಂತರ ಮತ್ತೊಮ್ಮೆ ನೀವು ವಿಮರ್ಶೆಗೆ ಒಳಪಡಿಸಿಕೊಳ್ಳಬೇಕು. ಕಾಲಕ್ಕೆ ಅನುಗುಣವಾಗಿ ಮತ್ತಷ್ಟು ಉತ್ತಮ ಕಥೆ, ಕವನಗಳ ರಚನೆಯತ್ತ ಗಮನಹರಿಸಬೇಕು' ಎಂದು ಸಲಹೆ ನೀಡಿದರು.

ಬಹುಮಾನ ವಿತರಣೆ: 'ಪ್ರಜಾವಾಣಿ' ದೀಪಾವಳಿ ವಿಶೇಷಾಂಕ–2023ರ ಕಥಾ ಸ್ಪರ್ಧೆಯಲ್ಲಿ ಸಂಪತ್ ಸಿರಿಮನೆ ಅವರ ಕಥೆ 'ಪತನ' ಕೃತಿಗೆ ಪ್ರಥಮ ಬಹುಮಾನ, ಸಿದ್ದು ಸತ್ಯಣ್ಣವರ ಅವರ 'ಒಂದು ತೇಗದ ಖುರ್ಚಿ' ದ್ವಿತೀಯ ಹಾಗೂ ಬಸವಣ್ಣೆಪ್ಪ ಕಂಬಾರ ಅವರ 'ಚಂದ್ರಾಮ ಕನ್ನಡಿ ಹರಳ' ಕಥೆಗೆ ತೃತೀಯ ಬಹುಮಾನ ನೀಡಲಾಯಿತು.

ಕವನ ಸ್ಪರ್ಧೆ: ಲಕ್ಷ್ಮಣ ವಿ.ಎ. ಅವರ ಕವನ 'ಬಾಲೆ, ಬೆತ್ತಲೆ ಬೊಂಬೆ ಮತ್ತು ಕಡಲು' (ಪ್ರಥಮ), ಮೆಹಬೂಬ ಮುಲ್ತಾನಿ ಅವರ 'ಮತ್ತೊಂದು ನರಕ' (ದ್ವಿತೀಯ), ಹೇಮಾ ಅವರ 'ಬೆಟ್ಟದೂರು ಮತ್ತು ನಾನು' ಕವನಕ್ಕೆ (ತೃತೀಯ) ಬಹುಮಾನ ನೀಡಲಾಯಿತು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಶಿವರಾಂ ಭಾಗ್ವತ್ ಕನಕನಹಳ್ಳಿ ಮತ್ತು ಸಂಗಡಿಗರು 'ಗಾನಲಹರಿ' ಕಾರ್ಯಕ್ರಮ ನಡೆಸಿಕೊಟ್ಟರು.

ಚಾಟ್ ಜಿಪಿಟಿ: ಎ.ಐ ತಂತ್ರಜ್ಞಾನ

'ಸಾಹಿತ್ಯ ಕ್ಷೇತ್ರವು ವಿಜ್ಞಾನ ಮತ್ತು ತಂತ್ರಜ್ಞಾನದೊಂದಿಗೆ ವೇಗವಾಗಿ ಬೆಳೆಯುತ್ತಿದೆ. ಇತ್ತೀಚಿನ ದಿನಗಳಲ್ಲಿ ಅಂತರ್‌ಜಾಲದಲ್ಲಿ 'ಚಾಟ್ ಜಿಪಿಟಿ' ತಂತ್ರಜ್ಞಾನ ಹೆಚ್ಚು ಸದ್ದು ಮಾಡುತ್ತಿದೆ. ಇದು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವಾಗಿದೆ. ಯಾವುದೇ ಬರಹವನ್ನು ಹಿಗ್ಗಿಸುವುದು, ಸರಳ ಮಾಡುವಲ್ಲಿ ಹೆಚ್ಚು ಉಪಯುಕ್ತವಾಗಿದೆ. ಹೀಗಾಗಿ ಸಾಹಿತ್ಯ ಕ್ಷೇತ್ರವು ವಿಜ್ಞಾನ, ತಂತ್ರಜ್ಞಾನದ ಜೊತೆ ಹೆಚ್ಚು ಬೆರೆತುಕೊಂಡಿದೆ' ಎಂದು ಧಾರವಾಡದ ಉನ್ನತ ಶಿಕ್ಷಣ ಅಕಾಡೆಮಿಯ ನಿವೃತ್ತ ನಿರ್ದೇಶಕ ಪ್ರೊ.ಎಸ್.ಎಂ.ಶಿವಪ್ರಸಾದ ಹೇಳಿದರು.

'ಸಾಹಿತ್ಯ, ಸಂಗೀತ ಹಾಗೂ ವಿಜ್ಞಾನ ಕ್ಷೇತ್ರ ಪರಸ್ಪರ ಪೂರಕ. ಸಾಹಿತ್ಯ ಮನ ಮುಟ್ಟುತ್ತದೆ. ವಿಜ್ಞಾನ ತಲೆಯೊಳಗೆ ಸೇರುತ್ತದೆ. ತಲೆ ಹಾಗೂ ಮನವನ್ನು ಮುಟ್ಟುವಂತಹ ಸಾಹಿತ್ಯ ಕೃತಿಗಳು ಇನ್ನೂ ಹೆಚ್ಚು ರಚನೆಯಾಗಬೇಕು' ಎಂದು ಸಲಹೆ ನೀಡಿದರು.



ನಂದಿಗೆ ಮಹಾಭಿಷೇಕ

ಮೈಸೂರಿನ ಚಾಮುಂಡಿಬೆಟ್ಟದಲ್ಲಿರುವ ನಂದಿ ವಿಗ್ರಹಕ್ಕೆ ಬೆಟ್ಟದ ಬಳಗ ಟ್ರಸ್ಟ್‌ನಿಂದ ಭಾನುವಾರ ಅರಿಸಿನದ ಮಹಾಭಿಷೇಕ ನಡೆಯಿತು

ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ

ನಿಷೇಧ: ಗಡಿಯಾಚೆ ಮಹಾಮೇಳಾವ್‌ಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಚಳಿಗಾಲದ ಅಧಿವೇಶನಕ್ಕೆ ವಿಘ್ನ ತರಲು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಆಯೋಜಿಸಿದ್ದ ಮಹಾಮೇಳಾವ್‌ಗೆ ಜಿಲ್ಲಾಡಳಿತ ತಡೆಯೊಡ್ಡಿದೆ. ಸಮಾವೇಶ ನಡೆಸಲುದ್ದೇಶಿದ್ದ ಕಡೆ ನಿಷೇಧಾಜ್ಞೆ ಹೇರಲಾಗಿದೆ. ಈ ಹಿನ್ನೆಲೆಯಲ್ಲಿ ಗಡಿಯಾಚೆಮ, ಮಹಾರಾಷ್ಟ್ರದ ಶಿನ್ನೋಳಿಯಲ್ಲಿ ಸಮಾವೇಶ ಮಾಡಲು ಎಂಇಎಸ್ ಮುಖಂಡರು ನಿರ್ಧರಿಸಿದ್ದಾರೆ.

ಪ್ರತಿಬಾರಿಯಂತೆ, ಅಧಿವೇಶನ ಸಂದರ್ಭದಲ್ಲಿ ಮಹಾಮೇಳಾವ್ ನಡೆಸಲು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿತ್ತು. ಜಿಲ್ಲಾಡಳಿತ ಅನುಮತಿ ನಿರಾಕರಿಸಿದ್ದರೂ ಸಮಾವೇಶ ಮಾಡಿಯೇ ಸಿದ್ಧ ಎಂದು ಎಂಇಎಸ್ ಮುಖಂಡರು ಹಟ ಹಿಡಿದರು.

ಡಿ.4ರಂದು ನಗರದ ವ್ಯಾಕ್ಸಿನ್ ಡಿಪೊದಲ್ಲಿ ಸಮಾವೇಶಕ್ಕೆ ಸಿದ್ಧತೆ ನಡೆದಿತ್ತು. ಜಿಲ್ಲಾಡಳಿತ ನಿಷೇಧಾಜ್ಞೆ ಹೇರಿದ ಬಳಿಕನಗರದ ಬೇರೆಡೆ ಸಮಾವೇಶಕ್ಕೆ ಎಂಇಎಸ್ ಸಿದ್ಧತೆ ನಡೆಸಿತ್ತು. ಸುಳಿವು ಪಡೆದ ಜಿಲ್ಲಾಡಳಿತ ನಗರದೆಲ್ಲೆಡೆ ನಿಷೇಧ ಜಾರಿ ಮಾಡಿದೆ.

'ಶಾಂತಿ– ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಮಹಾಮೇಳಾವ್‌ಗೆ ಅವಕಾಶ ನೀಡುವುದಿಲ್ಲ' ಎಂದು ನಗರ ಪೊಲೀಸ್ ಆಯುಕ್ತ ಎಸ್.ಎನ್. ಸಿದ್ರಾಮಪ್ಪ ತಿಳಿಸಿದ್ದಾರೆ.

'ಕರ್ನಾಟಕದ ಆಚೆ ಮಹಾರಾಷ್ಟ್ರ ಗಡಿಯಲ್ಲಿರುವ ಶಿನ್ನೋಳಿಯಲ್ಲಿ ಮಹಾ ಮೇಳಾವ್ ಮಾಡಲಾಗುವುದು. ಅಲ್ಲಿ ಅನುಮತಿ ಸಿಕ್ಕಿದೆ. ಮಹಾರಾಷ್ಟ್ರದ ಹಲವು ನಾಯಕರೂ ಪಾಲ್ಗೊಳ್ಳಲಿದ್ದಾರೆ' ಎಂದು ಎಂಇಎಸ್ ಮುಖಂಡರು ಮಾಹಿತಿ ನೀಡಿದ್ದಾರೆ.

ಮಾತಿನ ಚಕಮಕಿ: ವ್ಯಾಕ್ಸಿನ್ ಡಿಪೊ ಮೈದಾನದಲ್ಲಿ ಭಾನು ವಾರ ಬೆಳಿಗ್ಗೆ ಮಹಾ ಮೇಳಾವ್‌ಗೆ ಸಿದ್ಧತೆಗೆ ಎಸಿಪಿ ನಾರಾಯಣ ಭರಮನಿ, ಅಧಿಕಾರಿಗಳು ತಡೆಯೊಡ್ಡಿದರು. ಆಗ ಎಂಇಎಸ್ ಮುಖಂಡರಾದ ಮನೋಹರ ಕಿಣೇಕರ್, ರಾಜಾಬಾವು ಪಾಟೀಲ ಇತರರು ಪೊಲೀಸರ ಜೊತೆ ವಾಗ್ವಾದ ನಡೆಸಿದರು. ನಿಷೇಧಾಜ್ಞೆ ಮಾಹಿತಿ ನೀಡಿದ ಬಳಿಕ ನಿರ್ಗಮಿಸಿದರು.

ಎ.ಸಿ, ತಹಸೀಲ್ದಾರ್ ವಿರುದ್ಧ ಕ್ರಿಮಿನಲ್ ಪ್ರಕರಣ

ಬೆಂಗಳೂರು: ಬೆಂಗಳೂರು ಉತ್ತರ ವಿಭಾಗದ ವ್ಯಾಪ್ತಿಯಲ್ಲಿರುವ ಅರಣ್ಯ ಜಮೀನಿನ ದಾಖಲೆಗಳನ್ನು ಅಕ್ರಮವಾಗಿ 'ಸರ್ಕಾರಿ ಕಂದಾಯ ಜಮೀನು' ಎಂದು ತಿದ್ದುಪಡಿ ಮಾಡಿದ್ದ ಆರೋಪದಡಿ ಹಿಂದಿನ ಉಪ ವಿಭಾಗಾಧಿಕಾರಿ ಎಂ.ಜಿ. ಶಿವಣ್ಣ ಹಾಗೂ ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಆಗಿದ್ದ ಅಜಿತ್ ಕುಮಾರ್ ರೈ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಎಂ.ಎಂ.ಟಿ.ಸಿ 1ನೇ ನ್ಯಾಯಾಲಯ ಆದೇಶ ಹೊರಡಿಸಿದೆ.

ಬೆಂಗಳೂರು ನಗರ ವಿಭಾಗದ ಡಿಸಿಎಫ್ ಎನ್. ರವೀಂದ್ರ ಕುಮಾರ್ ಅವರು ಖಾಸಗಿ ಮೊಕದ್ದಮೆ ಹೂಡಿದ್ದರು. ಅದರ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅಧಿಕಾರಿಗಳಿಗೆ ಸೂಚಿಸಿದೆ.

ಏನಿದು ಪ್ರಕರಣ: ₹ 500 ಕೋಟಿ ಮಾರುಕಟ್ಟೆ ಮೌಲ್ಯದ 17 ಎಕರೆ 34 ಗುಂಟೆ ಅರಣ್ಯ ಭೂಮಿಯನ್ನು ಕಂದಾಯ ಭೂಮಿ ಎಂದು ತಿದ್ದುಪಡಿ ಮಾಡಲಾಗಿತ್ತು. ಈ ಭೂಮಿಯನ್ನು ಒತ್ತುವರಿ ಮಾಡಿ, ಆ ಜಮೀನಿನ ಮೇಲೆ ಹಕ್ಕು ಸ್ಥಾಪಿಸಲು ಪ್ರಯತ್ನಿಸಿದವರಿಗೆ ಆರೋಪಿಗಳು ಅನುಕೂಲ ಮಾಡಿಕೊಟ್ಟಿದ್ದರು. ಈ ಬಗ್ಗೆ ತನಿಖೆ ನಡೆಸಿದ್ದ ಎನ್.ರವೀಂದ್ರ ಕುಮಾರ್ ಅವರು ಅರಣ್ಯ ಇಲಾಖೆ ನೋಡಲ್ ಅಧಿಕಾರಿಯೂ ಆಗಿರುವ ಪಿಸಿಸಿಎಫ್ ಅವರಿಗೆ ವರದಿ ಸಲ್ಲಿಸಿದ್ದರು. ವರದಿ ಆಧರಿಸಿ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಲಾಗಿತ್ತು.

ಸರ್ಕಾರದ ಶಾಖಾ ಕಚೇರಿಗಳಾದ ಗ್ರಾಮ ಪಂಚಾಯಿತಿಗಳು, ಜಾರಿಗೊಳ್ಳದ 2016ರ ಕಾಯ್ದೆ

ಸಾಕಾರಗೊಳ್ಳದ 'ಗ್ರಾಮ ಸರ್ಕಾರ'ದ ಕನಸು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 2016ರಲ್ಲಿ ತಿದ್ದುಪಡಿಯಾಗಿದ್ದ ಕರ್ನಾಟಕ ರಾಜ್ಯ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಗೆ ಏಳು ವರ್ಷಗಳಾದರೂ ಸರ್ಕಾರ ಸೂಕ್ತ ನಿಯಮ ರೂಪಿಸದ ಕಾರಣ 'ಗ್ರಾಮ ಸರ್ಕಾರ'ದ ಆಶಯ ಸಾಕಾರಗೊಂಡಿಲ್ಲ.

ಕಾಯ್ದೆಯ ಅನುಷ್ಠಾನದ ವಿಳಂಬ ನೀತಿಯಿಂದಾಗಿ ಗ್ರಾಮ ಸರ್ಕಾರದ ಆಶಯದ ಜತೆಗೆ, ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟರು, ಹಿಂದುಳಿದ ವರ್ಗಗಳು, ಮಹಿಳೆಯರಿಗೆ ನೀಡಿದ್ದ ಮೀಸಲಾತಿಯ ಉದ್ದೇಶವೂ ವ್ಯರ್ಥವಾಗಿದೆ. ಮೀಸಲಾತಿ ಬಳಸಿಕೊಂಡು ರಾಜ್ಯದ ನೂರಾರು ಸಣ್ಣಪುಟ್ಟ ಸಮುದಾಯಗಳ ಜನರು ಗ್ರಾಮ ಗದ್ದುಗೆಯ ಮೇಲೆ ಕುಳಿತರೂ, ಸಮರ್ಪಕ ಅಧಿಕಾರ ಹಂಚಿಕೆಯ ಸೂತ್ರಗಳಿಲ್ಲದೇ ನಾಮಕಾವಾಸ್ತೆಯ ಆಡಳಿತ ನಡೆಸುವಂತಾಗಿದೆ.

ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಲು ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇರಿಸಿತ್ತು. ಮಾಜಿ ಪ್ರಧಾನಿ ರಾಜೀವ್ ಗಾಂಧಿಯಯವರ ಈ ಆಶಯ 1993ರಲ್ಲಿ ಈಡೇರಿತ್ತು. ಇದಕ್ಕೂ ಮೊದಲೇ ರಾಜ್ಯದಲ್ಲೂ ಅಂದಿನ ರಾಮಕೃಷ್ಣ ಹೆಗಡೆ ಸರ್ಕಾರ ಮೊದಲ ಬಾರಿ 1987ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಮೂಲಕ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕನಸು ಸಾಕಾರಗೊಳಿಸಿತ್ತು. ಆದರೆ, ಅಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ಇಲ್ಲದ ಕಾರಣ ಅಂದು ಪ್ರಬಲ ಜಾತಿಗೆ ಸೇರಿದವರೇ ಅಧಿಕಾರ ಅನುಭವಿಸಿದರು. ಸಂವಿಧಾನ ತಿದ್ದುಪಡಿಯ ನಂತರ ರಾಜ್ಯದಲ್ಲೂ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ–1993' ಜಾರಿಗೊಳಿಸಲಾಯಿತು.

ರಾಜ್ಯದಲ್ಲಿ 1993ರಲ್ಲೇ ಕಾಯ್ದೆ ಜಾರಿಯಾದರೂ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಿದ್ದ ಜವಾಬ್ದಾರಿ, ಜವಾಬ್ದಾರಿಗೆ ಪೂರಕವಾಗಿ ಹಣಕಾಸು, ಅಧಿಕಾರ, ಮಾನವ ಸಂಪನ್ಮೂಲ ಸಮರ್ಪಕವಾಗಿ ನೀಡಲಿಲ್ಲ. ಆಯಾ ಸ್ಥಳೀಯ ಸಂಸ್ಥೆಗಳ ಅಧೀನಕ್ಕೆ ಇಲಾಖೆಗಳನ್ನು ನೀಡಲಿಲ್ಲ. ಇಂತಹ ನ್ಯೂನತೆಗಳನ್ನು ಸರಿಪಡಿಸಿ, ಗ್ರಾಮ ಸರ್ಕಾರದ ಆಶಯ ಈಡೇರಿಸಲು ಅಗತ್ಯವಾದ ವರದಿ ನೀಡುವಂತೆ 2013ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಸರ್ಕಾರ ಕೆ.ಆರ್. ರಮೇಶ್‌ಕುಮಾರ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು.

ಸಮಿತಿಯ ಶಿಫಾರಸಿನಂತೆ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ'ಗೆ ತಿದ್ದುಪಡಿ ತಂದರು. ಗ್ರಾಮಗಳನ್ನು ಸಬಲಗೊಳಿಸುವ, ರಾಜ್ಯಕ್ಕೆ ಅಗತ್ಯವಾದ ನೀತಿ, ನಿಯಮ ರೂಪಿಸುವ ಹೊಣೆಗಾರಿಕೆ ಗ್ರಾಮಗಳಿಗೇ ನೀಡುವ ಮಹತ್ವದ ಆಶಯವನ್ನು ಕಾಯ್ದೆ ಒಳಗೊಂಡಿದ್ದರೂ, ಅವುಗಳ ಸಮರ್ಪಕ ಅನುಷ್ಠಾನಕ್ಕೆ ಅಗತ್ಯವಾದ ರೂಪುರೇಷೆಗಳನ್ನು ಸರ್ಕಾರ ರೂಪಿಸಿಲ್ಲ.

ಮೇಲಿನ ಹಂತದಲ್ಲೇ ಎಲ್ಲ ನಿರ್ಧಾರ

ಗ್ರಾಮ ಸ್ವರಾಜ್ ಕಾಯ್ದೆಯಂತೆ ಗ್ರಾಮ ಸಭೆಗಳಿಗೆ ಪರಮಾಧಿಕಾರವಿದೆ. ಕೇಂದ್ರ, ರಾಜ್ಯದ ಯೋಜನೆಗಳು ತಮ್ಮ ಗ್ರಾಮದಲ್ಲಿ ಎಲ್ಲಿ ಅನುಷ್ಠಾನಗೊಳ್ಳಬೇಕು. ತಮಗೆ ಅಗತ್ಯವಾದ ಯಾವ ಯೋಜನೆಗಳನ್ನು ನೀಡಬೇಕು ಎಂದು ನಿರ್ಧರಿಸುವ, ಅನುದಾನ ಪಡೆಯುವ, ಅನುಷ್ಠಾನಗೊಳಿಸುವ, ಮೇಲುಸ್ತುವಾರಿ ಅಧಿಕಾರ ನೀಡಲಾಗಿದೆ. ಕಾನೂನು ಚೌಕಟ್ಟಿನಲ್ಲಿ ತೆಗೆದುಕೊಂಡ ಹಳ್ಳಿಗಳ ಸಭೆಯ ನಿರ್ಣಯವನ್ನು ತಿರಸ್ಕರಿಸುವ ಅಧಿಕಾರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೂ ಇಲ್ಲ.

'ವಾಸ್ತವದಲ್ಲಿ ಸರ್ಕಾರ ಯೋಜನೆಗಳನ್ನು ಮೇಲು ಹಂತದ ಅಧಿಕಾರಿಗಳೇ ರೂಪಿಸಿ, ಗ್ರಾಮಗಳ ಒಪ್ಪಿಗೆ ಇಲ್ಲದೇ ಅನುಷ್ಠಾನಗೊಳಿಸುವ ಪ್ರವೃತ್ತಿ ನಡೆಯುತ್ತಿದೆ. ಅಧಿಕಾರಿಗಳ ಒತ್ತಡಕ್ಕೆ ಮಣಿದು ಗ್ರಾಮ ಪಂಚಾಯತಿ ಅಧ್ಯಕ್ಷರು ಸಹಿ ಹಾಕುವ ಪರಿಪಾಟ ಬೆಳೆಸಿಕೊಂಡಿದ್ದಾರೆ. ಪಂಚಾಯಿತಿಗಳಿಗೆ ಬೇಕಾದ ಪೆನಾಯಿಲ್, ಬ್ಲೀಚಿಂಗ್ ಪೌಡರ್‌ಗಳೂ ಸಹ ಮೇಲಿನ ಹಂತದಲ್ಲಿ ಖರೀದಿಯಾಗಿ ಪಂಚಾಯಿತಿಗಳಿಗೆ ಬರುತ್ತವೆ. ಪಿಡಿಒಗಳು ಪ್ರತಿನಿಧಿಗಳನ್ನು ಒಪ್ಪಿಸಿಕೊಂಡು ಹಣ ನೀಡುತ್ತಾರೆ. ಶಾಸಕರು, ಸಂಸದರ ನಿಧಿ ಬಳಕೆಯಲ್ಲೂ ಗ್ರಾಮಗಳನ್ನು ಕಡೆಗಣಿಸಲಾಗುತ್ತಿದೆ. ಒಂದು ರೀತಿ ಸ್ಥಳೀಯ ಸಂಸ್ಥೆಗಳು ಸರ್ಕಾರದ ಶಾಖಾ ಕಚೇರಿಗಳಂತೆ ಕೆಲಸ ಮಾಡುತ್ತಿವೆ' ಎನ್ನುತ್ತಾರೆ ನಲ್ಲೂರು ಗ್ರಾಮ ಪಂಚಾಯಿತಿ ಸದಸ್ಯ ಆರ್.ಮಂಜಪ್ಪ.



ಸಾಮಾನ್ಯ ಜನರು ಇಷ್ಟು ವರ್ಷ ಪ್ರಬಲರಿಗೇ ಅಧಿಕಾರ ನೀಡಿದ್ದಾರೆ. ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವ ಮೂಲಕ ಸಾಮಾನ್ಯರ ಋಣ ತೀರಿಸುವ ಕೆಲಸವನ್ನು ಮಾಡಬೇಕಿದೆ.

ಡಿ.ಆರ್.ಪಾಟೀಲ, ಮಾಜಿ ಶಾಸಕ



ಒಂದು ಭಾಗಕ್ಕೆ ರೂಪಿಸಿದ ಯೋಜನೆ ಮತ್ತೊಂದಕ್ಕೆ ಹೊಂದಿಕೆಯಾಗದೇ ಇರಬಹುದು. ಹಾಗಾಗಿ, ತಮಗೆ ಬೇಕಾದ ಕ್ರಿಯಾಯೋಜನೆ ರೂಪಿಸುವ ಅಧಿಕಾರ ಗ್ರಾ.ಪಂಗಳಿಗೆ ನೀಡಬೇಕು.

ಡಿ.ಎಸ್. ಅರುಣ್, ಪರಿಷತ್ ಸದಸ್ಯ

ಆಶಯ ಸಾಕಾರಕ್ಕೆ ಸಿ.ಎಂಗೆ ಪತ್ರ

2016ರ ತಿದ್ದುಪಡಿ ಕಾಯ್ದೆಯಂತೆ ಎಲ್ಲ ಅಧಿಕಾರಗಳನ್ನು ಗ್ರಾಮ ಪಂಚಾಯಿತಿಗೆ ನೀಡಬೇಕು. ಆ ಮೂಲಕ ಮೀಸಲಾತಿಯಿಂದ ದೊರೆತ ಅಧಿಕಾರವನ್ನು ಪರಿಶಿಷ್ಟರು, ಹಿಂದುಳಿದ ವರ್ಗಗಳು ಅನುಭವಿಸಲು ಅವಕಾಶ ಮಾಡಿಕೊಡಬೇಕು. ಎಲ್ಲ ಇಲಾಖೆ, ಅಧಿಕಾರಿಗಳು ಹಾಗೂ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಬೇಕು. ಸಂವಿಧಾನ ಜಾರಿಗೆ ಬಂದ ಅಮೃತ ಮಹೋತ್ಸವದ ಗಳಿಗೆ ಆರಂಭಕ್ಕೆ ಒಂದೂವರೆ ತಿಂಗಳು ಬಾಕಿ ಉಳಿದಿದೆ. ಗ್ರಾಮ ಸ್ವರಾಜ್ಯದ ಕನಸು ಕಂಡಿದ್ದ ಗಾಂಧೀಜಿ ಎಐಸಿಸಿ ಅಧ್ಯಕ್ಷತೆ ವಹಿಸಿದ್ದ ಬೆಳಗಾವಿಯಲ್ಲಿ ನಡೆಯುತ್ತಿರುವ ಈ ಅಧಿವೇಶನದಲ್ಲೇ ಈ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಮಾಜಿ ಶಾಸಕ ಡಿ.ಆರ್ ಪಾಟೀಲ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪ್ರತ್ಯೇಕ ಪತ್ರಗಳನ್ನು ಬರೆದಿದ್ದಾರೆ.

ಅರಿವಳಿಕೆ ನೀಡಿದ್ದ ಕಾಡಾನೆ ಸಾವು

ಮೂಡಿಗೆರೆ: ತಾಲ್ಲೂಕಿನ ಮೇಕನಗದ್ದೆ ಗ್ರಾಮದ ದೊಡ್ಡಗೊಳ್ಳದಲ್ಲಿ ಶನಿವಾರ ತಡರಾತ್ರಿ ಅರಿವಳಿಕೆ ಚುಚ್ಚುಮದ್ದು ನೀಡಿದ್ದ ಕಾಡಾನೆ ಮೃತಪಟ್ಟಿದೆ.

ಊರುಬಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂರು ಕಾಡಾನೆಗಳ ಸೆರೆಗೆ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ವಾರದಿಂದಲೂ ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶನಿವಾರ ರಾತ್ರಿ ಎರಡು ಕಾಡಾನೆ ಗಳು ಮೇಕನಗದ್ದೆ ಗ್ರಾಮದ ಬಳಿ ಕಾಣಿಸಿ ಕೊಂಡಿದ್ದವು. ತಕ್ಷಣವೇ ಕಾರ್ಯಪ್ರವೃತ್ತರಾದ ಸಿಬ್ಬಂದಿ, ಒಂದು ಕಾಡಾನೆಗೆ ಅರಿವಳಿಕೆ ಚುಚ್ಚುಮದ್ದು ನೀಡಿದ್ದಾರೆ.

ಬಳಿಕ ಚುಚ್ಚುಮದ್ದು ನೀಡಲಾಗದ ಹಾಗೂ ನೀಡಿದ್ದ ಎರಡೂ ಕಾಡಾನೆಗಳು ಕಾಡಿನೊಳಗೆ ಓಡಿದ್ದವು. ಹಿಂದೆಯೇ ಸಾಕಾನೆಗಳೊಂದಿಗೆ ಕಾರ್ಯಾಚರಣೆ ತಂಡವು ಪ್ರವೇಶಿಸಿದ್ದು, ಕಾಡಾನೆಗಳನ್ನು ಹಿಂಬಾಲಿಸಿದೆ.

500 ಮೀಟರ್‌ನಷ್ಟು ದೂರ ತೆರಳಿದ್ದ ಅರಿವಳಿಕೆ ನೀಡಲಾಗಿದ್ದ ಕಾಡಾನೆಯು ಮರಕ್ಕೆ ಡಿಕ್ಕಿ ಹೊಡೆದು ತಲೆ ಕೆಳಗಾಗಿ ಪ್ರಜ್ಞೆ ತಪ್ಪಿ ಬಿದ್ದಿದೆ. ಹಿಂಬಾಲಿಸಿ ಹೋಗಿದ್ದ ಕಾರ್ಯಾಚರಣೆ ಸಿಬ್ಬಂದಿ ಕಾಡಾನೆಗೆ ನೀರು ಹಾಕಿ, ಸಾಕಾನೆಗಳನ್ನು ಸುತ್ತ ನಿಲ್ಲಿಸಿ ಕಾರ್ಯಾಚರಣೆ ಮುಂದುವರೆಸಿದರು. ಪ್ರಜ್ಞೆ ತಪ್ಪಿದ್ದ ಕಾಡಾನೆ ಎಚ್ಚರಗೊಳ್ಳದಿದ್ದಾಗ ಪಶು ವೈದ್ಯರು ಪರೀಕ್ಷಿಸಿ ಸತ್ತಿರುವುದನ್ನು ಖಚಿತ ಪಡಿಸಿದರು.

'ವನ್ಯಜೀವಿಗಳ ಹಿತದೃಷ್ಟಿಯಿಂದ ರಾತ್ರಿ ವೇಳೆ ಕಾರ್ಯಾಚರಣೆ ಮಾಡಬಾರದು. ಪಶು ವೈದ್ಯರು ನಿಯಮ ಪಾಲಿಸಿಲ್ಲ' ಎಂದು ವನ್ಯಜೀವಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕಾಡಾನೆ ಸಾವು ಆಕಸ್ಮಿಕ ಎಂದು ಅರಣ್ಯ ಇಲಾಖೆಯು ಸರ್ಕಾರಕ್ಕೆ ವರದಿ ಸಲ್ಲಿಸಿದೆ.

'4 ಸಾವಿರ ಅಂಗವಿಕಲರಿಗೆ ದ್ವಿಚಕ್ರ ವಾಹನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ಸಾಲಿನಲ್ಲಿ (2023-24) 4 ಸಾವಿರ ಅಂಗವಿಕಲರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನಗಳನ್ನು ವಿತರಿಸಲು ಉದ್ದೇಶಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ 'ವಿಶ್ವ ಅಂಗವಿಕಲರ ದಿನಾಚರಣೆ' ಉದ್ಘಾಟಿಸಿ ಅವರು ಮಾತನಾಡಿದರು.

'ಪ್ರಸಕ್ತ ಸಾಲಿನಲ್ಲಿ ಬುದ್ಧಿಮಾಂದ್ಯ ಮಕ್ಕಳಿಗಾಗಿ ₹ 2 ಕೋಟಿ ವೆಚ್ಚದಲ್ಲಿ ಏಳು ಜಿಲ್ಲೆಗಳಲ್ಲಿ 10 ವಸತಿ ಶಾಲೆಗಳನ್ನು ನಿರ್ಮಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಅಂಗವಿಕಲರ ಶೈಕ್ಷಣಿಕ, ವೈದ್ಯಕೀಯ, ಪುನರ್ವಸತಿ, ಹಿರಿಯ ನಾಗರಿಕ ಕ್ಷೇಮಾಭಿವೃದ್ಧಿಗೆ ₹ 284.27ಕೋಟಿ ಮೀಸಲಿಡಲಾಗಿದೆ. ಮರಣ ಹೊಂದಿದ ಅಂಗವಿಕಲರಿಗೆ ನೀಡುವ ಪರಿಹಾರ ಮೊತ್ತವನ್ನು ₹ 50 ಸಾವಿರದಿಂದ ₹ 1 ಲಕ್ಷಕ್ಕೆ ಏರಿಸಲಾಗಿದೆ' ಎಂದರು.

'2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 13,24,205 ಅಂಗವಿಕಲರಿದ್ದಾರೆ. ಅಂಗವಿಕಲರು ಸಮಾಜಕ್ಕೆ ಹೊರೆ ಅಲ್ಲ. ಇತ್ತೀಚಿನ ದಿನಗಳಲ್ಲಿ ಕ್ರೀಡೆಯೂ ಸೇರಿದಂತೆ ಎಲ್ಲ ರಂಗಗಳಲ್ಲಿ ಅಂಗವಿಕಲರು ಅಪ್ರತಿಮ ಸಾಧನೆ ತೋರುತ್ತಿದ್ದಾರೆ. ಹೀಗಾಗಿ, ಸಮಾಜಕ್ಕೆ ಹೊರೆ ಎನ್ನುವ ಭಾವನೆಯನ್ನು ದೂರ ಮಾಡಬೇಕಿದೆ. ಅಂಗವಿಕಲರಿಗೆ ಶಿಕ್ಷಣ, ಉದ್ಯೋಗಗಳಲ್ಲಿ ಸಮಾನ ಅವಕಾಶ ದೊರಕಿಸುವುದು ಸರ್ಕಾರದ ಕರ್ತವ್ಯ' ಎಂದರು.

'ಇತ್ತೀಚೆಗೆ ನಡೆಸಲಾದ ಜನ ಸ್ಪಂದನ ಕಾರ್ಯಕ್ರಮಕ್ಕೆ ಬಂದಿದ್ದ ಹೆಚ್ಚಿನ ಸಂಖ್ಯೆಯ ಅಂಗವಿಕಲರು, ಉದ್ಯೋಗ, ಶಿಕ್ಷಣ ಹಾಗೂ ವಾಹನ ಖರೀದಿಗೆ ನೆರವು ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಅವರ ಬೇಡಿಕೆಗಳ ಕುರಿತಂತೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡಲಾಗಿದೆ' ಎಂದರು.

ಅಂಗವಿಕಲರ ಯೋಜನೆಗಳ ಕೈಪಿಡಿಯನ್ನು ಮುಖ್ಯಮಂತ್ರಿ ಬಿಡುಗಡೆ ಮಾಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಇದ್ದರು.

ಅಧಿವೇಶನದ ಸಿದ್ಧತೆ ಪರಿಶೀಲಿಸಿದ ಸ್ಪೀಕರ್, ಸಭಾಪತಿ

'ಉ.ಕ ಸಮಸ್ಯೆಗಳ ಚರ್ಚೆಗೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಸೋಮವಾರ ಆರಂಭವಾಗುವ ವಿಧಾನ ಮಂಡಲದ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಆದ್ಯತೆ ನೀಡಲಾಗುವುದು' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಅಧಿವೇಶನ ಡಿ.15ರವರೆಗೆ ನಡೆಯಲಿದೆ. ಭಾನುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದೇ 5 ಮತ್ತು 6ರಂದು ಪರಿಷತ್‌ನಲ್ಲಿ ಉತ್ತರ ಕರ್ನಾಟಕದ ಪ್ರಮುಖ ಸಮಸ್ಯೆಗಳ ಕುರಿತಾಗಿ ಚರ್ಚಿಸಿ, ಪರಿಹಾರ ಕಂಡುಕೊಳ್ಳಲು ಯತ್ನಿಸಲಾಗುವುದು. ವಿಧಾನಸಭೆಯಲ್ಲಿ ರಾಜ್ಯದ ವಿವಿಧ ಭಾಗಗಳ ವಿಷಯಗಳನ್ನು ಚರ್ಚಿಸಲಾಗುವುದು. ಅದರಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲಾಗುವುದು' ಎಂದು ಹೇಳಿದರು.

ಅಧಿವೇಶನದಲ್ಲಿ ಮೂರು ಸುಗ್ರೀವಾಜ್ಞೆಗಳು ಮಸೂದೆ ರೂಪದಲ್ಲಿ ಮಂಡನೆಯಾಗಲಿದೆ. ಇನ್ನೂ ಹಲವು ಮಸೂದೆಗಳು ಕಲಾಪ ಸಲಹಾ ಸಮಿತಿ ಸಭೆಯ ಮುಂದೆ ಬರುವ ನಿರೀಕ್ಷೆಯಿದೆ ಎಂದರು.

ಬೆಳಗಾವಿಯ ಅಧಿವೇಶನವೆಂದರೆ, ಪ್ರತಿಭಟನೆಗಳ ಅಧಿವೇಶನ ಎಂಬ ಅಪಖ್ಯಾತಿ ಇತ್ತು. ಹಾಗಾಗಿ ಈ ಬಾರಿ ಪ್ರತಿಭಟನೆಗಳ ಅಬ್ಬರ ತಗ್ಗಿಸಲಿದ್ದೇವೆ

ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

'ವಿಧಾನಸಭೆಯಲ್ಲಿ 2,512 ಪ್ರಶ್ನೆ ಮತ್ತು ಗಮನಸೆಳೆಯುವ ಸೂಚನೆಗಳು ಸ್ವೀಕೃತವಾಗಿವೆ. ಪರಿಷತ್ ಕಲಾಪಗಳಿಗೆ 1,207 ಪ್ರಶ್ನೆ ಸ್ವೀಕೃತವಾಗಿವೆ. ಅವುಗಳಲ್ಲಿ 1,057 ಚುಕ್ಕೆರಹಿತ ಪ್ರಶ್ನೆಗಳಿವೆ. ನಿಯಮ 72ರಡಿ 111 ಪತ್ರಗಳಿವೆ' ಎಂದು ಹೇಳಿದರು.

'ದಿನದಲ್ಲಿ ಮೊದಲಿಗರಾಗಿ ಸದನಕ್ಕೆ ಬರುವ 25 ಶಾಸಕರಿಗೆ ಬಹುಮಾನವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಧಿಕೃತ ಲಾಂಛನಗಳನ್ನು ಅಚ್ಚು ಹಾಕಿಸಿದ ಕಪ್ ಹಾಗೂ ಸಾಸರ್ ನೀಡಲಾಗುವುದು. ಒಂದು ದಿನ ಮೊದಲು ಬಂದರೆ, ಒಂದು ಕಪ್–ಸಾಸರ್ ನೀಡಲಾಗುವುದು. ಹತ್ತೂ ದಿನ ಮೊದಲಿಗರಾಗಿ ಹಾಜರಾದರೆ, ಹತ್ತು ಕಪ್ ಕೊಡಲಾಗುವುದು' ಎಂದು ತಿಳಿಸಿದರು.

ಪ್ರೀತಮ್ ಸೇರಿ 19 ವಕೀಲರ ವಿರುದ್ಧ ಪ್ರಕರಣ ದಾಖಲು, ಕಾನ್‌ಸ್ಟೆಬಲ್ ಬಿಡುಗಡೆ

ಕ್ರಮಕ್ಕೆ ಆಗ್ರಹ– ಅಹೋರಾತ್ರಿ ಪೊಲೀಸರ ಧರಣಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಗರದಲ್ಲಿ ಪೊಲೀಸರು ಮತ್ತು ವಕೀಲರ ನಡುವಿನ ಜಟಾಪಟಿ ತಾರಕಕ್ಕೆ ಏರಿದೆ. ಪೊಲೀಸ್ ಸಿಬ್ಬಂದಿ ಕರ್ತವ್ಯವನ್ನು ತೊರೆದು ಇಡೀ ರಾತ್ರಿ ಪ್ರತಿಭಟನೆ ನಡೆಸಿದರು.

ಬಂಧಿಸಿದ್ದ ಪೊಲೀಸ್ ಕಾನ್‌ಸ್ಟೆಬಲ್ ಗುರುಪ್ರಸಾದ್ ಅವರನ್ನು ಬಿಡುಗಡೆಗೊಳಿಸಿ, ವಕೀಲರ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿದ ಬಳಿಕ ಭಾನುವಾರ ಬೆಳಿಗ್ಗೆ ಪ್ರತಿಭಟನೆಯನ್ನು ವಾಪಸ್ ಪಡೆದರು.

ಹೆಲ್ಮೆಟ್ ಧರಿಸದೇ ಬೈಕ್ ಚಾಲನೆ ಮಾಡಿದ್ದ ವಕೀಲ ಪ್ರೀತಮ್ ಮೇಲೆ ಗುರುವಾರ ರಾತ್ರಿ ಹಲ್ಲೆ ನಡೆಸಿದ ಆರೋಪದಲ್ಲಿ ಪಿಎಸ್‌ಐ ಮಹೇಶ್ ಸೇರಿ ಆರು ಪೊಲೀಸರನ್ನು ಪೊಲೀಸ್ ವರಿಷ್ಠಾಧಿಕಾರಿ ಅಮಾನತುಗೊಳಿಸಿದ್ದರು. ಎಲ್ಲರ ಬಂಧನಕ್ಕೆ ಪಟ್ಟುಹಿಡಿದು ವಕೀಲರು ಪ್ರತಿಭಟನೆ ನಡೆಸಿದ್ದರು.



ಹನುಮಂತಪ್ಪ ವೃತ್ತದಲ್ಲಿ ಪೊಲೀಸರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಅವರು ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸಿದ್ದರು.

ಕಾನ್‌ಸ್ಟೆಬಲ್ ಗುರುಪ್ರಸಾದ್ ಅವರನ್ನು ಶನಿವಾರ ರಾತ್ರಿ ಬಂಧಿಸಲಾಗಿತ್ತು. ಈ ಸುದ್ದಿ ಪೊಲೀಸ್ ಸಿಬ್ಬಂದಿ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡಿದ ಕೂಡಲೇ ಕುಟುಂಬ ಸದಸ್ಯರು, ಪೊಲೀಸರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿ ಸಮವಸ್ತ್ರದಲ್ಲೇ ಧರಣಿ ಕುಳಿತರು.

'ವಕೀಲ ಪ್ರೀತಮ್ ಪೊಲೀಸರ ಕಪಾಳಕ್ಕೆ ಹೊಡೆದಿದ್ದಾರೆ. ಪೊಲೀಸ್ ಸೇವೆಯಲ್ಲಿರುವ ಕಾರಣಕ್ಕೆ ಅನ್ಯಾಯ ಸಹಿಸಬೇಕೆ, ನಮಗೂ ನ್ಯಾಯ ಬೇಕು. ನ್ಯಾಯ ಸಿಗುವ ತನಕ ಕದಲುವುದಿಲ್ಲ' ಎಂದು ಕಿಡಿಕಾರಿದರು. ಜಿಲ್ಲೆಯ ಎಲ್ಲೆಡೆಯಿಂದ ತಂಡೋಪತಂಡವಾಗಿ ಬಂದ ಪೊಲೀಸ್ ಸಿಬ್ಬಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಲಾಠಿಗಳನ್ನು ಬೆಂಕಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಕಾನ್‌ಸ್ಟೆಬಲ್ ಗುರುಪ್ರಸಾದ್ ಅವರನ್ನು ಧರಣಿ ಸ್ಥಳಕ್ಕೆ ಕರೆತಂದ ಪೊಲೀಸ್ ಅಧಿಕಾರಿಗಳು, ಬಿಡುಗಡೆಗೊಳಿಸಿದರು. ಆದರೂ, ಧರಣಿ ಹಿಂದಕ್ಕೆ ಪಡೆಯಲಿಲ್ಲ. ಪೊಲೀಸರ ಕಪಾಳಕ್ಕೆ ಹೊಡೆದ ಪ್ರೀತಮ್ ಮತ್ತು ಕರ್ತವ್ಯಕ್ಕೆ ಅಡ್ಡಿಪಡಿಸಿದ ವಕೀಲರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಪಟ್ಟು ಹಿಡಿದರು.

ಪ್ರೀತಮ್ ವಿರುದ್ಧ ಪ್ರತ್ಯೇಕ ಮೊಕದ್ದಮೆ ಮತ್ತು 18 ವಕೀಲರ ವಿರುದ್ಧ ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣ ದಾಖಲಿಸಿದ ಬಳಿಕ ಸಿಬ್ಬಂದಿ ಪ್ರತಿಭಟನೆ ಹಿಂದಕ್ಕೆ ಪಡೆದರು. ಈ ಬೆಳವಣಿಗೆ ನಂತರ ಕಾನೂನು ಹೋರಾಟ ಮುಂದುವರಿಸಲು ವಕೀಲರು ನಿರ್ಧರಿಸಿದ್ದಾರೆ.

ತನಿಖೆ ಸಿಐಡಿಗೆ

ವಕೀಲರು ಮತ್ತು ಪೊಲೀಸರ ವಿರುದ್ಧ ದಾಖಲಾಗಿರುವ ಅಷ್ಟೂ ಪ್ರಕರಣಗಳ ತನಿಖೆಯನ್ನು ಸರ್ಕಾರ ಸಿಐಡಿಗೆ ವಹಿಸಿದೆ.

'ವಕೀಲ ಪ್ರೀತಮ್ ಮೇಲಿನ ಹಲ್ಲೆ ಆರೋಪದ ಒಂದು ಪ್ರಕರಣ, ಪ್ರೀತಮ್ ಕಪಾಳಕ್ಕೆ ಹೊಡೆದಿರುವ ಆರೋಪ ಸೇರಿ ವಕೀಲರ ವಿರುದ್ಧ ದಾಖಲಾಗಿರುವ ನಾಲ್ಕು ಮೊಕದ್ದಮೆಗಳ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಐಜಿಪಿ ಚಂದ್ರಗುಪ್ತ ತಿಳಿಸಿದರು.

ಅನಧಿಕೃತ ಆಸ್ಪತ್ರೆಗಳ ವಿರುದ್ಧ ಕ್ರಮಕ್ಕೆ ಸೂಚನೆ

ಬೆಂಗಳೂರು: ಕೆಪಿಎಂಇ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಕಾಯ್ದೆ) ಕಾಯ್ದೆಯಡಿ ಅನಧಿಕೃತ ಆಸ್ಪತ್ರೆಗಳು, ಕ್ಲಿನಿಕ್‌ಗಳು, ಪ್ರಯೋಗಾಲಯಗಳು ಹಾಗೂ ನಕಲಿ ವೈದ್ಯರ ಮೇಲೆ ಕ್ರಮ ಕೈಗೊಳ್ಳುವಂತೆ ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಬಗ್ಗೆ ಅವರು ಸುತ್ತೋಲೆ ಹೊರಡಿಸಿದ್ದು, 'ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ಕೆಪಿಎಂಇ ಕಾಯ್ದೆಯಡಿ ನೋಂದಣಿಯಾಗಬೇಕು. ಆದರೆ, ವೈದ್ಯಕೀಯ ವೃತ್ತಿ ನಡೆಸಲು ಅಗತ್ಯ ವಿದ್ಯಾರ್ಹತೆ ಇಲ್ಲದ ನಕಲಿ ವೈದ್ಯರು ಅನಧಿಕೃತವಾಗಿ ಕ್ಲಿನಿಕ್ ಮತ್ತು ಪ್ರಯೋಗಾಲಯ ನಡೆಸುತ್ತಿರುವುದು ಗಮನಕ್ಕೆ ಬಂದಿದೆ. ಇಂತಹವರ ವಿರುದ್ಧ ಕಾನೂನಿನ ಅಡಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ತಿಳಿಸಿದ್ದಾರೆ.

ಮಧ್ಯಪ್ರದೇಶದಲ್ಲಿ ಬಿಜೆಪಿ 'ಚಮತ್ಕಾರ'

ಅಭಿಮಾನಿಗಳಿಂದ ಪುಷ್ಪವೃಷ್ಟಿ



ಮಧ್ಯಪ್ರದೇಶ ಚುನಾವಣೆ ಫಲಿತಾಂಶ ಬಳಿಕ, ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮತದಾರರು ಹೂವಿನ ಪಕಳೆಗಳಿಂದ ಅಭಿನಂದಿಸಿದರು –ಎಎಫ್‌ಪಿ ಚಿತ್ರ

• ಮಂಜುನಾಥ ಹೆಬ್ಬಾರ್



2018ರ ಚುನಾವಣೆಯಲ್ಲಿ 'ಕೈ' ಗೆಲುವಿಗೆ ಜ್ಯೋತಿರಾದಿತ್ಯ ಸಿಂಧಿಯಾ ದೊಡ್ಡ ಕೊಡುಗೆ ನೀಡಿದ್ದರು. ಆದರೆ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಸಿಂಧಿಯಾ ಅವರನ್ನು ಕಮಲನಾಥ್–ದಿಗ್ವಿಜಯ್ ಸಿಂಗ್ ಜೋಡಿ ಹಣಿಯಿತು. ಗ್ವಾಲಿಯರ್–ಚಂಬಲ್ ಕಣಿವೆಯಲ್ಲಿ ವರ್ಚಸ್ಸು ಹೊಂದಿರುವ ನಾಯಕ ಸಿಂಧಿಯಾ ಅವರನ್ನು ಬಿಜೆಪಿ ಸೆಳೆದಿತ್ತು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತಗಳನ್ನು ಬಿಜೆಪಿಗೆ ವರ್ಗಾಯಿಸುವಲ್ಲಿ ಅವರು 'ಪ್ರಚಂಡ' ಪಾತ್ರ ವಹಿಸಿದ್ದಾರೆ

ನವದೆಹಲಿ: ಪ್ರಬಲ ಆಡಳಿತ ವಿರೋಧಿ ಅಲೆಯನ್ನು ಮೆಟ್ಟಿ ನಿಂತ ಬಿಜೆಪಿಯು ಹಿಂದಿ ಸೀಮೆಯ ಮಧ್ಯಪ್ರದೇಶದಲ್ಲಿ 'ಚಮತ್ಕಾರ' ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕಮಲ ಪಡೆಯ ಅಶ್ವಮೇಧ ಯಾಗದ ಕುದುರೆಯು ಪ್ರಚಂಡ ದಿಗ್ವಿಜಯ ಸಾಧಿಸಿದೆ. ರಾಜಕೀಯ ನಿವೃತ್ತಿಯ ಅಂಚಿನಲ್ಲಿರುವ 'ಹಳೆ ಹುಲಿ'ಗಳಾದ ಕಮಲನಾಥ್–ದಿಗ್ವಿಜಯ್ ಸಿಂಗ್ ಅವರ ಮಾತು ನಂಬಿ ಅಮಿತ ವಿಶ್ವಾಸವಿಟ್ಟು ಕಣಕ್ಕೆ ಧುಮುಕಿದ್ದ ಕಾಂಗ್ರೆಸ್ ಅದಕ್ಕೆ ತಕ್ಕ ಬೆಲೆಯನ್ನೇ ತೆತ್ತಿದೆ.

19 ವರ್ಷಗಳ ಆಡಳಿತದ ಬಳಿಕ ಬಿಜೆಪಿ ಪಾಲಿಗೆ ಆಡಳಿತ ವಿರೋಧಿ ಭಾವನೆ ಬಹುದೊಡ್ಡ ಸವಾಲು ಆಗಿತ್ತು. ಇದರ ನಡುವೆಯೂ ರಾಷ್ಟ್ರೀಯ ನಾಯಕತ್ವ, ರಾಜಕೀಯ ಜಾಣ್ಮೆ, ಸಂಘಟನಾ ಸಾಮರ್ಥ್ಯ, ಸಮರತಂತ್ರ ಹಾಗೂ ಗೆಲುವಿನ ಹಸಿವನ್ನು ಅಗ್ನಿಪರೀಕ್ಷೆಗೆ ಒಡ್ಡಿದ ಬಿಜೆಪಿಯು ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಆಡಳಿತ ವಿರೋಧಿ ಭಾವನೆಯನ್ನು ಅಡಗಿಸುವಷ್ಟು ಪ್ರಖರ ಸಾಧನೆಯನ್ನು ಬಿಜೆಪಿ ಸರ್ಕಾರ ಮಾಡಿರಲಿಲ್ಲ. ಮೋದಿ ಅವರಂತಹ ಪ್ರಬಲ ವರ್ಚಸ್ಸು ಶಿವರಾಜ ಸಿಂಗ್ ಚೌಹಾಣ್ ಅವರಿಗೆ ಇಲ್ಲ. ಹಿಂದುತ್ವದ ಗಟ್ಟಿ ನೆಲದಲ್ಲಿ ಹೊಸ ಮುಖ್ಯಮಂತ್ರಿಯನ್ನು ಕಾಣುವ ಹಂಬಲದಲ್ಲಿ ಇಲ್ಲಿನ ಮತದಾರರು ಇದ್ದರು. ಇದರ ಸುಳಿವರಿತ ಬಿಜೆಪಿ ಹೈಕಮಾಂಡ್ 'ಮುಖ್ಯಮಂತ್ರಿ ಅಭ್ಯರ್ಥಿ'ಯನ್ನು ಘೋಷಿಸುವ ಗೋಜಿಗೆ ಹೋಗಲಿಲ್ಲ. ಇದು ಫಲ ಕೊಟ್ಟಿತು. ಜತೆಗೆ, ಚೌಹಾಣ್ ಅವರೂ ಇದನ್ನು ಪ್ರತಿಷ್ಠೆಯನ್ನಾಗಿ ಸ್ವೀಕರಿಸಿದರು. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ದಿನಕ್ಕೈದು ರ‍್ಯಾಲಿಗಳಲ್ಲಿ ಭಾಗಿಯಾಗಿ ಮತದಾರರಲ್ಲಿ ವಿನೀತರಾಗಿ ಭಾವನಾತ್ಮಕವಾಗಿ ಮತ ಬೇಡಿದರು. ಮಹಿಳೆಯರ ಖಾತೆಗೆ ಪ್ರತಿ ತಿಂಗಳು ₹1,250 ವರ್ಗಾಯಿಸುವ 'ಲಾಡ್ಲಿ ಬೆಹನಾ ಯೋಜನೆ'ಯೂ ಪಕ್ಷಕ್ಕೆ ಭಾರಿ ಅನುಕೂಲ ಮಾಡಿಕೊಟ್ಟಿತು. ಕಾಂಗ್ರೆಸ್‌ನ 'ಗ್ಯಾರಂಟಿ'ಗಿಂತ ಬಿಜೆಪಿಯ ಈ 'ಕಲ್ಯಾಣ' ಯೋಜನೆ ಮಹಿಳೆಯರ ಮನ ಗೆದ್ದಿತು. ಚುನಾವಣೆಗೆ ಮುನ್ನ ಧಾರ್ಮಿಕ ಕೇಂದ್ರಗಳಿಗೆ ನೀಡಿದ ಭರಪೂರ ಅನುದಾನವೂ ಹಿಂದೂ ಮತಗಳ ಧ್ರುವೀಕರಣಕ್ಕೆ ಭಾರಿ ಕೊಡುಗೆ ನೀಡಿತು.


ಬಿಜೆಪಿ ಶಾಸಕರ ಜನಪ್ರಿಯತೆ ನಶಿಸಿತ್ತು. ಹೊಸಬರಿಗೆ ಟಿಕೆಟ್ ನೀಡುವ ಮೂಲಕ ಈ ವ್ಯತಿರಿಕ್ತ ಅಂಶವನ್ನು ಪಕ್ಷ ಮೆಟ್ಟಿ ನಿಂತಿತು. ಪಕ್ಷದ ಪಾಲಿಗೆ ಕಷ್ಟಕರವಾಗಿದ್ದ ಕ್ಷೇತ್ರಗಳಲ್ಲೇ ಕೇಂದ್ರದ ಮೂವರು ಸಚಿವರು ಹಾಗೂ ಸಂಸದರನ್ನು ಹುರಿಯಾಳುಗಳನ್ನಾಗಿ ಮಾಡಿ ಪಕ್ಷ ಹೊಸ ಕಸರತ್ತು ಮಾಡಿತು. ಈ ಪ್ರಯೋಗ ಪಕ್ಷಕ್ಕೆ ಭರಪೂರ ಫಸಲನ್ನು ನೀಡಿತು. ಈ ಪ್ರಭಾವಿ ನಾಯಕರು ತಾವು ಗೆಲ್ಲುವುದರ ಜತೆಗೆ ಅಕ್ಕಪಕ್ಕದ ಕ್ಷೇತ್ರದ ಅಭ್ಯರ್ಥಿಗಳನ್ನೂ 'ದಡ' ಮುಟ್ಟಿಸಿದರು. ರಾಮಮಂದಿರ ಉದ್ಘಾಟನೆಯ ದಿನಾಂಕ ನಿಗದಿ ಮಾಡಿದ ತಂತ್ರ ಸಹ ಪಕ್ಷಕ್ಕೆ ಮತ ತಂದುಕೊಡುವಲ್ಲಿ ಯಶಸ್ವಿಯಾಯಿತು. ಉತ್ತರಪ್ರದೇಶದ ಅಂಚಿನ ಬುಂದೇಲ್‌ಖಂಡ ಭಾಗದಲ್ಲಿ ಇದೇ ಪ್ರಮುಖ ಚುನಾವಣಾ ವಿಷಯವಾಗಿತ್ತು.

2018ರ ಚುನಾವಣೆಯಲ್ಲಿ 'ಕೈ' ಗೆಲುವಿಗೆ ದೊಡ್ಡ ಕೊಡುಗೆ ನೀಡಿದವರು ಜ್ಯೋತಿರಾದಿತ್ಯ ಸಿಂಧಿಯಾ. ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಸಿಂಧಿಯಾ ಅವರನ್ನು ಒಂದಾಗಿ ಹಣಿದವರು ಕಮಲನಾಥ್– ದಿಗ್ವಿಜಯ್ ಸಿಂಗ್ ಜೋಡಿ. ಗ್ವಾಲಿಯರ್–ಚಂಬಲ್ ಕಣಿವೆಯಲ್ಲಿ ವರ್ಚಸ್ಸು ಹೊಂದಿರುವ ನಾಯಕ ಅವರು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತಗಳನ್ನು ಬಿಜೆಪಿಗೆ ವರ್ಗಾಯಿಸುವಲ್ಲಿ ಅವರು 'ಪ್ರಚಂಡ' ಪಾತ್ರ ವಹಿಸಿದರು.

ರಾಜ್ಯದಲ್ಲಿ 'ಭಾರತ ಜೋಡೋ ಯಾತ್ರೆ'ಯ ಅಪಾರ ಯಶಸ್ಸಿನ ಬಳಿಕ ಮೇಲೆದ್ದ ಕಾಂಗ್ರೆಸ್ ಪಾಳಯವು ಚುನಾವಣೆಗೆ ಮುನ್ನವೇ ಭ್ರಮೆಯಲ್ಲಿ ತೇಲಾಡಿತು. ಕರ್ನಾಟಕದ ಮಾದರಿಯಲ್ಲೇ 'ಗ್ಯಾರಂಟಿ'ಗಳು ಗೆಲುವಿನ ದಡ ಮುಟ್ಟಿಸಲಿದೆ ಎಂಬ ಹುಸಿ ನಂಬಿಕೆಯಲ್ಲೇ ರಾಜ್ಯ ನಾಯಕರು ಕಾಲಹರಣ ಮಾಡಿದರು. ಪಕ್ಷ ಸಂಘಟನೆಗಾಗಿ ನಾಲ್ಕೈದು ವರ್ಷಗಳಿಂದ ಒಂದಾಗಿ ಕೆಲಸ ಮಾಡಿದ್ದ ಕಮಲನಾಥ್ ಹಾಗೂ ದಿಗ್ವಿಜಯ್ ಸಿಂಗ್ ಅವರು ಚುನಾವಣೆ ಘೋಷಣೆಯಾದ ಬಳಿಕ 'ಅಂತರ' ಕಾಯ್ದುಕೊಂಡರು. ಕಮಲನಾಥ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿದ್ದರಿಂದ ಸಿಂಗ್ ಮುನಿಸಿಕೊಂಡರು. ಚುನಾವಣೆ ವೇಳೆ ಪೂರ್ಣ ಮನಸ್ಸಿನಿಂದ ಕೆಲಸ ಮಾಡಲಿಲ್ಲ. ಕಾಂಗ್ರೆಸ್ ನಾಯಕರು 'ಇಂಡಿಯಾ' ಒಕ್ಕೂಟದ ಪಾಲುದಾರ ಪಕ್ಷಗಳನ್ನು ಹತ್ತಿರಕ್ಕೂ ಸೇರಿಸಿಕೊಳ್ಳಲಿಲ್ಲ.

ಬಿಜೆಪಿಗೆ ನಕಾರಾತ್ಮಕ ಆಗಬಹುದಾದ ಹಲವು ಅಂಶಗಳ ಬಗ್ಗೆ ಗಟ್ಟಿ ಧ್ವನಿಯಲ್ಲಿ ಮಾತನಾಡುವ ಛಾತಿಯನ್ನೂ 'ಕೈ' ನಾಯಕರು ತೋರಲಿಲ್ಲ. ಕಾಂಗ್ರೆಸ್‌ನ 'ತಾರಾ' ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪ್ರಚಾರ ಭಾಷಣಗಳು ಹಾಗೂ ಭರವಸೆಗಳು ಯುವ ಮತದಾರರ ಮನ ಗೆಲ್ಲಲಿಲ್ಲ. ಹಿಂದಿ ಹೃದಯ ಭಾಗದಲ್ಲಿ 'ಗೇಮ್ ಚೇಂಜರ್' ಆಗಲಿದೆ ಎಂದು 'ಕೈ' ನಾಯಕರು ಭಾವಿಸಿದ್ದ 'ಜಾತಿ ಗಣತಿ'ಯ ಮಾತಿಗೆ ಮತದಾರರು ಮರುಳಾಗಲಿಲ್ಲ. ಪರಿಣಾಮವಾಗಿ, ದಶಕಗಳ ಕಾಲ ರಾಜ್ಯವನ್ನು ಆಳಿದ್ದ ಒಂದು ಕಾಲದ ದೈತ್ಯ ಪಕ್ಷ ಇದೀಗ ಸೋತು ಸುಣ್ಣವಾಗಿ ಮಲಗಿದೆ.

ಮತ ಪ್ರಮಾಣ



ಗೆದ್ದ ಪ್ರಮುಖರು

- ಶಿವರಾಜ್ ಸಿಂಗ್ ಚೌಹಾಣ್ (ಬಿಜೆಪಿ)
- ಪ್ರದ್ಯುಮನ್ ಸಿಂಗ್ ತೋಮರ್ (ಬಿಜೆಪಿ)
- ನರೇಂದ್ರ ಸಿಂಗ್ ತೋಮರ್ (ಬಿಜೆಪಿ)
- ಪ್ರಹ್ಲಾದ್ ಪಟೇಲ್ (ಕೇಂದ್ರ ಸಚಿವ, ಬಿಜೆಪಿ)
- ಕಮಲ್‌ನಾಥ್ (ಕಾಂಗ್ರೆಸ್)

ಸೋತ ಪ್ರಮುಖರು

- ಎಫ್.ಸಿ. ಖುಲಸ್ತೆ (ಬಿಜೆಪಿ)
- ನರೋತ್ತಮ ಮಿಶ್ರಾ (ಬಿಜೆಪಿ)
- ಇಮಾರತಿ ದೇವಿ (ಬಿಜೆಪಿ)
- ಚೌಹಾಣ್ ಸಂಪುಟದ 12 ಸಚಿವರು ಸೋಲು ಅನುಭವಿಸಿದ್ದಾರೆ



ಮಧ್ಯ ಪ್ರದೇಶದಲ್ಲಿ ಆಡಳಿತ ವಿರೋಧಿ ಅಲೆಯೇ ಇರಲಿಲ್ಲ. 'ಡಬಲ್ ಎಂಜಿನ್' ಸರ್ಕಾರದ ಕಲ್ಯಾಣ ಯೋಜನೆಗಳು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಯಾಗಿವೆ. ಜತೆಗೆ ಪ್ರಧಾನಿ ಮೋದಿ ಅವರು ರಾಜ್ಯದ ಜನರ ಮನ ಮುಟ್ಟುವಂತೆ ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿ, ಈ ಪ್ರಚಂಡ ಗೆಲುವಿಗೆ ಕಾರಣರಾಗಿದ್ದಾರೆ
ಶಿವರಾಜ್ ಸಿಂಗ್ ಚೌಹಾಣ್, ಮುಖ್ಯಮಂತ್ರಿ, ಮಧ್ಯ ಪ್ರದೇಶ



ಕಾಂಗ್ರೆಸ್‌ನ ಅಜೆಂಡಾದಲ್ಲಿ ಅಲ್ಪಸಂಖ್ಯಾತರ ವಿಷಯ ಇಲ್ಲದಿರುವ ಕಾರಣ ಚುನಾವಣೆಯಲ್ಲಿ ಅದು ಸೋತಿದೆ. 20–25 ದಿನಗಳಲ್ಲಿ ಕಾಂಗ್ರೆಸ್ ಅಲ್ಪಸಂಖ್ಯಾತರ ಬಗ್ಗೆ ಮಾತನಾಡಲಿಲ್ಲ. ಈಗ ಅಲ್ಪಸಂಖ್ಯಾತರು ಕಾಂಗ್ರೆಸ್‌ನ ಅಜೆಂಡಾದಲ್ಲೂ ಇಲ್ಲ
ಗುಲಾಂ ನಬಿ ಆಜಾದ್, ಅಧ್ಯಕ್ಷ, ಡೆಮಾಕ್ರಟಿಕ್ ಪ್ರೋಗ್ರೆಸಿವ್ ಆಜಾದ್ ಪಾರ್ಟಿ



ಮತದಾರರ ತೀರ್ಪನ್ನು ಸ್ವೀಕರಿಸುತ್ತೇವೆ. ಬಿಜೆಪಿ ಜನರ ಆಶಯಗಳನ್ನು ಈಡೇರಿಸುತ್ತದೆ ಎಂದು ನಂಬುತ್ತೇನೆ
ಕಮಲನಾಥ್, ಮಾಜಿ ಮುಖ್ಯಮಂತ್ರಿ



ಮಧ್ಯ ಪ್ರದೇಶದ ಜನರು ಕಲ್ಯಾಣ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ 'ಡಬಲ್ ಎಂಜಿನ್' ಸರ್ಕಾರಕ್ಕೆ ಆಶೀರ್ವಾದ ಮಾಡಿದ್ದಾರೆ
ಜ್ಯೋತಿರಾದಿತ್ಯ ಸಿಂಧಿಯಾ, ಕೇಂದ್ರ ಸಚಿವ

ಆದಿವಾಸಿ ಪಕ್ಷಕ್ಕೆ ಮೊದಲ ಜಯ

ಭೋಪಾಲ್ (ಪಿಟಿಐ): ಭಾರತ್ ಆದಿವಾಸಿ ಪಕ್ಷವು ಮಧ್ಯ ಪ್ರದೇಶದ ರತ್ಲಾಮ್ ಜಿಲ್ಲೆಯ ಸೈಲಾನಾ ಕ್ಷೇತ್ರದಲ್ಲಿ ಗೆಲುವು ಸಾಧಿಸುವ ಮೂಲಕ ತನ್ನ ಮೊದಲ ಜಯ ದಾಖಲಿಸಿದೆ.

ಚುನಾವಣಾ ಆಯೋಗದ ಪ್ರಕಾರ, ಸೈಲಾನಾ ವಿಧಾನಸಭಾ ಕ್ಷೇತ್ರದಲ್ಲಿ ಭಾರತ್ ಆದಿವಾಸಿ ಪಕ್ಷದ ಅಭ್ಯರ್ಥಿ ಕಮಲೇಶ್ವರ ಡೊಡಿಯಾರ್ ಅವರು ಸಮೀಪದ ಪ್ರತಿಸ್ಪರ್ಧಿಯಾದ ಕಾಂಗ್ರೆಸ್ ಅಭ್ಯರ್ಥಿ ಹರ್ಷ ವಿಜಯ್ ಗೆಹಲೋತ್ ವಿರುದ್ಧ 4,618 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ರಾಜಸ್ಥಾನದಲ್ಲಿ ಪ್ರಧಾನ ಕಚೇರಿ ಹೊಂದಿರುವ ಪಕ್ಷವು ಮಧ್ಯ ಪ್ರದೇಶದಲ್ಲಿ ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಗೆಲುವು ದಾಖಲಿಸಿದೆ. ರತ್ಲಾಂ ಜಿಲ್ಲೆಯ ಸೈಲಾನಾ ಕ್ಷೇತ್ರವು ರಾಜಸ್ಥಾನದ ಗಡಿ ಭಾಗದಲ್ಲಿ ಬರುತ್ತದೆ.

9ನೇ ಬಾರಿ ಜಯಿಸಿದ ಭಾರ್ಗವ

ಚುನಾವಣೆ ವೇಳೆಯಲ್ಲಿ ಯಾವುದೇ ಪ್ರಚಾರ ಮಾಡದ ಅಭ್ಯರ್ಥಿ ಎಂದೇ ಪ್ರಸಿದ್ಧಿಯಾಗಿರುವ ಬಿಜೆಪಿ ನಾಯಕ ಗೋಪಾಲ್ ಭಾರ್ಗವ ಅವರು ಮಧ್ಯ ಪ್ರದೇಶದ ರೆಹ್ಲಿ ಕ್ಷೇತ್ರದಿಂದ ಸತತ 9ನೇ ಬಾರಿ ಗೆಲುವು ದಾಖಲಿಸಿದರು.

71 ವರ್ಷದ ಭಾರ್ಗವ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿಯಾದ ಕಾಂಗ್ರೆಸ್‌ನ ಜ್ಯೋತಿ ಪಟೇಲ್ ಅವರನ್ನು 72,800 ಮತಗಳಿಂದ ಸೋಲಿಸಿದ್ದಾರೆ. ಈ ಮೂಲಕ ಭಾರ್ಗವ ಅವರು ನೂತನ ವಿಧಾನಸಭೆಯಲ್ಲಿ ಅತ್ಯಂತ ಅನುಭವಿ ಶಾಸಕರಾಗಲಿದ್ದಾರೆ.


ಕಮಲ್‌ನಾಥ್ ನೇತೃತ್ವದ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. 1985ರಲ್ಲಿ ರೆಹ್ಲಿಯಿಂದ ಮೊದಲ ಬಾರಿಗೆ ಗೆದ್ದಿದ್ದ ಅವರು, ಅಂದಿನಿಂದ ಅಜೇಯರಾಗಿದ್ದಾರೆ.
ಮಾಜಿ ಮುಖ್ಯಮಂತ್ರಿ, ಬಿಜೆಪಿ ನಾಯಕ ದಿವಂಗತ ಬಾಬುಲಾಲ್ ಗೌರ್ ಅವರು 10 ಬಾರಿ ಶಾಸಕರಾಗಿದ್ದರು.

ಚೌಹಾಣ್‌ಗೆ ಭಾರಿ ಅಂತರದ ಜಯ

ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಬುಧ್ನಿ ಕ್ಷೇತ್ರದಲ್ಲಿ ಲಕ್ಷಕ್ಕೂ ಅಧಿಕ ಮತಗಳ ಅಂತರದಲ್ಲಿ ಜಯ ಸಾಧಿಸಿದ್ದಾರೆ. ಅವರು ಒಟ್ಟು 1,64,951 ಮತಗಳನ್ನು ಪಡೆದಿದ್ದಾರೆ. ಅವರ ಸಮೀಪದ ಪ್ರತಿಸ್ಪರ್ಧಿಯಾದ ಕಾಂಗ್ರೆಸ್ ಅಭ್ಯರ್ಥಿ ವಿಕ್ರಮ್ ಮಸ್ತಾಲ್ ಅವರು 59,977 ಮತಗಳನ್ನು ಪಡೆದಿದ್ದಾರೆ. ಚೌಹಾಣ್ ಅವರು ಒಟ್ಟು 1,04,974 ಅಂತರದಿಂದ ಗೆಲುವು ದಾಖಲಿಸಿದ್ದಾರೆ.


ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ದಿಮಾನಿ ಕ್ಷೇತ್ರದಿಂದ ಜಯ ಸಾಧಿಸಿದ್ದಾರೆ. ಅವರು ಬಿಎಸ್‌ಪಿ ಅಭ್ಯರ್ಥಿ ಬಲವೀರ್ ಸಿಂಗ್ ದಂಡೋತಿಯಾ ಅವರ ವಿರುದ್ಧ 24,461 ಮತಗಳ ಅಂತರದಿಂದ ಜಯಗಳಿಸಿದ್ದಾರೆ.

ಕೇಂದ್ರ ಸಚಿವ ಪ್ರಹ್ಲಾದ್ ಪಟೇಲ್ ಅವರು ನರಸಿಂಗಪುರ ಕ್ಷೇತ್ರದಿಂದ ವಿಜಯಗಳಿಸಿದ್ದಾರೆ. ಅವರು ಸಮೀಪದ ಪ್ರತಿಸ್ಪರ್ಧಿ, ಕಾಂಗ್ರೆಸ್‌ನ ಲಖನ್ ಸಿಂಗ್ ಪಟೇಲ್ ಅವರಿಗಿಂತ 31,310 ಹೆಚ್ಚು ಮತಗಳನ್ನು ಪಡೆದು ಜಯಿಸಿದ್ದಾರೆ.



ಸಮೀಕರಣ ಬದಲಿಸಿದ ಸಣ್ಣ ಪಕ್ಷಗಳು

ಮತ ಪ್ರಮಾಣ



- ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರಿಗೆ ಸರ್ದಾರ್‌ಪುರ ಕ್ಷೇತ್ರದಿಂದ ಆರನೇ ಬಾರಿ ಗೆಲುವು
- ಕಾಂಗ್ರೆಸ್ ನಾಯಕ ಸಚಿನ್ ಪೈಲಟ್, ಬಿಜೆಪಿಯ ಅಜಿತ್ ಸಿಂಗ್ ಮೆಹ್ತಾ ವಿರುದ್ಧ 29,475 ಮತಗಳಿಂದ ಗೆದ್ದರು
- ಬಿಜೆಪಿ ನಾಯಕಿ ದಿಯಾ ಕುಮಾರಿಗೆ 71,368 ಮತಗಳ ಜಯ
- 20 ಮಹಿಳಾ ಅಭ್ಯರ್ಥಿಗಳಿಗೆ ಗೆಲುವು; ಕಳೆದ ಬಾರಿ 24 ಮಂದಿ ಗೆದ್ದಿದ್ದರು
- ವಸುಂಧರಾ ರಾಜೇ ಅವರು ಸತತ ಐದನೇ ಬಾರಿ ಆಯ್ಕೆ

• ಜಯಸಿಂಹ ಆರ್.

ಬೆಂಗಳೂರು: ಪ್ರತಿ ಐದು ವರ್ಷಕ್ಕೊಮ್ಮೆ ಸರ್ಕಾರವನ್ನು ಬದಲಿಸುವ ಪರಂಪರೆಯನ್ನು ರಾಜಸ್ಥಾನ ಮುಂದುವರಿಸಿದೆ. 2018ರಲ್ಲಿ ಅಧಿಕಾರ ಕಳೆದುಕೊಂಡಿದ್ದ ಬಿಜೆಪಿ ಈ ಬಾರಿ ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಏರಿದೆ.

ರಾಜಸ್ಥಾನದ ಮೆವಾಡ, ದಹೋತಿ, ಧೂಂದರ್ ಪ್ರಾಂತಗಳು ಬಿಜೆಪಿಯ ಭದ್ರಕೋಟೆ. ಮೂವತ್ತು ವರ್ಷಗಳಲ್ಲಿ ಬಿಜೆಪಿ ಇಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲುತ್ತಲೇ ಬಂದಿದ್ದರೂ, ಕೆಲವು ಸ್ಥಾನಗಳು ಕಾಂಗ್ರೆಸ್‌ನತ್ತ ಹೊರಳಿದಾಗಲೆಲ್ಲಾ ಬಿಜೆಪಿ ಅಧಿಕಾರ ಕಳೆದುಕೊಂಡಿತ್ತು. 2018ರಲ್ಲಿ ಇಲ್ಲಿ ಬಿಜೆಪಿ ಹಲವು ಕ್ಷೇತ್ರಗಳನ್ನು ಕಳೆದುಕೊಂಡು, 35 ಕ್ಷೇತ್ರಗಳನ್ನಷ್ಟೇ ಗೆದ್ದುಕೊಂಡಿತ್ತು. ಜತೆಗೆ ಅಧಿಕಾರವನ್ನೂ ಕಳೆದುಕೊಂಡಿತ್ತು. ಈ ಪ್ರಾಂತಗಳಲ್ಲಿ 90ಕ್ಕೂ ಹೆಚ್ಚು ಕ್ಷೇತ್ರಗಳಿದ್ದು, ಇಲ್ಲಿ ಹೆಚ್ಚು ಸ್ಥಾನ ಗೆದ್ದವರು ರಾಜಸ್ಥಾನದ ಚುಕ್ಕಾಣಿ ಹಿಡಿಯುತ್ತಾರೆ ಎಂಬ ಮಾತಿದೆ. ಹೀಗಾಗಿ ಈ ಬಾರಿ ಬಿಜೆಪಿಯ ರಾಜ್ಯ ಮುಖಂಡರು ಮತ್ತು ಕೇಂದ್ರದ ನಾಯಕರು ಈ ಪ್ರಾಂತಗಳಲ್ಲಿಯೇ ಪ್ರಚಾರಕ್ಕೆ ಒತ್ತು ನೀಡಿದ್ದರು. ಈ ಪ್ರಾಂತಗಳಲ್ಲಿನ ಒಟ್ಟು ಕ್ಷೇತ್ರಗಳಲ್ಲಿ ಬಿಜೆಪಿ 66 ಕ್ಷೇತ್ರಗಳನ್ನು ಗೆದ್ದುಕೊಂಡು ಅಧಿಕಾರ ಖಚಿತಪಡಿಸಿಕೊಂಡಿತು.

ರಾಜಸ್ಥಾನದ ಮಾರ್ವಾಡ ಪ್ರಾಂತವು ಪ್ರತಿ ಚುನಾವಣೆಯಲ್ಲೂ ಮಗ್ಗುಲು ಬದಲಿಸುತ್ತದೆ. 2018ರ ಚುನಾವಣೆಯಲ್ಲಿ ಈ ಪ್ರಾಂತದಲ್ಲಿ ಕಾಂಗ್ರೆಸ್ ಸಂಪೂರ್ಣವಾಗಿ ಮೇಲುಗೈ ಸಾಧಿಸಿತ್ತು. ಈ ಪ್ರಾಂತದ 20 ಕ್ಷೇತ್ರಗಳ ಮತದಾರರು ಈ ಬಾರಿ ಬಿಜೆಪಿಯನ್ನು ಬೆಂಬಲಿಸಿ, ಗೆಲುವಿನ ದಡ ಸೇರಿಸಿದ್ದಾರೆ.

ರಾಜಸ್ಥಾನ ವಿಧಾನಸಭೆಗೆ ಚುನಾವಣೆ ಘೋಷಣೆಯಾದಾಗ, ಈ ಬಾರಿ ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ಬರಬಹುದು ಎಂಬ ಅಭಿಪ್ರಾಯವಿತ್ತು. ಕಾಂಗ್ರೆಸ್ ಸರ್ಕಾರದ ಕೆಲವು ಕಲ್ಯಾಣ ಯೋಜನೆಗಳು ಜನಪ್ರಿಯತೆ ಪಡೆದಿದ್ದವು. ಹೀಗಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರಬಹುದು ಎಂದು ಕೆಲ ಪ್ರಾಂತದ ಮತದಾರರು ಭಾವಿಸಿದ್ದರು ಮತ್ತು ಕೆಲ ಪ್ರಾಂತದ ಮತದಾರರು ಬಯಸಿದ್ದರು. ಇದು ಹಲವು ಪ್ರಾಂತಗಳಲ್ಲಿ ಕಾಂಗ್ರೆಸ್‌ಗೆ ಕೆಲವು ಸ್ಥಾನಗಳನ್ನು ಉಳಿಸಿಕೊಟ್ಟಿದೆ.

ಸರ್ಕಾರ ಬದಲಿಸುವ ಪರಂಪರೆಗೆ ವಿರುದ್ಧವಾಗಿ ಮತದಾನ ಮಾಡಿದ್ದು ಶೆಖಾವತಿ, ಹನುಮಾನ್‌ಗಡ್ ಮತ್ತು ಅಲ್ವರ್ ಪ್ರಾಂತದ ಮತದಾರರು. 2018ರಲ್ಲಿ ಈ ಮತದಾರರು ಕಾಂಗ್ರೆಸ್‌ಗೆ ಮತ ನೀಡಿದ್ದರು. ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಈ ಪ್ರಾಂತಗಳ ಮತದಾರರು ಈ ಬಾರಿಯೂ ಕಾಂಗ್ರೆಸ್‌ಗೆ ಮತ ನೀಡಿದ್ದಾರೆ. ಹೀಗಾಗಿ ಇಲ್ಲಿ ಕಾಂಗ್ರೆಸ್ ಬಹುತೇಕ ಸ್ಥಾನಗಳನ್ನು ಗೆದ್ದುಕೊಂಡಿದೆ.

ರಾಜಸ್ಥಾನದಲ್ಲಿ ಚುನಾವಣೆ ಘೋಷಣೆಯಾದಾಗ ಕಾಂಗ್ರೆಸ್ ಮತ್ತು ಬಿಜೆಪಿಯ ರಾಜ್ಯ ನಾಯಕರು, 'ಇಲ್ಲಿ ಸ್ಪರ್ಧೆ ಇರುವುದು ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ಮಾತ್ರ. ಬೇರೆ ಪಕ್ಷಗಳಿಗೆ ಅವಕಾಶವಿಲ್ಲ' ಎಂದು ಘೋಷಿಸಿದ್ದರು. ಆದರೆ ಈ ಬಾರಿಯ ಮತದಾನದ ಸ್ವರೂಪ ಮತ್ತು ಫಲಿತಾಂಶ ಇಂತಹ ಮಾತನ್ನು ನಿವಾಳಿಸಿ ಎಸೆದಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಮತದಾರರನ್ನೇ ನೆಚ್ಚಿಕೊಂಡು ಬಿಎಸ್‌ಪಿ, ಆಜಾದ್ ಸಮಾಜ್ ಪಾರ್ಟಿ (ಎಎಸ್‌ಪಿ), ಸಿಪಿಎಂ, ಆರ್‌ಎಲ್‌ಪಿ, ಭಾರತೀಯ ಆದಿವಾಸಿ ಪಕ್ಷಗಳೂ (ಬಿಎಪಿ) ಚುನಾವಣಾ ಕಣಕ್ಕೆ ಇಳಿದಿದ್ದವು. ಈ ಪಕ್ಷಗಳನ್ನು ಕಾಂಗ್ರೆಸ್ ಮತ್ತು ಬಿಜೆಪಿ ಕಡೆಗಣಿಸಿದ್ದವು. ಆದರೆ, ಈ ಪಕ್ಷಗಳು ತೀವ್ರ ಹೊಡೆತ ನೀಡಿದ್ದು ಕಾಂಗ್ರೆಸ್‌ಗೆ. ಈ ಪಕ್ಷಗಳು ಒಟ್ಟು ಏಳು ಕ್ಷೇತ್ರಗಳನ್ನು ಗೆದ್ದುಕೊಂಡಿವೆ ಮತ್ತು 32 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಗೆಲುವಿಗೆ ಮುಳುವಾಗಿವೆ.

ಇದೇ ಮೊದಲ ಬಾರಿಗೆ ಕಣಕ್ಕೆ ಇಳಿದಿದ್ದ ಬಿಎಪಿ ಮೂರು ಕ್ಷೇತ್ರಗಳನ್ನು ಗೆದ್ದುಕೊಂಡಿದೆ. ಜತೆಗೆ 10 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಸೋಲಿಗೆ ಕಾರಣವಾಗಿದೆ. ಆ 10 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಸೋಲಿನ ಸರಾಸರಿ ಅಂತರ 8 ಸಾವಿರ ಮತಗಳಷ್ಟು ಇದೆ. ಅಲ್ಲಿ ಬಿಎಪಿ ಅಭ್ಯರ್ಥಿಗಳು ಪಡೆದ ಸರಾಸರಿ ಮತ 37 ಸಾವಿರದಷ್ಟಿದೆ. ಆರ್‌ಎಲ್‌ಪಿ 1 ಕ್ಷೇತ್ರವನ್ನಷ್ಟೇ ಗೆದ್ದುಕೊಂಡಿದ್ದರೂ, 13 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಸೋಲಿಗೆ ಇದೇ ರೀತಿ ಕಾರಣವಾಗಿದೆ. ಆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಸೋಲಿನ ಸರಾಸರಿ ಅಂತರಕ್ಕಿಂತ ಹಲವು ಪಟ್ಟು ಹೆಚ್ಚು ಮತಗಳನ್ನು ಆರ್‌ಎಲ್‌ಪಿ ಅಭ್ಯರ್ಥಿಗಳು ಗಳಿಸಿದ್ದಾರೆ. ಪರಿಣಾಮವಾಗಿ ಈ ಕ್ಷೇತ್ರಗಳಲ್ಲಿ ಬಿಜೆಪಿಯ ಗೆಲುವು ಸುಲಭವಾಗಿದೆ.

ಉತ್ತರ ಪ್ರದೇಶದ ಜತೆ ಗಡಿ ಹಂಚಿಕೊಂಡಿರುವ ಜಿಲ್ಲೆಗಳಲ್ಲಿ ಬಿಎಸ್‌ಪಿ, ಎಎಸ್‌ಪಿ ಮತ್ತು ಸಿಪಿಐ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದವು. ಇದರಲ್ಲಿ ಬಿಎಸ್‌ಪಿ ಮತ್ತು ಎಸ್‌ಎಪಿ ಮೂರು ಕ್ಷೇತ್ರಗಳಲ್ಲಿ ಗೆದ್ದುಕೊಂಡಿವೆ. ಆದರೆ ಸಿಪಿಐ ಸೇರಿ ಮೂರು ಪಕ್ಷಗಳು ಒಟ್ಟು 10 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ತೀವ್ರ ಹೊಡೆತ ನೀಡಿವೆ. ಇನ್ನು ಟಿಕೆಟ್ ಸಿಗದೆ ಕಾಂಗ್ರೆಸ್‌ನಿಂದ ಹೊರಬಂದು ಕಣಕ್ಕೆ ಪಕ್ಷೇತರ ಅಭ್ಯರ್ಥಿಗಳಾಗಿ ಇಳಿದಿದ್ದ 13 ಜನರು, ಕಾಂಗ್ರೆಸ್‌ನ ಅಭ್ಯರ್ಥಿಗಳ ಮತಗಳನ್ನು ಕಸಿದುಕೊಂಡಿದ್ದಾರೆ. ಈ ಕ್ಷೇತ್ರಗಳಲ್ಲಿ ಗೆದ್ದ ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಅಂತರಕ್ಕಿಂತ ಹಲವು ಪಟ್ಟು ಹೆಚ್ಚು ಮತಗಳನ್ನು ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿಗಳು ಪಡೆದಿದ್ದಾರೆ.

ಸಣ್ಣ ಪ್ರಾದೇಶಿಕ ಪಕ್ಷಗಳು ಈ ಚುನಾವಣೆಯಲ್ಲಿ ಪಡೆದ ಮತಗಳು ಮತ್ತು ಗೆದ್ದ ಸ್ಥಾನಗಳು ಮುಂದಿನ ಚುನಾವಣೆಗಳಲ್ಲಿ ಅವನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡಿವೆ. ಮುಂದಿನ ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ತಮ್ಮ ತಂತ್ರಗಳನ್ನು ಬದಲಿಸಲೇಬೇಕಾದಂತಹ ಅನಿವಾರ್ಯವನ್ನು ಈ ಪಕ್ಷಗಳು ನಿರ್ಮಿಸಿವೆ.

ಬಿಜೆಪಿಯ ಗೆಲುವಿನ ಸಂಭ್ರಮ





ರಾಜಸ್ಥಾನದ ಜೈಪುರದಲ್ಲಿ ಬಿಜೆಪಿ ಗೆಲುವನ್ನು ಅದ್ದೂರಿಯಾಗಿ ಸಂಭ್ರಮಿಸಿದ ಕಾರ್ಯಕರ್ತರು –ಪಿಟಿಐ ಚಿತ್ರ

ರಾಜಸ್ಥಾನದ ಮತದಾರರು ಐದು ವರ್ಷಕ್ಕೊಮ್ಮೆ ಸರ್ಕಾರ ಬದಲಿಸುವ ಪರಂಪರೆ ಮುಂದುವರಿಸಿದ್ದಾರೆ ಎಂದು ಹೇಳುವಷ್ಟು ಈ ಬಾರಿಯ ಫಲಿತಾಂಶ ಸರಳವಾಗಿಲ್ಲ. ರಾಜಸ್ಥಾನದಲ್ಲಿನ ಜಾತಿ ರಾಜಕಾರಣದ ಸಮೀಕರಣ ಈ ಬಾರಿ ಗಣನೀಯ ಎನ್ನುವಷ್ಟರಮಟ್ಟಿಗೆ ಬದಲಾಗಿದೆ. ರಾಜಸ್ಥಾನದ ಚುನಾವಣಾ ರಾಜಕಾರಣಕ್ಕೆ ಹೊಸದಿಕ್ಕನ್ನು ತೋರಿಸಿದೆ



ರಾಜಸ್ಥಾನದ ಮತದಾರರು ಕಾಂಗ್ರೆಸ್‌ನ ದುರಾಡಳಿತವನ್ನು ತಿರಸ್ಕರಿಸಿ, ಪ್ರಧಾನಿ ನರೇಂದ್ರ ಮೋದಿ ಅವರ ಉತ್ತಮ ಆಡಳಿತವನ್ನು ಒಪ್ಪಿಕೊಂಡಿದ್ದಾರೆ. ಇದು ರಾಜ್ಯದ ಜನರಿಗೆ ದೊರೆತ ಗೆಲುವು
ವಸುಂಧರಾ ರಾಜೇ, ಮಾಜಿ ಮುಖ್ಯಮಂತ್ರಿ



ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಜೆ. ಪಿ ನಡ್ಡಾ, ಪಕ್ಷದ ಇತರ ಮುಖಂಡರು ಹಾಗೂ ಕಾರ್ಯಕರ್ತರಿಗೆ ಗೆಲುವಿನ ಶ್ರೇಯ ಸಲ್ಲುತ್ತದೆ. ರಾಜ್ಯದಲ್ಲಿ ಒಳ್ಳೆಯ ಆಡಳಿತ ಮತ್ತು ಅಭಿವೃದ್ಧಿಯನ್ನು ಖಾತರಿಪಡಿಸುತ್ತೇವೆ
ದಿಯಾ ಕುಮಾರಿ, ಬಿಜೆಪಿ ನಾಯಕಿ



ಇದು ಅನಿರೀಕ್ಷಿತ ಫಲಿತಾಂಶ. ಸರ್ಕಾರದ ಯೋಜನೆಗಳನ್ನು ಜನರ ಬಳಿ ಸಂಪೂರ್ಣವಾಗಿ ತಲುಪಿಸಲು ನಾವು ವಿಫಲರಾಗಿರುವುದನ್ನು ಈ ಸೋಲು ತೋರಿಸುತ್ತದೆ. ಜನಾದೇಶಕ್ಕೆ ತಲೆಬಾಗಿದ್ದೇವೆ
ಅಶೋಕ್ ಗೆಹಲೋತ್, ಮುಖ್ಯಮಂತ್ರಿ



ಪಕ್ಷವು ಜನಾದೇಶವನ್ನು ಗೌರವಿಸುತ್ತದೆ ಮತ್ತು ಅಧಿಕಾರ ಕಳೆದುಕೊಂಡರೂ ಜನರಿಗಾಗಿ ಕೆಲಸ ಮಾಡುವುದನ್ನು ಮುಂದುವರಿಸಲಿದೆ. ಗೆದ್ದ ಅಭ್ಯರ್ಥಿಗಳ ಸಭೆ ಮಂಗಳವಾರ ಜೈಪುರದಲ್ಲಿ ನಡೆಯಲಿದೆ
ಗೋವಿಂದ್ ಸಿಂಗ್ ಡೊಟಾಸರಾ, ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ

ಗೆಹಲೋತ್ ರಾಜೀನಾಮೆ

ಜೈಪುರ (ಪಿಟಿಐ): ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸೋಲು ಖಾತರಿಯಾದ ಕೂಡಲೇ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಬಿಜೆಪಿ ಗೆದ್ದ ಸ್ಥಾನಗಳು ಮ್ಯಾಜಿಕ್ ಸಂಖ್ಯೆ (100) ದಾಟುತ್ತಿದ್ದಂತೆಯೇ ಭಾನುವಾರ ಸಂಜೆ ರಾಜಭವನಕ್ಕೆ ತೆರಳಿ ರಾಜ್ಯಪಾಲ ಕಲ್ರಾಜ್ ಮಿಶ್ರಾ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

72 ವರ್ಷದ ಗೆಹಲೋತ್ ಅವರು ಒಟ್ಟು ಮೂರು ಸಲ (1998-2003, 2008-13 ಮತ್ತು 2018-23) ಮುಖ್ಯಮಂತ್ರಿ ಆಗಿದ್ದರು.

'ಹೊಸ ಸರ್ಕಾರಕ್ಕೆ ಶುಭ ಹಾರೈಸುತ್ತೇನೆ. ನನ್ನ ಸಲಹೆ ಏನೆಂದರೆ, ಕಷ್ಟಪಟ್ಟು ಕೆಲಸ ಮಾಡಿದರೂ ನಮಗೆ ಯಶಸ್ಸು ಸಿಗಲಿಲ್ಲ. ಸರ್ಕಾರ ರಚಿಸಿದ ನಂತರ ನೀವು ಕೆಲಸ ಮಾಡಬಾರದು ಎಂಬುದು ಇದರ ಅರ್ಥವಲ್ಲ' ಎಂದು ಅವರು 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಹಲವು ಸಚಿವರಿಗೆ ಸೋಲು

ವಿಪತ್ತು ನಿರ್ವಹಣಾ ಸಚಿವ ಗೋವಿಂದ್ ರಾಮ್ ಮೆಗವಾಲ್ ಸೇರಿದಂತೆ ಅಶೋಕ್ ಗೆಹಲೋತ್ ಸರ್ಕಾರದಲ್ಲಿ ಸಚಿವರಾಗಿದ್ದ ಹಲವರು ಸೋತಿದ್ದಾರೆ.

ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಾರ ಸಮಿತಿಯ ಚುಕ್ಕಾಣಿ ಹಿಡಿದಿದ್ದ ಮೆಗವಾಲ್ ಅವರು ಖಾಜೂವಾಲಾ ಕ್ಷೇತ್ರದಲ್ಲಿ ಬಿಜೆಪಿಯ ವಿಶ್ವನಾಥ್ ಮೆಗವಾಲ್ ಕೈಯಲ್ಲಿ ಪರಾಭವಗೊಂಡರು.

ಭನ್ವರ್ ಸಿಂಗ್ ಭಾಟೀ (ಕೊಲಾಯತ್ ಕ್ಷೇತ್ರ), ಶಕುಂತಲಾ ರಾವತ್ (ಬಾನಸೂರ್), ವಿಶ್ವೇಂದ್ರ ಸಿಂಗ್ (ಡೀಗ್ ಕುಮೇರ್), ರಮೇಶ್ ಚಾಂದ್ ಮೀನಾ (ಸಪೋಟರಾ), ಶಾಲೇ ಮೊಹಮ್ಮದ್ (ಪೋಕರಣ್) ಮತ್ತು ಉದ್ಯೆಲಾಲ್ ಅಂಜನಾ (ನಿಂಬಾಹೆರಾ) ಅವರು ಸೋತ ಸಚಿವರಲ್ಲಿ ಸೇರಿದ್ದಾರೆ. ಗೆಹಲೋತ್ ಅಲ್ಲದೆ ಸಂಪುಟದ 25 ಸಚಿವರು ಚುನಾವಣೆಯಲ್ಲಿ ಸ್ಪರ್ಧಿಸಿದ್ದರು.


ಏಳು ಸಂಸದರಲ್ಲಿ ನಾಲ್ವರಿಗೆ ಜಯ

ರಾಜಸ್ಥಾನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಬಿಜೆಪಿಯ ಏಳು ಸಂಸದರಲ್ಲಿ ನಾಲ್ವರು ಗೆದ್ದರೆ, ಮೂವರು ಪರಾಭವಗೊಂಡರು.

ಬಿಜೆಪಿಯು ಸಂಸದರಾದ ದಿಯಾ ಕುಮಾರಿ (ರಾಜಸಮಂದ್), ರಾಜ್ಯವರ್ಧನ್ ಸಿಂಗ್ ರಾಠೋಡ್ (ಜೈಪುರ ಗ್ರಾಮಾಂತರ), ಭಗೀರಥ ಚೌಧರಿ (ಅಜ್ಮೀರ್), ಬಾಬಾ ಬಾಲಕನಾಥ (ಅಲ್ವರ್), ನರೇಂದ್ರ ಕುಮಾರ್ (ಜುಂಜುನು), ದೇವ್‌ಜೀ ಪಟೇಲ್ (ಜಾಲೋರ್) ಮತ್ತು ರಾಜ್ಯಸಭಾ ಸದಸ್ಯ ಕಿರೋಡೀ ಲಾಲ್ ಮೀನಾ ಅವರನ್ನು ಕಣಕ್ಕಿಳಿಸಿತ್ತು.


ಇದರಲ್ಲಿ ಜೈಪುರ ರಾಜಮನೆತನದ ದಿಯಾ, ರಾಜ್ಯವರ್ಧನ್, ಬಾಲಕನಾಥ್ ಮತ್ತು ಮೀನಾ ಅವರು ಗೆದ್ದರು.

ರಾಷ್ಟ್ರೀಯ ಲೋಕತಾಂತ್ರಿಕ್ ಪಕ್ಷದ (ಆರ್‌ಎಲ್‌ಪಿ) ಸಂಚಾಲಕ ಮತ್ತು ನಾಗೌರ್ ಸಂಸದ ಹನುಮಾನ್ ಬೆನೀವಾಲ್ ಅವರು ಖಿನ್ವಸರ್ ಕ್ಷೇತ್ರದಿಂದ ಜಯಿಸಿದರು.



ಅಹಂಕಾರಕ್ಕೆ ಭಾರಿ ಬೆಲೆ ತೆತ್ತ ಕೆಸಿಆರ್

ಮತ ಪ್ರಮಾಣ



- ತೆಲಂಗಾಣ ವಿಧಾನಸಭೆಯಲ್ಲಿ ಸಿಪಿಐ ಪಕ್ಷವು ಖಾತೆ ತೆರೆದಿದೆ. ಕೊತ್ತಗೂಡೆಂ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಕೆ. ಸಾಂಬಶಿವ ರಾವ್ ಗೆದ್ದಿದ್ದಾರೆ
- ಬಿಜೆಪಿಯ ಮೂವರು ಸಂಸದರು (ಬಂಡಿ ಸಂಜಯ್, ಧರ್ಮಪುರಿ ಅರವಿಂದ್ ಮತ್ತು ಸೋಯಂ ಬಾಪುರಾವ್) ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದಾರೆ
- ಜ್ಯುಬಿಲಿ ಹಿಲ್ಸ್ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಮೊಹಮ್ಮದ್ ಅಜರುದ್ದೀನ್ ಅವರು ಬಿಆರ್‌ಎಸ್ ಅಭ್ಯರ್ಥಿ ಮಾಗಂಟಿ ಗೋಪಿನಾಥ್ ಎದುರು 16 ಸಾವಿರಕ್ಕೂ ಅಧಿಕ ಮತಗಳಿಂದ ಸೋತಿದ್ದಾರೆ

• ಸುದೇಶ ದೊಡ್ಡಪಾಳ್ಯ



ಬೆಂಗಳೂರು: ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರು ತಮ್ಮ ಅಹಂಕಾರಕ್ಕೆ ಭಾರಿ ಬೆಲೆ ತೆತ್ತಿದ್ದಾರೆ. ಎರಡು ಬಾರಿ ಅಧಿಕಾರದ ಗದ್ದುಗೆಯನ್ನು ಸುಲಭವಾಗಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದ ಅವರು, ಮೂರನೇ ಬಾರಿ ಜೋರಾಗಿಯೇ ಎಡವಿ ಬಿದ್ದಿದ್ದಾರೆ. ಹೀಗಾಗಿ ದಕ್ಷಿಣ ಭಾರತದಲ್ಲಿ ಸತತ ಮೂರನೇ ಬಾರಿಗೆ ಮುಖ್ಯಮಂತ್ರಿಯಾಗಿ 'ದಾಖಲೆ' ಬರೆಯುವ ಅವಕಾಶ ಕಳೆದುಕೊಂಡರು.

ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷದ ಚುಕ್ಕಾಣಿ ಹಿಡಿದಿರುವ ಕೆಸಿಆರ್ ಅವರು 'ದೊರೆ'ಯಂತೆ ನಡೆದುಕೊಳ್ಳುವುದನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ದೊರಲ ತೆಲಂಗಾಣ V/S ಪ್ರಜಲ ತೆಲಂಗಾಣ' ಎಂದು ಇಡೀ ಚುನಾವಣಾ ಪ್ರಚಾರದುದ್ದಕ್ಕೂ ಕೂಗಿ ಕೂಗಿ ಹೇಳಿದರು. ಪಕ್ಷದ ಕಾರ್ಯಕರ್ತರೂ ಅದೇ ಧಾಟಿಯಲ್ಲಿ ಮಾತನಾಡಿದರು. ಅವರು ತಮ್ಮದೇ ಮನದ ಮಾತುಗಳನ್ನು ಆಡುತ್ತಿದ್ದಾರೆ ಎಂದು ಜನರು ಖುಷಿಪಟ್ಟರು. ಏಕೆಂದರೆ, ಕೆಸಿಆರ್ ಅವರ ಉಡಾಫೆ ವರ್ತನೆ ಮತ್ತು ಮಾತು ಜನರಲ್ಲಿ ರೇಜಿಗೆ ತರಿಸಿತ್ತು.

ಕಾಂಗ್ರೆಸ್‌ನ ಭರ್ಜರಿ ಗೆಲುವಿನ ಹಿಂದೆ ಕೆಸಿಆರ್ ಮಾಡಿದ ಸರಣಿ ತಪ್ಪುಗಳ ಪಾಲು ಹೆಚ್ಚಿದೆ. ಜನರಿರಲಿ, ಸ್ವತಃ ಸಚಿವರು, ಶಾಸಕರು, ಪಕ್ಷದ ಮುಖಂಡರೇ ಮುಖ್ಯಮಂತ್ರಿಯನ್ನು ಭೇಟಿ ಮಾಡುವುದೇ ಕಷ್ಟವಾಗಿತ್ತು. ತೋಟದಮನೆಯಿಂದಲೇ ಆಡಳಿತ ನಡೆಯುತ್ತಿತ್ತು. ತಮ್ಮ ಹೆಸರು ಶಾಶ್ವತವಾಗಿ ಉಳಿಯಬೇಕು ಎನ್ನುವ ಕಾರಣಕ್ಕಾಗಿ ಜನಪ್ರಿಯ ಯೋಜನೆಗಳ ಬೆನ್ನುಬಿದ್ದರು. ಹತ್ತಾರು 'ಬಂಧು' ಯೋಜನೆಗಳನ್ನು ಘೋಷಿಸಿದ್ದರು. ಅವುಗಳನ್ನು ಜಾರಿಗೆ ತರಲು ಹಣವಿಲ್ಲದೆ ಏದುಸಿರುಬಿಟ್ಟಿದ್ದರು. ಯೋಜನೆಗಳ ಫಲ ಸಿಗದೇ ಸಾಮಾನ್ಯ ಜನರ ಸಿಟ್ಟು ನೆತ್ತಿಗೇರಿತ್ತು. ಇದಕ್ಕೆ ಕಳಶವಿಟ್ಟಂತೆ ಬಿಆರ್‌ಎಸ್ ಪಕ್ಷವು ಕೆಸಿಆರ್ 'ಕುಟುಂಬದ ಆಸ್ತಿ' ಎನ್ನುವಂತಾಗಿತ್ತು. ಬಿಆರ್‌ಎಸ್ ಪಕ್ಷ ಎಂದರೆ ಕೆಸಿಆರ್, ಅವರ ಪುತ್ರ ಕೆ.ಟಿ.ರಾಮರಾವ್, ಪುತ್ರಿ, ವಿಧಾನಪರಿಷತ್ ಸದಸ್ಯೆ ಕೆ.ಕವಿತಾ ರಾವ್, ಸೋದರಳಿಯ ಹರೀಶ್ ರಾವ್ ಎನ್ನುವಂತಾಗಿತ್ತು. ಸ್ವಜನಪಕ್ಷಪಾತ ಎಲ್ಲೆ ಮೀರಿತ್ತು. ಜನರ ತಾಳ್ಮೆಯೂ ಕೂಡ.

ಆಡಳಿತ ಪಕ್ಷದ ಶಾಸಕರು ಭ್ರಷ್ಟಾಚಾರದಲ್ಲಿ ಮುಳುಗಿದ್ದರು. ಸರ್ಕಾರದ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ 'ಕಮಿಷನ್' ಪಡೆದ ಆರೋಪ ಜೋರಾಗಿಯೇ ಕೇಳಿಬಂದಿತ್ತು. ಕನಿಷ್ಠ 30 ಶಾಸಕರ ಮೇಲೆ ಜನರು ಬಹಿರಂಗವಾಗಿಯೇ ಆಕ್ರೋಶ ವ್ಯಕ್ತಪಡಿಸುತ್ತಿದ್ದರು. ಆದರೆ, ಕೆಸಿಆರ್ ಅವುಗಳನ್ನು ಗಣನೆಗೇ ತೆಗೆದುಕೊಳ್ಳದೆ ಟಿಕೆಟ್ ಕೊಟ್ಟು ದೊಡ್ಡ ತಪ್ಪು ಮಾಡಿದರು.

ತೆಲಂಗಾಣ ರಾಜ್ಯ ಲೋಕಸೇವಾ ಆಯೋಗದ ಮೂಲಕ ಗ್ರೂಪ್ 1 ಮತ್ತು ಗ್ರೂಪ್ 2 ಹುದ್ದೆಗಳ ನೇಮಕಾತಿ ವಿಷಯದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಯಿತು. ಹತ್ತು ವರ್ಷಗಳಿಂದ ಉದ್ಯೋಗದ ಕನಸು ಕಾಣುತ್ತಿದ್ದ ಲಕ್ಷಾಂತರ ಉದ್ಯೋಗಾಂಕಾಕ್ಷಿಗಳು ಹತಾಶೆಗೆ ಜಾರಿದ್ದರು. ಇದು ಸಿಟ್ಟಾಗಿ ಪರಿವರ್ತನೆಗೊಂಡಿತು.

ಹತ್ತು ವರ್ಷಗಳಿಂದ ನೆಲಕಚ್ಚಿ ಮಲಗಿದ್ದ ತೆಲಂಗಾಣ ಕಾಂಗ್ರೆಸ್‌ಗೆ ಪಕ್ಕದ ಕರ್ನಾಟಕದಲ್ಲಿನ ಗೆಲುವು ಮೈಕೊಡವಿಕೊಂಡು ಮೇಲೆದ್ದು ಕೂರುವಂತೆ ಮಾಡಿತು. ಕೇವಲ ಮೂರು ತಿಂಗಳಲ್ಲಿ 'ಪವಾಡ' ಎನ್ನುವಂತೆ ಕಾಂಗ್ರೆಸ್ ಎದ್ದುನಿಂತಿತು. ಆಡಳಿತ ಪಕ್ಷಕ್ಕಿಂತ ಮೊದಲೇ 'ಚುನಾವಣಾ ಕಣ'ವನ್ನು ಹದಮಾಡಿಕೊಂಡಿತ್ತು. ರಣತಂತ್ರಗಳನ್ನು ಹೆಣೆಯ ತೊಡಗಿತ್ತು. ಆರು ಗ್ಯಾರಂಟಿಗಳನ್ನು ಘೋಷಣೆ ಮಾಡಿತು. ಅವುಗಳ ಬಗೆಗೆ ಜನರು ಒಲವು ತೋರಲು ಆರಂಭಿಸಿದರು. ಕಾಂಗ್ರೆಸ್ ಇಡೀ ತಂಡವಾಗಿ ಕೆಲಸ ಮಾಡಲು ಆರಂಭಿಸಿತು. ನಾಯಕ ರಾಹುಲ್ ಗಾಂಧಿ ಸಾರಥಿಯಂತೆ ನಿಂತರು. ಪ್ರಜೆಗಳಿಗೆ 'ಪ್ರಭುತ್ವ' ಕುರಿತಾಗಿ ಇದ್ದ ದೊಡ್ಡ ಪ್ರಮಾಣದ ಆಕ್ರೋಶವನ್ನು ಗುರುತಿಸುವಲ್ಲಿ ಸಫಲರಾದರು. ಅದನ್ನು ಬಡಿದೆಬ್ಬಿಸಿದರು. ರಾಜ್ಯದ ಮೂಲೆ ಮೂಲೆಯಲ್ಲೂ ರೈತರು, ಯುವಕರು, ಮಹಿಳೆಯರು, ಹಿಂದುಳಿದವರು, ಅಲ್ಪಸಂಖ್ಯಾತರು, ನೌಕರರು ಸರ್ಕಾರವನ್ನು ಬದಲಿಸುವ ಮಾತುಗಳನ್ನು ಆಡತೊಡಗಿದರು.

ತೆಲಂಗಾಣ ರೈತರ ದಶಕಗಳ ಕನಸು ಕಾಳೇಶ್ವರ ಏತ ನೀರಾವರಿ ಯೋಜನೆ. ಇದಕ್ಕೆ ಸುಮಾರು ₹ 1 ಲಕ್ಷಕ್ಕೂ ಅಧಿಕ ಕೋಟಿ ಖರ್ಚಾಗಿದೆ. ಇದು ರಾಜ್ಯದ ಮಹತ್ವಾಕಾಂಕ್ಷೆ ಯೋಜನೆ. ಇದರಲ್ಲಿ ಕೆಸಿಆರ್ ಭಾರೀ ಭ್ರಷ್ಟಾಚಾರ ಮಾಡಿದ್ದಾರೆ ಎನ್ನುವ ಆರೋಪವನ್ನು ಕಾಂಗ್ರೆಸ್, ಬಿಜೆಪಿ ಮಾಡುತ್ತಲೇ ಬಂದಿದ್ದವು, ಜನರು ನಂಬಿರಲಿಲ್ಲ. ತಿಂಗಳ ಹಿಂದೆಯಷ್ಟೇ ಮೇಡಿಗಡ್ಡ ಬ್ಯಾರೇಜ್‌ನ 'ಮೂರು ಪಿಲ್ಲರ್'ಗಳು ಕುಸಿದವು. ಇದನ್ನು ಕಾಂಗ್ರೆಸ್ ಚುನಾವಣೆ ವಿಷಯವನ್ನಾಗಿ ಮಾಡಿತು. ಆಕ್ರಮಣಕಾರಿ ಪ್ರಚಾರವೂ ಸೇರಿದಂತೆ ಇವುಗಳೆಲ್ಲೂ ಕಾಂಗ್ರೆಸ್‌ಗೆ ವರವಾಗಿ ಪರಿಣಮಿಸಿದವು.

ಗ್ರೇಟರ್ ಹೈದರಾಬಾದ್ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ 48 ಸ್ಥಾನ ಗೆದ್ದು ಬಿಜೆಪಿ ಅದ್ಭುತ ಪ್ರದರ್ಶನ ನೀಡಿತು. ಇದು ಬಿಆರ್‌ಎಸ್‌ಗೆ ಬಿಜೆಪಿ 'ಪರ್ಯಾಯ' ಎನ್ನುವಂತೆ ಜನರು ಆಸೆಗಣ್ಣಿನಿಂದ ನೋಡುತ್ತಿದ್ದರು. ಆದರೆ, ದೆಹಲಿ ಅಬಕಾರಿ ಹಗರಣದಲ್ಲಿ ಕೆಸಿಆರ್ ಪುತ್ರಿ ಕೆ.ಕವಿತಾ ರಾವ್ ಅವರನ್ನು ಇ.ಡಿ ಬಂಧಿಸಲಿಲ್ಲ. ಇದರ ಹಿಂದೆ ಬಿಜೆಪಿ, ಬಿಆರ್‌ಎಸ್ ಒಳಒಪ್ಪಂದವಾಗಿದೆ ಎನ್ನುವ ಭಾವನೆ ಜನರಲ್ಲಿ ಬಲವಾಯಿತು. ಬಿಜೆಪಿ ಸೊಗಸಾದ ಅವಕಾಶವನ್ನು ಕೈ ಚೆಲ್ಲಿತು.

ಈ ಚುನಾವಣೆಯಲ್ಲಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುವ ತವಕದಲ್ಲಿದ್ದ ಬಿಜೆಪಿ ಹಿಂದುಳಿದ ವರ್ಗಕ್ಕೆ ಮುಖ್ಯಮಂತ್ರಿ ಸ್ಥಾನ ನೀಡುವುದಾಗಿ ಘೋಷಿಸಿತು. ಹಿಂದುತ್ವದ ಪ್ರಯೋಗ ಶಾಲೆಯನ್ನಾಗಿಸಿಕೊಂಡಿರುವ ಉತ್ತರ ತೆಲಂಗಾಣದ ಆದಿಲಾಬಾದ್ ಮತ್ತು ನಿಜಾಮಾಬಾದ್ ವ್ಯಾಪ್ತಿಯಲ್ಲಿ ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಭರ್ಜರಿ ಪ್ರಚಾರ ನಡೆಸಿದರು. ಇದರ ಪರಿಣಾಮವಾಗಿ ಎಂಟು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ಸಮಾಧಾನಪಟ್ಟುಕೊಂಡಿದೆ.

ಅಸಾದುದ್ದೀನ್ ಓವೈಸಿಯ ಎಐಎಂಐಎಂ ಪಕ್ಷ ತನ್ನ ಏಳು ಸೀಟುಗಳನ್ನು ಪಕ್ಕಾ ಮಾಡಿಕೊಂಡಿದೆ. ತಮ್ಮ ಸಾಮರ್ಥ್ಯ ಮತ್ತು ಮಿತಿಯನ್ನು ಚೆನ್ನಾಗಿ ಅರಿತಿರುವ ಓವೈಸಿ, ತಮ್ಮ ಶಕ್ತಿ ಇರುವಲ್ಲಿ ಮಾತ್ರ ಅಖಾಡಕ್ಕೆ ಇಳಿದು ಬೇಕಾದ ಫಲಿತಾಂಶವನ್ನು ಪಡೆದರು.

ಇವೆಲ್ಲಾ ಕಾರಣದಿಂದ ಕಾಂಗ್ರೆಸ್ ಪಕ್ಷ ತೆಲಂಗಾಣ ರಾಜ್ಯ ಉದಯವಾದ ಹತ್ತು ವರ್ಷಗಳ ನಂತರದಲ್ಲಿ 'ಫೀನಿಕ್ಸ್ ಹಕ್ಕಿ'ಯಂತೆ ಬೂದಿಯಿಂದ ಮೇಲೆದ್ದು ಮರುಹುಟ್ಟು ಪಡೆದು ಅಧಿಕಾರದ ಗದ್ದುಗೆ ಏರಿದೆ.

ವಿಜಯ ಸಾರಥಿ...



ರೇವಂತ ರೆಡ್ಡಿ ಅವರು ಸಂಭ್ರಮಿಸಿದ ಕ್ಷಣ



> ಪಕ್ಷಕ್ಕೆ ಸತತ ಎರಡು ಅವಧಿಗೆ ಸರ್ಕಾರ ರಚಿಸಲು ಅವಕಾಶ ನೀಡಿದ್ದ ತೆಲಂಗಾಣದ ಜನರಿಗೆ ಕೃತಜ್ಞತೆಗಳು. ಫಲಿತಾಂಶದಿಂದ ಬೇಸರವಾಗಿಲ್ಲ. ಆದರೆ ಫಲಿತಾಂಶ ನಿರೀಕ್ಷಿತವಾಗಿರದ ಕಾರಣ ಖಂಡಿತವಾಗಿಯೂ ನಿರಾಶೆಯಾಗಿದೆ
> **ಕೆ.ಟಿ. ರಾಮರಾವ್,** ಬಿಆರ್‌ಎಸ್ ಕಾರ್ಯಾಧ್ಯಕ್ಷ



> ತೆಲಂಗಾಣದ ಜನರ ಆಕಾಂಕ್ಷೆಗಳಿಗೆ ಸ್ಪಂದಿಸುವುದು ಕಾಂಗ್ರೆಸ್ಸಿನ ಜವಾಬ್ದಾರಿ. ಇದು ಜನರ ತೀರ್ಪು... ಜನರಿಗೆ ಬದಲಾವಣೆ ಬೇಕಿತ್ತು. ಕೆಸಿಆರ್ ಅವರನ್ನು ಸೋಲಿಸಲು ಅವರು ಬಯಸಿದ್ದರು. ಕೆಸಿಆರ್ ಅವರನ್ನು ಸೋಲಿಸಿದ್ದಾರೆ. ಅಷ್ಟೇ.
> **ರೇವಂತ್ ರೆಡ್ಡಿ,** ತೆಲಂಗಾಣ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ



> ತೆಲಂಗಾಣದ ಜನಾದೇಶವನ್ನು ವಿನಮ್ರವಾಗಿ ಒಪ್ಪಿಕೊಳ್ಳುತ್ತೇವೆ. ತೆಲಂಗಾಣದಲ್ಲಿ ಬಿಜೆಪಿ ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ. ನಮ್ಮ ದೃಷ್ಟಿಕೋನದ ಮೇಲೆ ವಿಶ್ವಾಸ ಇರಿಸಿದ ಜನರಿಗೆ ಕೃತಜ್ಞತೆ ಅರ್ಪಿಸುತ್ತೇನೆ
> **ಜೆ.ಪಿ. ನಡ್ಡಾ,** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ



> ಇದು ತೆಲಂಗಾಣ ರಾಜ್ಯದ ಜನರ ಗೆಲುವು. ದಕ್ಷಿಣ ಭಾರತದಲ್ಲಿ ಕಾಂಗ್ರೆಸ್ ಪ್ರಾಬಲ್ಯದ ಸಂಕೇತ ಈ ಗೆಲುವು. ನಮ್ಮ ಕಾರ್ಯಕರ್ತರು ಮತ್ತು ಮುಖಂಡರ ಸಂಘಟಿತ ಹೋರಾಟದ ಫಲವೇ ಈ ಗೆಲುವು.
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

ಕಾಮಾರೆಡ್ಡಿ: ಕೆಸಿಆರ್‌ಗೆ ಸೋಲು

ಹೈದರಾಬಾದ್ (ಪಿಟಿಐ): ಕಾಮಾರೆಡ್ಡಿ ಕ್ಷೇತ್ರದಲ್ಲಿ ಬಿಜೆಪಿಯ ಕೆ. ವೆಂಕಟರಮಣ ರೆಡ್ಡಿ ಅವರು ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಮತ್ತು ತೆಲಂಗಾಣ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ಅವರನ್ನು ಸೋಲಿಸಿದ್ದಾರೆ.



ಕೆ. ವೆಂಕಟರಮಣ ರೆಡ್ಡಿ

ವೆಂಕಟರಮಣ ರೆಡ್ಡಿ ಅವರು ಕೆಸಿಆರ್ ಅವರಿಗಿಂತ 6,741 ಹೆಚ್ಚು ಮತಗಳನ್ನು ಪಡೆದು, ಜಯ ಸಾಧಿಸಿದ್ದಾರೆ. 'ಈ ಕ್ಷೇತ್ರದಲ್ಲಿ ದೊಡ್ಡ ನಾಯಕರು ಸ್ಪರ್ಧಿಸಿದ್ದರಿಂದ ಕ್ಷೇತ್ರವು ಹೆಚ್ಚಿನ ಗಮನ ಸೆಳೆದಿತ್ತು. ಕೆಸಿಆರ್, ರೇವಂತ್ ರೆಡ್ಡಿ ವಿರುದ್ಧ ಗೆಲುವು ಸಾಧಿಸುವ ಅದೃಷ್ಟ ನನ್ನದಾಗಿತ್ತು' ಎಂದು ವೆಂಕಟರಮಣ ರೆಡ್ಡಿ ಹೇಳಿದ್ದಾರೆ.

ಸಾಮರ್ಥ್ಯ ಸಾಬೀತುಪಡಿಸಿದ ಸುನೀಲ್

ನವದೆಹಲಿ (ಪಿಟಿಐ): ಚುನಾವಣಾ ಕಾರ್ಯತಂತ್ರ ನಿಪುಣ ಸುನೀಲ್ ಕನುಗೋಲು ಅವರು ತೆಲಂಗಾಣದಲ್ಲಿ ಕೂಡ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸಾಧಿಸಿದ ಗೆಲುವಿನಲ್ಲಿ ಸುನೀಲ್ ಅವರ ಕಾರ್ಯತಂತ್ರ ಕೂಡ ಕೆಲಸ ಮಾಡಿತ್ತು. ಈಗ ಅವರು ತೆಲಂಗಾಣದಲ್ಲಿಯೂ ತಮ್ಮ ಜಾಣ್ಮೆ ತೋರಿಸಿದ್ದಾರೆ.

ಸುನೀಲ್ ಅವರು ತೆಲಂಗಾಣ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ಜೊತೆಗೂಡಿ ಪಕ್ಷದ ಕಾರ್ಯತಂತ್ರವನ್ನು ರೂಪಿಸಿದ್ದರು. ಕರ್ನಾಟಕ ಮತ್ತು ತೆಲಂಗಾಣದಲ್ಲಿ ಸುನೀಲ್ ಅವರಿಗೆ ಮುಕ್ತ ಸ್ವಾತಂತ್ರ್ಯ ನೀಡಿದ್ದ ಕಾರಣಕ್ಕೆ ಅವರು ಯಶಸ್ಸು ಕಂಡಿದ್ದಾರೆ ಎಂದು ಮೂಲಗಳು ಹೇಳಿವೆ.


ಸುನೀಲ್ ಅವರು ಕರ್ನಾಟಕದವರು. ಕರ್ನಾಟಕದಲ್ಲಿ, ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ಕಾಂಗ್ರೆಸ್ ಪಕ್ಷ ನಡೆಸಿದ 'ಪೇಸಿಎಂ' ಅಭಿಯಾನದ ಹಿಂದೆ ಸುನೀಲ್ ಅವರ ಆಲೋಚನೆಗಳು ಕೆಲಸ ಮಾಡಿದ್ದವು ಎನ್ನಲಾಗಿದೆ. ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ನಡೆಸಿದ ಚುನಾವಣಾ ಪ್ರಚಾರ ಅಭಿಯಾನದಲ್ಲಿ ಸಾಮ್ಯತೆಗಳು ಹಲವು ಇದ್ದವು.

ತೆಲಂಗಾಣ ಡಿಜಿಪಿ ಅಮಾನತು

ನವದೆಹಲಿ (ಪಿಟಿಐ): ತೆಲಂಗಾಣದ ಪೊಲೀಸ್ ಮಹಾನಿರ್ದೇಶಕ ಅಂಜನಿ ಕುಮಾರ್ ಅವರನ್ನು ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಹುದ್ದೆಯಿಂದ ಅಮಾನತು ಮಾಡಿ ಚುನಾವಣಾ ಆಯೋಗ ಆದೇಶಿಸಿದೆ ಎಂದು ಮೂಲಗಳು ಹೇಳಿವೆ.

ಕುಮಾರ್ ಅವರು ಮತಗಳ ಎಣಿಕೆ ನಡೆದಿದ್ದ ಹೊತ್ತಿನಲ್ಲಿ ಪೊಲೀಸ್ ನೋಡಲ್ ಅಧಿಕಾರಿ ಸಂಜಯ್ ಜೈನ್ ಮತ್ತು ವೆಚ್ಚಗಳ ನೋಡಲ್ ಅಧಿಕಾರಿ ಮಹೇಶ್ ಭಾಗವತ್ ಅವರ ಜೊತೆಗೂಡಿ, ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರೇವಂತ್ ರೆಡ್ಡಿ ಅವರನ್ನು ಭೇಟಿ ಮಾಡಿ, ಅವರಿಗೆ ಹೂಗುಚ್ಛ ನೀಡಿದ್ದರು.

ಡಿಜಿಪಿಯು 2,290 ಅಭ್ಯರ್ಥಿಗಳ ಪೈಕಿ ಒಬ್ಬರನ್ನು, ಕಣದಲ್ಲಿದ್ದ 16 ರಾಜಕೀಯ ಪಕ್ಷಗಳ ಪೈಕಿ ಒಂದು ಪಕ್ಷದ ತಾರಾ ಪ್ರಚಾರಕರನ್ನು ಭೇಟಿ ಮಾಡಿರುವುದು ತಮ್ಮ ಪರವಾಗಿ ಏನನ್ನೋ ಕೇಳುವ ಉದ್ದೇಶ ಹೊಂದಿದ್ದುದರ ಸ್ಪಷ್ಟ ಸೂಚನೆ ಎಂದು ಮೂಲಗಳು ವಿವರಿಸಿವೆ.



ಛತ್ತೀಸಗಢದಲ್ಲಿ ಅಧಿಕಾರಕ್ಕೆ ಮರಳಿದ ಬಿಜೆಪಿ

• ಪ್ರಜಾವಾಣಿ ವಾರ್ತೆ



ನವದೆಹಲಿ: ಮತದಾನೋತ್ತರ ಸಮೀಕ್ಷೆಗಳ ಅಂದಾಜನ್ನು ಹುಸಿಗೊಳಿಸಿ ಛತ್ತೀಸಗಢದಲ್ಲಿ ಬಿಜೆಪಿ ಅಧಿಕಾರಕ್ಕೆ ಮರಳಿದೆ. 90 ಸಂಖ್ಯಾಬಲದ ರಾಜ್ಯ ವಿಧಾನಸಭೆಯಲ್ಲಿ 54 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಇಲ್ಲಿ ಕಾಂಗ್ರೆಸ್ 35 ಸ್ಥಾನಗಳನ್ನು ಮಾತ್ರ ಗೆದ್ದುಕೊಂಡಿದೆ.

ಛತ್ತೀಸಗಢದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ತೀವ್ರ ಪೈಪೋಟಿ ಇರುತ್ತದೆಯಾದರೂ, ಕಾಂಗ್ರೆಸ್ ಅಧಿಕಾರ ಉಳಿಸಿಕೊಳ್ಳುತ್ತದೆ ಎಂದು ಹಲವು ಮತದಾನೋತ್ತರ ಸಮೀಕ್ಷೆಗಳು ಹೇಳಿದ್ದವು. ಆದರೆ 2000ನೆಯ ಇಸವಿಯಲ್ಲಿ ರಾಜ್ಯ ರಚನೆಯಾದ ನಂತರದಲ್ಲಿ ಇಲ್ಲಿ ಈ ಬಾರಿಯದ್ದು ಬಿಜೆಪಿ ಸಾಧಿಸಿರುವ ಅತಿದೊಡ್ಡ ಗೆಲುವು.

ಚುನಾವಣಾ ಆಯೋಗ ನೀಡಿರುವ ಮಾಹಿತಿ ಪ್ರಕಾರ, ಛತ್ತೀಸಗಢದಲ್ಲಿ ಬಿಜೆಪಿಯು ಶೇಕಡ 46.27ರಷ್ಟು ಮತಗಳನ್ನು ತನ್ನದಾಗಿಸಿಕೊಂಡಿದೆ. ಕಾಂಗ್ರೆಸ್ ಪಕ್ಷಕ್ಕೆ ಶೇ 42.23ರಷ್ಟು ಮತಗಳು ದೊರೆತಿವೆ. ರಾಜ್ಯದ ಉತ್ತರ ಭಾಗ ಮತ್ತು ಕೇಂದ್ರ ಭಾಗದಲ್ಲಿ, ಬಸ್ತಾರ್ ಪ್ರದೇಶದಲ್ಲಿ ಬಿಜೆಪಿ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿದ್ದಾರೆ.

2003ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಛತ್ತೀಸಗಢದಲ್ಲಿ ಶೇ 39.26ರಷ್ಟು ಮತಗಳನ್ನು ಪಡೆದಿತ್ತು, 50 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. 2008 ಮತ್ತು 2018ರಲ್ಲಿ ಕ್ರಮವಾಗಿ 50 ಹಾಗೂ 49 ಸ್ಥಾನಗಳನ್ನು ಪಡೆದಿತ್ತು. ಈ ರಾಜ್ಯದಲ್ಲಿ ಬಿಜೆಪಿಯು ಸತತವಾಗಿ 15 ವರ್ಷ ಆಡಳಿತ ನಡೆಸಿತ್ತು.

2018ರ ಚುನಾವಣೆಯಲ್ಲಿ ಬಿಜೆಪಿ ಭಾರಿ ಸೋಲು ಕಂಡಿತ್ತು. ಆಗ 15 ಸ್ಥಾನಗಳನ್ನು ಮಾತ್ರ ಗೆದ್ದುಕೊಂಡಿತ್ತು. 2003ರಲ್ಲಿ ಕಾಂಗ್ರೆಸ್ ಪಕ್ಷವು 37 ಸ್ಥಾನಗಳನ್ನು ಪಡೆದುಕೊಂಡಿತ್ತು. 2008ರಲ್ಲಿ 38 ಸ್ಥಾನಗಳನ್ನು ಹಾಗೂ 2013ರಲ್ಲಿ 39 ಸ್ಥಾನಗಳನ್ನು ಗೆದ್ದುಕೊಂಡಿತ್ತು. 2018ರಲ್ಲಿ ಪಕ್ಷವು 68 ಸ್ಥಾನಗಳನ್ನು ಗೆದ್ದಿತ್ತು.

ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ತಮ್ಮ ಪಾಟನ್ ಕ್ಷೇತ್ರದಲ್ಲಿ ಬಿಜೆಪಿಯ ಲೋಕಸಭಾ ಸದಸ್ಯ ವಿಜಯ್ ಬಘೇಲ್ ವಿರುದ್ಧ ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳ ಪೈಕಿ ಪ್ರಮುಖರಾದ ಉಪ ಮುಖ್ಯಮಂತ್ರಿ ಟಿ.ಎಸ್. ಸಿಂಹದೇವ್ ಮತ್ತು ಛತ್ತೀಸಗಢ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ದೀಪಕ್ ಬೈಜ್ ಅವರು ಸೋಲುಂಡಿದ್ದಾರೆ. ಜನತಾ ಕಾಂಗ್ರೆಸ್‌ನ ಅಮಿತ್ ಅಜಿತ್ ಜೋಗಿ ಅವರು ಕೂಡ ಸೋಲು ಕಂಡಿದ್ದಾರೆ.

ಬಿಜೆಪಿಯ ಪ್ರಮುಖ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ ಅವರು ರಾಜನಂದಗಾಂವ್ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಗಿರೀಶ್ ದೇವಾಂಗನ್ ಅವರನ್ನು 45,084 ಮತಗಳಿಂದ ಸೋಲಿಸಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಕುಮಾರ್ ಸಾವ್ ಅವರು ಲೋರಮಿ ಕ್ಷೇತ್ರದಲ್ಲಿ ಗೆದ್ದಿದ್ದಾರೆ.

ಬಿಜೆಪಿಯ ಹಿರಿಯ ನಾಯಕ ಧರ್ಮಲಾಲ್ ಕೌಶಿಕ್ ಅವರು ಬಿಲ್ಹಾ ಕ್ಷೇತ್ರದಿಂದ ಮತ್ತು ಮಾಜಿ ಐಎಎಸ್ ಅಧಿಕಾರಿ ಒ.ಪಿ.ಚೌಧರಿ ಅವರು ರಾಯಗಢ ಕ್ಷೇತ್ರದಿಂದ ಗೆದ್ದಿದ್ದಾರೆ.

ಚುನಾವಣಾ ಪ್ರಚಾರ ಅಭಿಯಾನದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಎಂಟು ಬಾರಿ ಭೇಟಿ ಕೊಟ್ಟಿದ್ದರು, ಹಲವು ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡಿದ್ದರು. ಕೇಂದ್ರದ ಕೆಲವು ಸಚಿವರು ಹಾಗೂ ಬಿಜೆಪಿಯ ಮುಖ್ಯಮಂತ್ರಿಗಳು ಹಲವು ವಾರ ರಾಜ್ಯದಲ್ಲಿದ್ದು, ಪ್ರಚಾರದಲ್ಲಿ ಭಾಗಿಯಾಗಿದ್ದರು.

'ಮೋದಿ ಕಿ ಗ್ಯಾರಂಟಿ-2023' ಹೆಸರಿನಲ್ಲಿ ಬಿಜೆಪಿ ಮುಂದಿಟ್ಟಿದ್ದ ಭರವಸೆಗಳು, ಬುಡಕಟ್ಟು ಜನರ ಪ್ರಾಬಲ್ಯವಿರುವ ಈ ರಾಜ್ಯದಲ್ಲಿ ಪಕ್ಷದ ಪರವಾಗಿ ಕೆಲಸ ಮಾಡಿದೆ. ಬಿಜೆಪಿ ವಿರುದ್ಧ ಆಡಳಿತ ವಿರೋಧ ಅಲೆಯಿದ್ದ ಕಾರಣ ಕಾಂಗ್ರೆಸ್, 2018ರ ಚುನಾವಣೆಯಲ್ಲಿ ಗೆದ್ದು ಇಲ್ಲಿ ಅಧಿಕಾರಕ್ಕೇರಿತ್ತು. ಉಚಿತ ಕೊಡುಗೆಗಳ ಭರವಸೆಗಳೂ ಅಂದು ಪಕ್ಷದ ಗೆಲುವಿಗೆ ಕಾರಣವಾಗಿದ್ದವು.

ಆದರೆ ಬಿಜೆಪಿ ಈ ಬಾರಿ 'ಮೋದಿ ಗ್ಯಾರಂಟಿ' ಹೆಸರಿನಲ್ಲಿ ಹಲವು ಜನಪ್ರಿಯ ಕೊಡುಗೆಗಳ ಭರವಸೆ ನೀಡಿತು. ಪ್ರತಿ ಎಕರೆಗೆ 21 ಕ್ವಿಂಟಲ್ ಭತ್ತವನ್ನು ಕ್ವಿಂಟಲ್‌ಗೆ ₹3,100ರಂತೆ ಖರೀದಿಸುವುದು, ಮದುವೆ ಆಗಿರುವ ಮಹಿಳೆಯರಿಗೆ ವಾರ್ಷಿಕ ₹12 ಸಾವಿರ ನೆರವು ನೀಡುವುದು ಕೂಡ ಬಿಜೆಪಿ ನೀಡಿದ ಭರವಸೆಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದವು.

ಛತ್ತೀಸಗಢ ವಿಧಾನಸಭೆಯ 90 ಸ್ಥಾನಗಳಲ್ಲಿ 29 ಸ್ಥಾನಗಳು ಪರಿಶಿಷ್ಟ ವರ್ಗ ಹಾಗೂ 10 ಸ್ಥಾನಗಳು ಪರಿಶಿಷ್ಟ ಜಾತಿಗೆ ಮೀಸಲಾಗಿವೆ.


ವಿಜಯೋತ್ಸವದ ಕ್ಷಣ...



ಜಗದಾಲ್ಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಿರಣ್‌ಸಿಂಹ ದೇವ್ ಅವರು ತಮ್ಮ ವಿಜಯದ ಸಂಭ್ರಮವನ್ನು ಪಕ್ಷದ ಕಾರ್ಯಕರ್ತರು, ಮುಖಂಡರ ಜೊತೆ ಹಂಚಿಕೊಂಡರು. –ಪಿಟಿಐ ಚಿತ್ರ

> ಚುನಾವಣಾ ಪ್ರಚಾರ ಅಭಿಯಾನದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಎಂಟು ಬಾರಿ ಭೇಟಿ ಕೊಟ್ಟಿದ್ದರು, ಹಲವು ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡಿದ್ದರು. ಕೇಂದ್ರದ ಕೆಲವು ಸಚಿವರು ಹಾಗೂ ಬಿಜೆಪಿಯ ಮುಖ್ಯಮಂತ್ರಿಗಳು ಹಲವು ವಾರ ರಾಜ್ಯದಲ್ಲಿದ್ದು, ಪ್ರಚಾರದಲ್ಲಿ ಭಾಗಿಯಾಗಿದ್ದರು.

ಶೇಕಡವಾರು ಮತ ಪ್ರಮಾಣ



- ಪಾಟನ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರಿಗೆ ಬಿಜೆಪಿಯ ವಿಜಯ್ ಬಘೇಲ್ ವಿರುದ್ಧ 19,723 ಮತಗಳ ಅಂತರದ ಗೆಲುವು
- ರಾಜನಂದಗಾವ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಗಿರೀಶ್ ದೇವಂಗನ್ ವಿರುದ್ಧ ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ ಅವರಿಗೆ 45,084 ಮತಗಳ ಅಂತರದಲ್ಲಿ ಜಯ
- ಇವಿಎಂಗಳಲ್ಲಿ ಏನೋ ಸಂಭವಿಸಿದ್ದರಿಂದಲೇ ಛತ್ತೀಸಗಢ ಸೇರಿದಂತೆ ಮೂರು ರಾಜ್ಯಗಳಲ್ಲಿ ಪಕ್ಷ ಸೋತಿದೆ ಎಂದಿದ್ದಾರೆ ಕಾಂಗ್ರೆಸ್ ಮುಖಂಡ ಉದಿತ್ ರಾಜ್



> ಕಾಂಗ್ರೆಸ್ ಗ್ಯಾರಂಟಿ ಮತ್ತು ಭೂಪೇಶ್ ಬಘೇಲ್ ಅವರ ಭರವಸೆಗಳ ಮೇಲೆ ವಿಶ್ವಾಸ ಇರಿಸದೇ ಜನರು ಪ್ರಧಾನಿ ನರೇಂದ್ರ ಮೋದಿ ಅವರ ಕೆಲಸಗಳ ಮೇಲೆ ಭರವಸೆ ಇರಿಸಿರುವುದನ್ನು ಈ ಫಲಿತಾಂಶ ಬಿಂಬಿಸುತ್ತದೆ
> **ರಮಣ್ ಸಿಂಗ್,** ಬಿಜೆಪಿ ಹಿರಿಯ ನಾಯಕ



> ಕಾಂಗ್ರೆಸ್‌ನಲ್ಲಿರುವ ಒಳಜಗಳ, ಅಧಿಕಾರದ ದಾಹ ಮತ್ತು ಕೆಲ ನಾಯಕರು ಬಿಜೆಪಿಯ ಗುಪ್ತ ಏಜೆಂಟರಾಗಿ ಕೆಲಸ ಮಾಡುತ್ತಿರುವುದೇ ಛತ್ತೀಸಗಢ ಮತ್ತು ಇತರೆಡೆ ಕಾಂಗ್ರೆಸ್ ಸೋಲಲು ಕಾರಣ
> **ಪಿಣರಾಯಿ ವಿಜಯನ್,** ಕೇರಳ ಮುಖ್ಯಮಂತ್ರಿ



> 20 ವರ್ಷಗಳ ಹಿಂದೆಯೂ ಕಾಂಗ್ರೆಸ್ ಇಂಥದ್ದೇ ಪರಿಸ್ಥಿತಿಯನ್ನು ಎದುರಿಸಿತ್ತು. ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದ ಕಾಂಗ್ರೆಸ್ ಲೋಕಸಭೆ ಚುನಾವಣೆಯಲ್ಲಿ ಬಹುಮತ ಪಡೆದು ಅಧಿಕಾರಕ್ಕೇರಿತು
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)



> ಜನರು ಎಲ್ಲವನ್ನೂ ಗಮನಿಸುತ್ತಾರೆ. ಛತ್ತೀಸಗಢ ಸರ್ಕಾರದ ಹಗರಣಗಳಲ್ಲಿ ಜಾರ್ಖಂಡ್‌ನ ಹೇಮಂತ್ ಸೋರೆನ್ ಸರ್ಕಾರದ ಪಾಲು ಇದೆ. ಬಘೇಲ್ ಸರ್ಕಾರಕ್ಕಾದ ಗತಿಯೇ ಸೋರೆನ್ ಸರ್ಕಾರಕ್ಕೂ ಆಗಲಿದೆ
> **ದೀಪಕ್ ಪ್ರಕಾಶ್,** ರಾಜ್ಯಸಭಾ ಸಂಸದ, ಬಿಜೆಪಿ

ಇತಿಹಾಸ ನಿರ್ಮಿಸುವ ಅವಕಾಶ ಕೈಚೆಲ್ಲಿದ ಬಘೇಲ್

ನವದೆಹಲಿ: ಛತ್ತೀಸಗಢದಲ್ಲಿ ಇತಿಹಾಸ ನಿರ್ಮಿಸುವ ಅವಕಾಶವನ್ನು ಭೂಪೇಶ್ ಬಘೇಲ್ ಅವರು ಕೈಚೆಲ್ಲಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್‌ಅನ್ನು ಅವರು ಗೆಲುವಿನತ್ತ ಮುನ್ನಡೆಸಿದ್ದರೆ, ಸತತ ಮತ್ತೊಂದು ಅವಧಿಗೆ ಅಧಿಕಾರಕ್ಕೆ ಮರಳಿದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುತ್ತಿದ್ದರು.

ಕಾಂಗ್ರೆಸ್‌ನ ಮುಖ್ಯಮಂತ್ರಿ ಅಭ್ಯರ್ಥಿಗಳು ಎಂದೇ ಬಿಂಬಿತರಾಗಿದ್ದ ಹಲವು ಪ್ರಮುಖ ನಾಯಕರು ಚುನಾವಣೆಯಲ್ಲಿ ಸೋತಿದ್ದಾರೆ. ಟಿ.ಎಸ್. ಸಿಂಹದೇವ, ತಮ್ರಾಧ್ವಜ್ ಸಾಹು ಮತ್ತು ದೀಪಕ್ ಬಾಜಿ ಚುನಾವಣೆ ಸೋತಿದ್ದಾರೆ. ಪಕ್ಷದ ಹಿರಿಯ ನಾಯಕ ಚಂದ್ರನ್‌ದಾಸ್ ಮಹಾಂತ್ ಗೆಲುವು ಸಾಧಿಸಿದ್ದಾರೆ.

'ಮೋದಿ ಗ್ಯಾರಂಟಿಗೆ ಬೆಂಬಲ'

ನವದೆಹಲಿ (ಪಿಟಿಐ): ಛತ್ತೀಸಗಢದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಬೆಂಬಲಿಸಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಹೇಳಿದ್ದಾರೆ.

ಕಾಂಗ್ರೆಸ್‌ನ ಸುಳ್ಳು ಭರವಸೆಗಳನ್ನು ಜನರು ನಿರಾಕರಿಸಿದ್ದಾರೆ ಮತ್ತು ಗ್ಯಾರಂಟಿಗಳನ್ನು ಈಡೇರಿಸುವ 'ಮೋದಿ ಗ್ಯಾರಂಟಿ'ಯನ್ನು ಅವರು ಸ್ವೀಕರಿಸಿದ್ದಾರೆ ಎಂದು ಅವರು ರಾಜ್ಯದಲ್ಲಿ ಬಿಜೆಪಿಯ ಯಶಸ್ಸನ್ನು ವ್ಯಾಖ್ಯಾನಿಸಿದ್ದಾರೆ.


'ಮೋದಿ ಕಿ ಗ್ಯಾರಂಟಿ- 2023' ಹೆಸರಿನ ಛತ್ತೀಸಗಢ ಬಿಜೆಪಿ ಪ್ರಣಾಳಿಕೆಯಲ್ಲಿ ₹500ಕ್ಕೆ ಅಡುಗೆ ಅನಿಲ ಸಿಲಿಂಡರ್, ಒಂದು ಲಕ್ಷ ಉದ್ಯೋಗಗಳ ಸೃಷ್ಟಿ ಮತ್ತು ವಿವಾಹಿತ ಮಹಿಳೆಯರಿಗೆ ವಾರ್ಷಿಕ ₹ 12 ಸಾವಿರ ಆರ್ಥಿಕ ನೆರವು, ಭೂಮಿರಹಿತ ಕೃಷಿ ಕಾರ್ಮಿಕರಿಗೆ ವಾರ್ಷಿಕ ₹10 ಸಾವಿರ ನೆರವು ನೀಡುವ ಭರವಸೆಯನ್ನು ನೀಡಿತ್ತು.


ಐದು ರ್‍ಯಾಲಿ ನಡೆಸಿದ್ದ ಮೋದಿ

ರಾಯಪುರ (ಪಿಟಿಐ): ವಿಧಾನಸಭೆ ಚುನಾವಣಾ ದಿನಾಂಕ ಘೋಷಣೆಯಾದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಛತ್ತೀಸಗಢದಲ್ಲಿ ಐದು ರ್‍ಯಾಲಿಗಳನ್ನು ನಡೆಸಿದ್ದರು.

ಕಾಂಕೆರ್, ದುರ್ಗ್, ಸೂರಜ್‌ಪುರ್, ಮುಂಗೆಲಿ ಮತ್ತು ಮಹಾಸಮುಂದ್ ಜಿಲ್ಲೆಗಳಲ್ಲಿ ಅವರು ರ್‍ಯಾಲಿ ನಡೆಸಿದ್ದರು. 'ಛತ್ತೀಸಗಢವನ್ನು ರಚಿಸಿದ್ದೇ ಬಿಜೆಪಿ, ರಾಜ್ಯವನ್ನು ಸಲಹುವುದೂ ಬಿಜೆಪಿಯೇ' ಎಂಬ ಘೋಷಣೆಯನ್ನು ಅವರು ರ್‍ಯಾಲಿಗಳಲ್ಲಿ ಮೊಳಗಿಸಿದ್ದರು.

ಮಹಾದೇವ್ ಬೆಟ್ಟಿಂಗ್ ಆ್ಯಪ್ ಹಗರಣಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದ್ದರು. ಕಾಂಗ್ರೆಸ್ ಓಲೈಕೆ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದ್ದ ಅವರು, ಬಿಜೆಪಿಯ ಗ್ಯಾರಂಟಿಗಳನ್ನು 'ಮೋದಿ ಗ್ಯಾರಂಟಿ' ಎಂದು ಕರೆದಿದ್ದರು.





ಸುಭಾಷಿತ

ಹಳೆಯ ನಕ್ಷೆಯನ್ನು ಹಿಡಿದು ನೀವು ಹೊಸ ಪ್ರಪಂಚವನ್ನು ಅನ್ವೇಷಿಸಲು ಸಾಧ್ಯವಿಲ್ಲ.

–ಆಲ್ಬರ್ಟ್ ಐನ್‌ಸ್ಟೀನ್

ಬಿಜೆಪಿಗೆ ಭರ್ಜರಿ ಗೆಲುವಿನ ಗರಿ ಕಾಂಗ್ರೆಸ್ ತೆಲಂಗಾಣಕ್ಕೆ ಸೀಮಿತ

ಲೋಕಸಭೆಗೆ ಚುನಾವಣೆ ನಡೆಯುವ ಕೆಲವೇ ತಿಂಗಳ ಮೊದಲು ಐದು ರಾಜ್ಯಗಳ ವಿಧಾನಸಭೆಗೆ ಚುನಾವಣೆ ನಡೆದಿದೆ. ಈ ಪೈಕಿ ನಾಲ್ಕು ಪ್ರಮುಖ ರಾಜ್ಯಗಳ ಫಲಿತಾಂಶವು ರಾಷ್ಟ್ರ ರಾಜಕಾರಣವು ಯಾವ ದಿಕ್ಕಿನತ್ತ ಸಾಗಲಿದೆ ಎಂಬುದರ ಸುಳಿವು ನೀಡಿದೆ. ಹಿಂದಿ ಭಾಷಿಕ ಪ್ರದೇಶದ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಬಿಜೆಪಿ ಭಾರಿ ಅಂತರದಿಂದ ಗೆಲುವು ದಾಖಲಿಸಿದೆ. ಟಿಕೆಟ್ ಹಂಚಿಕೆ, ಚುನಾವಣಾ ಪ್ರಚಾರ ನಿರ್ವಹಣೆ ಸೇರಿ ಚುನಾವಣೆಯ ಎಲ್ಲ ವಿಚಾರಗಳಲ್ಲಿಯೂ ತನಗೆ ಸರಿಸಾಟಿ ಇಲ್ಲ ಎಂಬುದನ್ನು ಬಿಜೆಪಿ ಸಾಬೀತು ಮಾಡಿದೆ. ರಾಜ್ಯ ಮಟ್ಟದಲ್ಲಿ ಭಾರಿ ಜನಪ್ರಿಯತೆ ಹೊಂದಿರುವ ನಾಯಕರಿದ್ದಾಗಲೂ ಪಕ್ಷವು ಅವರನ್ನು ಅತಿಯಾಗಿ ನೆಚ್ಚಿಕೊಳ್ಳಲಿಲ್ಲ. ಬಿಜೆಪಿ ವರಿಷ್ಠರು ಎಲ್ಲವನ್ನೂ ತಮ್ಮ ಮುಷ್ಟಿಯಲ್ಲಿಯೇ ಇರಿಸಿಕೊಂಡು ಚುನಾವಣೆಯನ್ನು ನಿರ್ವಹಿಸಿ ಗೆಲುವು ದೊರಕಿಸಿಕೊಟ್ಟಿದ್ದಾರೆ. ನಾಲ್ಕು ಅವಧಿಗೆ ಮುಖ್ಯಮಂತ್ರಿಯಾಗಿದ್ದ ಶಿವರಾಜ್ ಸಿಂಗ್ ಚೌಹಾಣ್, ರಾಜಸ್ಥಾನದಲ್ಲಿ ದೊಡ್ಡ ವರ್ಚಸ್ಸು ಹೊಂದಿರುವ ವಸುಂಧರಾ ರಾಜೇ, ಛತ್ತೀಸಗಢದ ರಮಣ್ ಸಿಂಗ್ ಅವರನ್ನು ಪಕ್ಷವು ಪ್ರಚಾರದ ಮುಂಚೂಣಿಗೆ ತರಲಿಲ್ಲ. ಕೇಂದ್ರದ ಸಚಿವರು ಮತ್ತು ಸಂಸದರನ್ನು ಕಣಕ್ಕೆ ಇಳಿಸುವ ಮೂಲಕ ಗೆಲ್ಲುವ ಯಾವ ಅವಕಾಶವನ್ನೂ ಬಿಟ್ಟುಕೊಡಬಾರದು ಎಂಬ ಕಾರ್ಯತಂತ್ರವನ್ನು ಗಟ್ಟಿಯಾಗಿ ಹಿಡಿದುಕೊಂಡಿತು. ಮಧ್ಯಪ್ರದೇಶದಲ್ಲಿ ಹಲವು ಹೊಸ ಮುಖಗಳಿಗೆ ಟಿಕೆಟ್ ನೀಡುವ ಮೂಲಕ ಆಡಳಿತ ವಿರೋಧಿ ಅಲೆ ಬಾಧಿಸದಂತೆ ನೋಡಿಕೊಂಡಿತು. ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಜೋಡಿಯ ಚುನಾವಣೆ ಗೆಲ್ಲಿಸಿಕೊಡುವ ಸಾಮರ್ಥ್ಯಕ್ಕೆ ಕಿಂಚಿತ್ತೂ ಚ್ಯುತಿ ಬಂದಿಲ್ಲ ಎಂಬುದನ್ನು ಫಲಿತಾಂಶವು ಸ್ಪಷ್ಟಪಡಿಸಿದೆ. ಮತಗಟ್ಟೆ ಮಟ್ಟದವರೆಗಿನ ವ್ಯವಸ್ಥಿತವಾದ ಸಂಘಟನೆಯು ಬಿಜೆಪಿಯ ದೊಡ್ಡ ಶಕ್ತಿ ಎಂಬುದು ಮತ್ತೆ ಮತ್ತೆ ನಿಚ್ಚಳವಾಗುತ್ತಿದೆ.



ರಾಜಕೀಯ ಪಕ್ಷಗಳು ಮತ್ತು ಅವುಗಳ ಆಳ್ವಿಕೆಯನ್ನು ಮತದಾರ ನಿರಂತರವಾಗಿ ವಿಮರ್ಶೆಗೆ ಒಳಪಡಿಸುತ್ತಲೇ ಇದ್ದಾನೆ ಎಂಬುದನ್ನು ಈ ಚುನಾವಣೆಗಳ ಫಲಿತಾಂಶ ದೃಢಪಡಿಸಿದೆ

ಈ ಫಲಿತಾಂಶದಿಂದ ಬಿಜೆಪಿಯೇತರ ಪಕ್ಷಗಳಿಗೆ ಹಲವು ಪಾಠಗಳನ್ನು ಮತದಾರ ಕಲಿಸಿದ್ದಾನೆ. ಕಾಂಗ್ರೆಸ್ ಪಕ್ಷವು ಹೀನಾಯವಾಗಿ ಸೋತಿದೆ. ಈ ಮೂಲಕ, ಉತ್ತರ ಭಾರತದಲ್ಲಿ ಪುಟ್ಟ ರಾಜ್ಯ ಹಿಮಾಚಲ ಪ್ರದೇಶವನ್ನು ಬಿಟ್ಟರೆ ಬೇರೆಲ್ಲೂ ಕಾಂಗ್ರೆಸ್ ನೇತೃತ್ವದ ಸರ್ಕಾರ ಇಲ್ಲದಂತಾಗಿದೆ. ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಗೆದ್ದೇ ಗೆಲ್ಲುತ್ತೇವೆ ಎಂಬ ಅತಿ ಆತ್ಮವಿಶ್ವಾಸವು ಕಾಂಗ್ರೆಸ್‌ಗೆ ಮುಳುವಾಗಿದೆ. ‘ಗ್ಯಾರಂಟಿ’ ಭರವಸೆಗಳ ಮೂಲಕ ಕರ್ನಾಟಕದಲ್ಲಿ ಗೆಲುವು ಕಂಡಿರುವ ಕಾಂಗ್ರೆಸ್, ಅದೇ ಕಾರ್ಯತಂತ್ರವನ್ನು ಇತರ ರಾಜ್ಯಗಳಿಗೂ ವಿಸ್ತರಿಸಿತು. ಉಚಿತ ಕೊಡುಗೆಗಳನ್ನು ಖಂಡತುಂಡವಾಗಿ ವಿರೋಧಿಸುತ್ತಿದ್ದ ಬಿಜೆಪಿಯು ಕಾಂಗ್ರೆಸ್ ‘ಗ್ಯಾರಂಟಿ’ಗಳಿಗೆ ಬದಲಾಗಿ ‘ಮೋದಿ ಗ್ಯಾರಂಟಿ’ ಎಂಬ ಅಸ್ತ್ರ ಹೂಡಿತು. ಮತದಾರನು ಕಾಂಗ್ರೆಸ್ ‘ಗ್ಯಾರಂಟಿ’ ಬದಲಿಗೆ ‘ಮೋದಿ ಗ್ಯಾರಂಟಿ’ ಮೇಲೆ ವಿಶ್ವಾಸ ಇರಿಸಿದ್ದನ್ನು ಫಲಿತಾಂಶವು ತೋರಿಸಿಕೊಟ್ಟಿದೆ. ಹಿಂದಿ ಭಾಷಿಕ ಪ್ರದೇಶದ ಮೂರು ರಾಜ್ಯಗಳ ಕಾಂಗ್ರೆಸ್ ನಾಯಕರ ನಡುವೆ ಇದ್ದ ಒಳಜಗಳಗಳನ್ನು ಆ ಕೂಡಲೇ ಬಗೆಹರಿಸದೆ, ಕಾಂಗ್ರೆಸ್ ನಾಯಕತ್ವವು ತೋರಿದ ನಿರಂತರ ಅಸಡ್ಡೆಯು ಆ ಪಕ್ಷಕ್ಕೆ ದುಬಾರಿಯಾಗಿದೆ. ಚುನಾವಣೆಗೆ ಕೆಲಕಾಲ ಮೊದಲು ಒಳಜಗಳಕ್ಕೆ ತೇಪೆ ಹಚ್ಚುವ ಕೆಲಸ ನಡೆದರೂ ಅದು ತಳಹಂತದವರೆಗೆ ಇಳಿಯಲಿಲ್ಲ. ರಾಜಕೀಯವು ನಿರಂತರವಾಗಿ ಚಲನಶೀಲವಾಗಿಯೂ ಸೃಜನಶೀಲವಾಗಿಯೂ ಇರಬೇಕು ಎಂಬುದನ್ನು ಮತದಾರ ಬಯಸುತ್ತಾನೆ. ಆದರೆ, ಕಾಂಗ್ರೆಸ್ ಪಕ್ಷವು ಅವೇ ಹಳೆಯ, ವರ್ಚಸ್ಸು ಕಳೆದುಕೊಂಡ ಮುಖಗಳಿಗೇ ಮಣೆ ಹಾಕುವುದನ್ನು ಮುಂದುವರಿಸಿತು. ಯುವ ಚೈತನ್ಯ ಆ ಪಕ್ಷದಲ್ಲಿ ಕಾಣಿಸಲಿಲ್ಲ. ತೆಲಂಗಾಣದಲ್ಲಿ ಸಿಕ್ಕ ಗೆಲುವು ಮಾತ್ರ ಆ ಪಕ್ಷಕ್ಕೆ ಇರುವ ಏಕೈಕ ಸಮಾಧಾನ. ಆಂಧ್ರಪ್ರದೇಶವನ್ನು ವಿಭಜಿಸಿ ತೆಲಂಗಾಣ ರಾಜ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರ ಭಾರತ ರಾಷ್ಟ್ರ ಸಮಿತಿಯು ತೆಲಂಗಾಣವನ್ನು ಕಳೆದುಕೊಂಡಿದೆ. ಪ್ರತ್ಯೇಕ ರಾಜ್ಯ ಹೋರಾಟದ ಕೆಚ್ಚು ಮತ್ತು ಭಾವನೆಗಳ ಆಧಾರದಲ್ಲಿಯೇ ಎರಡು ಅವಧಿಗೆ ಅವರ ಪಕ್ಷವು ಗೆದ್ದಿತ್ತು. ಆದರೆ, ಹೆಚ್ಚುತ್ತಲೇ ಇದ್ದ ನಿರುದ್ಯೋಗಕ್ಕೆ ಪರಿಹಾರ ಕಂಡುಕೊಳ್ಳಲು ಕೆಸಿಆರ್ ಯತ್ನಿಸಲಿಲ್ಲ. ಆಡಳಿತ ಮತ್ತು ಪಕ್ಷದ ಮೇಲೆ ಕೆಸಿಆರ್ ಕುಟುಂಬದ ಬಿಗಿಹಿಡಿತ, ಚುನಾವಣೆ ಸಮೀಪಿಸಿದಾಗ ಪಕ್ಷದ ಹೆಸರು ಬದಲಾಯಿಸಿದ್ದು ಆ ಪಕ್ಷದ ಸೋಲಿಗೆ ಕಾರಣವಾದ ಕೆಲವು ಅಂಶಗಳಾಗಿರಬಹುದು. ಮಧ್ಯಪ್ರದೇಶವೊಂದನ್ನು ಬಿಟ್ಟು ಬೇರೆಲ್ಲಿಯೂ ಆಡಳಿತ ಪಕ್ಷ ಮರಳಿ ಅಧಿಕಾರ ಹಿಡಿದಿಲ್ಲ. ರಾಜಕೀಯ ಪಕ್ಷಗಳು ಮತ್ತು ಅವುಗಳ ಆಳ್ವಿಕೆಯನ್ನು ಮತದಾರ ನಿರಂತರವಾಗಿ ವಿಮರ್ಶೆಗೆ ಒಳಪಡಿಸುತ್ತಲೇ ಇದ್ದಾನೆ ಎಂಬುದನ್ನು ಇದು ದೃಢಪಡಿಸಿದೆ. ಪ್ರಜಾಪ್ರಭುತ್ವ ಹೆಚ್ಚು ಹೆಚ್ಚು ಪ್ರಬುದ್ಧವಾಗಲು ಮತದಾರನ ಈ ಎಚ್ಚರಿಕೆ ಅತ್ಯಂತ ಅಗತ್ಯ.

ದಿನದ ಟ್ವೀಟ್

ಕಟ್ಟುನಿಟ್ಟಿನ ಸಂದೇಶ



ತೆಲಂಗಾಣದಲ್ಲಿ ಮತ ಎಣಿಕೆ ಪ್ರಕ್ರಿಯೆ ನಡೆಯುತ್ತಿದ್ದಾಗಲೇ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ರೇವಂತ್ ರೆಡ್ಡಿ ಅವರನ್ನು ಭೇಟಿಯಾದ ಡಿಜಿಪಿ ಅಂಜನಿಕುಮಾರ್ ಅವರನ್ನು ಅಭೂತಪೂರ್ವ ಬೆಳವಣಿಗೆಯೊಂದರಲ್ಲಿ ಚುನಾವಣಾ ಆಯೋಗ ಅಮಾನತು ಮಾಡಿದೆ. ಈ ಕ್ರಮ, ಚುನಾವಣಾ ಪ್ರಕ್ರಿಯೆಯಲ್ಲಿ ಪಕ್ಷಪಾತರಹಿತ ನಡೆ ಕಾಯ್ದುಕೊಳ್ಳಬೇಕು ಎಂಬ ಕಟ್ಟುನಿಟ್ಟಿನ ಸಂದೇಶವನ್ನು ಅಧಿಕಾರಿಶಾಹಿಗೆ ನೀಡಿದೆ.

ಭಾರ್ತಿ ಜೈನ್, ಪತ್ರಕರ್ತೆ

ಕಿಡಿನುಡಿ



ವಿರೋಧ ಪಕ್ಷಗಳನ್ನು ಒಗ್ಗೂಡಿಸಲು ವಿಫಲವಾದ ಕಾರಣ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋತಿದೆ. ಕೋಮುವಾದದ ವಿರುದ್ಧ ದೃಢವಾದ ನಿಲುವು ಪ್ರಕಟಿಸುವಲ್ಲಿ ಅದು ವಿಫಲವಾಗಿದೆ. ಬಿಜೆಪಿ ವಿರುದ್ಧ ಏಕಾಂಗಿಯಾಗಿ ಹೋರಾಡಲು ಕಾಂಗ್ರೆಸ್‌ಗೆ ಸಾಧ್ಯವಿಲ್ಲ ಎಂಬುದನ್ನು ಅದರ ಮುಖಂಡರು ಅರಿತುಕೊಳ್ಳಬೇಕು.

ಪಿಣರಾಯಿ ವಿಜಯನ್, ಕೇರಳ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 4-12-1998

• ಶಾಂತಿಯುತ ದತ್ತಜಯಂತಿ ಆಚರಣೆ

ಚಿಕ್ಕಮಗಳೂರು, ಡಿ. 3– ಒಂದೆರಡು ಸಣ್ಣಪುಟ್ಟ ಅಹಿತಕರ ಘಟನೆಗಳನ್ನು ಬಿಟ್ಟರೆ, ಇಂದು ಬಾಬಾಬುಡನ್‌ಗಿರಿಯಲ್ಲಿ ದತ್ತ ಜಯಂತಿ ಉತ್ಸವ ಶಾಂತಿಯುತವಾಗಿಯೇ ನಡೆಯಿತು.

ನಾಲ್ಕು ರಥಗಳ ಸಹಿತ ಸಾವಿರಾರು ಸಂಖ್ಯೆಯಲ್ಲಿ ಯುವಕರು, ಭಕ್ತರು ಬೆಳಿಗ್ಗೆಯಿಂದಲೇ ದತ್ತಪೀಠಕ್ಕೆ ಆಗಮಿಸಿದರು. ಪೊಲೀಸರ ಬಿಗಿ ಪಹರೆಗಳ ಮಧ್ಯೆಯೂ ನೂಕುನುಗ್ಗಲು, ಘೋಷಣೆ, ಜಯಕಾರಗಳು ಮೊಳಗಿದರೂ, ಹಿಂದೂ ಸಂಘಟನೆಗಳ ಪ್ರಮುಖರ ಮಾರ್ಗದರ್ಶನದಂತೆ ಉತ್ಸವ ಸಾಂಗವಾಗಿ ನೆರವೇರಿತು.

ಹೋಟೆಲ್ ಒಂದಕ್ಕೆ ಕಲ್ಲೆಸೆದು ಬಾಗಿಲು ಮುಚ್ಚಿಸಿದ, ಪೊಲೀಸರ ತಪಾಸಣೆ ವೇಳೆ ಒರಟಾಗಿ ವರ್ತಿಸಿದ ಹಾಗೂ ವಿಗ್ರಹ ಸ್ಥಾಪಿಸಲು ಯತ್ನಿಸಿದ ಘಟನೆಗಳನ್ನು ಬಿಟ್ಟರೆ ಪರಿಸ್ಥಿತಿ ಬಹುತೇಕ ಶಾಂತವಾಗಿತ್ತು.

• ಕಾಶ್ಮೀರ: ಮಧ್ಯಸ್ಥಿಕೆಗೆ ಅಮೆರಿಕ ನಕಾರ

ವಾಷಿಂಗ್ಟನ್, ಡಿ. 3 (ಯುಎನ್‌ಐ)– ಕಾಶ್ಮೀರದ ವಿಚಾರದಲ್ಲಿ ಅಮೆರಿಕ ಮಧ್ಯಸ್ಥಿಕೆ ವಹಿಸಬೇಕೆಂಬ ಪಾಕಿಸ್ತಾನ ಪ್ರಧಾನಿಯವರ ಬೇಡಿಕೆಯನ್ನು ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರು ಇಂದು ತಿರಸ್ಕರಿಸಿದರು.

ಭಾರತದೊಂದಿಗೆ ಮಾತುಕತೆಯ ಮೂಲಕವೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತೆ ಅವರು ಸಲಹೆ ನೀಡಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 4-12-1973

• ಕನ್ನಡ ಸಾಹಿತ್ಯದ ಬಗ್ಗೆ ಪೂರ್ಣ ಗೌರವ: ಬಸವಲಿಂಗಪ್ಪ ಸ್ಪಷ್ಟನೆ

ಬೆಂಗಳೂರು, ಡಿ. 3– ತಾವು ಕನ್ನಡ ಭಾಷೆಯ ವಿರುದ್ಧವಾಗಿ ಎಂದೂ ಮಾತನಾಡಲಿಲ್ಲ ಎಂದು ಪೌರಾಡಳಿತ ಸಚಿವ ಬಿ. ಬಸವಲಿಂಗಪ್ಪ ಅವರು ಇಂದು ಇಲ್ಲಿ ಸ್ಪಷ್ಟೀಕರಣ ನೀಡಿ, ತಮ್ಮ ಹೆಸರಿನಲ್ಲಿ ವಿದ್ಯಾರ್ಥಿಗಳು ನಡೆಸುತ್ತಿರುವ ಚಳವಳಿಯನ್ನು ನಿಲ್ಲಿಸುವಂತೆ ಕೋರಿದ್ದಾರೆ.

ಅವರು ರಾತ್ರಿ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯ ಪೂರ್ಣ ಪಾಠ ಈ ರೀತಿ ಇದೆ.

‘ಎರಡು ವರ್ಗದ ವಿದ್ಯಾರ್ಥಿಗಳು, ಕೆಲವು ಅಗ್ಗದ ಕನ್ನಡ ಪುಸ್ತಕಗಳ ಸಂಬಂಧದಲ್ಲಿ ನಾನು ಮಾಡಿದ ಟೀಕೆಗಳ ಬಗ್ಗೆ ಚಳವಳಿ ನಡೆಸುತ್ತಿದ್ದಾರೆ. ನಮ್ಮ ವಿದ್ಯಾರ್ಥಿಗಳ ಅಧ್ಯಯನಕ್ಕೆ ಹಾನಿಯಾಗುವ ಯಾವುದೇ ವಿವಾದಕ್ಕೆ ಇದು ಕಾರಣವಾಗಲು ನಾನು ಇಚ್ಛಿಸುವುದಿಲ್ಲ’ ಎಂದು ತಿಳಿಸಿದ್ದಾರೆ.

• ನಗರದಲ್ಲಿ ನಿಷೇಧಾಜ್ಞೆ ಉಲ್ಲಂಘನೆ ಪ್ರಯತ್ನ: 90 ಮಂದಿ ಬಂಧನ

ಬೆಂಗಳೂರು, ಡಿ. 3– ನಗರದಲ್ಲಿ ಜಾರಿಯಲ್ಲಿರುವ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ನಡೆಸಲು ಪ್ರಯತ್ನಿಸಿದ ಸುಮಾರು 90 ವಿದ್ಯಾರ್ಥಿಗಳನ್ನು ಪೊಲೀಸರು ಇಂದು ತಮ್ಮ ವಶಕ್ಕೆ ತೆಗೆದುಕೊಂಡರು.

ಪೌರಾಡಳಿತ ಸಚಿವ ಬಿ. ಬಸವಲಿಂಗಪ್ಪ ಅವರ ವಿರುದ್ಧ ನಡೆಯುತ್ತಿರುವ ವಿದ್ಯಾರ್ಥಿ ಚಳವಳಿ ಇಂದು ಕೂಡ ಮುಂದುವರಿದು, ಪ್ರತಿಭಟನಾ ಕ್ರಮವಾಗಿ ಸೆಂಟ್ರಲ್ ಕಾಲೇಜು, ಸರ್ಕಾರಿ ಆರ್ಟ್ಸ್ ಕಾಲೇಜು ಮತ್ತು ಸೈನ್ಸ್ ಕಾಲೇಜಿನ ಬಳಿ ವಿದ್ಯಾರ್ಥಿಗಳು ನಿಷೇಧಾಜ್ಞೆ ಉಲ್ಲಂಘಿಸಲು ಪ್ರಯತ್ನಿಸಿದರು.

ಈ ವಿಶ್ವವಿದ್ಯಾಲಯಗಳು ಭಾರತದ ನೆಲದಲ್ಲಿ ಪರ– ವಿರೋಧದ ಚರ್ಚೆಗೆ ಕಾರಣವಾಗಿವೆ

ವಿದೇಶಿ ವಿಶ್ವವಿದ್ಯಾಲಯ: ನಿರೀಕ್ಷೆ, ಆತಂಕ



ವಿಶ್ಲೇಷಣೆ

ಎಚ್.ಆರ್. ಕೃಷ್ಣಮೂರ್ತಿ

ಜಾಗತಿಕ ಮಟ್ಟದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಗೆ ನಮ್ಮ ದೇಶದ ಉನ್ನತ ಶಿಕ್ಷಣ ವಲಯಕ್ಕೆ ಪ್ರವೇಶ ಅವಕಾಶ ಕಲ್ಪಿಸಿ, ಭಾರತದಲ್ಲಿ ಅವುಗಳ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ಅವಕಾಶ ನೀಡುವ ಕರಡು ನೀತಿ, ನಿಯಮಗಳನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ಈ ವರ್ಷದ ಜನವರಿಯಲ್ಲಿ ಪ್ರಕಟಿಸಿತ್ತು. ಆಸಕ್ತ ಸಾರ್ವಜನಿಕರು, ಶಿಕ್ಷಣ ತಜ್ಞರು, ವಿದೇಶಿ ವಿಶ್ವವಿದ್ಯಾಲಯಗಳಿಂದ ಬಂದ ಪ್ರತಿಕ್ರಿಯೆ, ಸಲಹೆಗಳ ಆಧಾರದ ಮೇಲೆ ಪರಿಷ್ಕೃತ ನೀತಿ, ನಿಯಮ, ಮಾರ್ಗದರ್ಶಕ ಸೂತ್ರಗಳನ್ನು ಯುಜಿಸಿ ಅಂತಿಮವಾಗಿ ನವೆಂಬರ್ 8ರಂದು ಪ್ರಕಟಿಸಿದೆ. ಅದರಂತೆ, ಆಸ್ಟ್ರೇಲಿಯಾದ ವೆಸ್ಟರ್ನ್ ಸಿಡ್ನಿ ವಿಶ್ವವಿದ್ಯಾಲಯವು ಬೆಂಗಳೂರಿನಲ್ಲಿ ಮೊದಲ ವಿದೇಶಿ ಕ್ಯಾಂಪಸ್ ಸ್ಥಾಪಿಸಲಿದೆ.

ಮಾರ್ಗದರ್ಶಕ ಸೂತ್ರಗಳಲ್ಲಿ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಎಚ್ಚರದಿಂದ ರಕ್ಷಿಸುವ ಅನೇಕ ಕಟ್ಟುನಿಟ್ಟಾದ ಅಂಶಗಳಿವೆ. ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸಲು ಬಯಸುವ ವಿದೇಶಿ ವಿಶ್ವವಿದ್ಯಾಲಯಗಳು ‘ಜಾಗತಿಕ ಹೈಯರ್ ಎಜುಕೇಷನ್ ರ‍್ಯಾಂಕಿಂಗ್’ ಪಟ್ಟಿಯಲ್ಲಿ ಮೊದಲ 500 ಸ್ಥಾನಗಳಲ್ಲಿ ಇರಬೇಕು. ತನ್ನ ತವರಿನಲ್ಲಿ ಅಂತಹ ವಿಶ್ವವಿದ್ಯಾಲಯಕ್ಕೆ ಪ್ರತಿಷ್ಠಿತ ಹೆಸರಿರಬೇಕು. ಒಂದು ವಿಶ್ವವಿದ್ಯಾಲಯವು ಒಂದಕ್ಕಿಂತ ಹೆಚ್ಚು ಕ್ಯಾಂಪಸ್‌ಗಳನ್ನು ತೆರೆಯಬಹುದು. ಎರಡು ಅಥವಾ ಹೆಚ್ಚು ವಿಶ್ವವಿದ್ಯಾಲಯಗಳು ಸೇರಿ ಕ್ಯಾಂಪಸ್ ಪ್ರಾರಂಭಿಸಬಹುದು.

ವಿದೇಶಿ ವಿಶ್ವವಿದ್ಯಾಲಯವು ಭಾರತದ ಕ್ಯಾಂಪಸ್‌ನಲ್ಲಿ ನೀಡುವ ಉನ್ನತ ಶಿಕ್ಷಣ ಮತ್ತು ಪ್ರದಾನ ಮಾಡುವ ಪದವಿ, ಆ ವಿಶ್ವವಿದ್ಯಾಲಯವು ಅದರ ತವರಿನಲ್ಲಿ ನೀಡುವ ಶಿಕ್ಷಣ ಮತ್ತು ಪದವಿಗೆ ಸರ್ವ ರೀತಿಯಿಂದಲೂ ಸಮನಾಗಿರಬೇಕು. ವಿದ್ಯಾರ್ಥಿಯು ಯಾವುದೇ ಶೈಕ್ಷಣಿಕ ಪ್ರಾಧಿಕಾರದಿಂದ ‘ಸಮಾನತೆಯ ಪ್ರಮಾಣಪತ್ರ’ ಪಡೆಯಬೇಕಾದ ಸಂದರ್ಭ ಬರಬಾರದು. ವಿದೇಶಿ ವಿಶ್ವವಿದ್ಯಾಲಯದ ಕ್ಯಾಂಪಸ್‌ಗಳು ಭಾರತದಲ್ಲಿ ತಮ್ಮದೇ ಆದ ಮೂಲ ಸೌಕರ್ಯಗಳನ್ನು ನಿರ್ಮಿಸಿಕೊಳ್ಳಬೇಕು. ನಮ್ಮ ವಿಶ್ವವಿದ್ಯಾಲಯಗಳ ಮೂಲ ಸೌಕರ್ಯಗಳನ್ನು ಬಳಸಿಕೊಳ್ಳುವಂತಿಲ್ಲ. ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆ, ಶಿಕ್ಷಣ ಶುಲ್ಕ, ಅಧ್ಯಾಪಕ ವರ್ಗ ಮತ್ತು ಸಿಬ್ಬಂದಿಯ ನೇಮಕಾತಿಯಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಇರಲಿದೆ. ಆದರೆ ಅವು ನ್ಯಾಯ ಸಮ್ಮತವಾಗಿರಬೇಕು, ಸಮರ್ಥನೀಯವಾಗಿರಬೇಕು ಮತ್ತು ಎಲ್ಲ ರೀತಿಯಲ್ಲೂ ಪಾರದರ್ಶಕವಾಗಿರಬೇಕು.

ಶಿಕ್ಷಣ ಶುಲ್ಕದಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ರಿಯಾಯಿತಿ ತೋರುವುದರೊಡನೆ, ಆರ್ಥಿಕವಾಗಿ ದುರ್ಬಲರಾಗಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಬೇಕು. ಯುಜಿಸಿಯಿಂದ ಅನುಮತಿ ಪಡೆದ ಎರಡು ವರ್ಷಗಳ ಒಳಗಾಗಿ ಕ್ಯಾಂಪಸ್ ಸಿದ್ಧಗೊಂಡು ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಬೇಕು. ನಮ್ಮ ದೇಶದ ಹಿತಾಸಕ್ತಿ ಮತ್ತು ರಾಷ್ಟ್ರೀಯ ಭದ್ರತೆಗೆ ಹಾನಿ ಉಂಟುಮಾಡುವಂತಹ ಯಾವುದೇ ರೀತಿಯ ಶೈಕ್ಷಣಿಕ ಚಟುವಟಿಕೆಗಳಿಗೆ ಅವಕಾಶ ಇರುವುದಿಲ್ಲ.

ಯುಜಿಸಿಯ ಮಾರ್ಗದರ್ಶಕ ಸೂತ್ರಗಳನ್ನು ಅನುಸರಿಸಿ ಆಸ್ಟ್ರೇಲಿಯಾದ ಡೀಕಿನ್ ವಿಶ್ವವಿದ್ಯಾಲಯ ಮತ್ತು ವೊಲನ್‌ಗಾಂಗ್ ವಿಶ್ವವಿದ್ಯಾಲಯವು ‘ಗುಜರಾತ್ ಇಂಟರ್‌ನ್ಯಾಷನಲ್ ಫೈನಾನ್ಶಿಯಲ್ ಟೆಕ್ ಸಿಟಿ’ ಅಥವಾ ‘ಗಿಫ್ಟ್ ಸಿಟಿ’ಯಲ್ಲಿ ತಮ್ಮ ಕ್ಯಾಂಪಸ್‌ಗಳನ್ನು ಪ್ರಾರಂಭಿಸಲಿವೆ. ಡೀಕಿನ್ ವಿಶ್ವವಿದ್ಯಾಲಯವು 2024ರ ಜೂನ್‌ನಲ್ಲಿ ಸೈಬರ್ ಸೆಕ್ಯೂರಿಟಿ ಮತ್ತು ಬಿಸಿನೆಸ್ ಅನಲೆಟಿಕ್ಸ್ ವಿಷಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸುವುದಾಗಿ ತಿಳಿಸಿದೆ. ಈ ಕೋರ್ಸ್‌ಗಳಿಗೆ ಇತರ ದೇಶಗಳ ವಿದ್ಯಾರ್ಥಿಗಳೂ ಪ್ರವೇಶ ಪಡೆಯಬಹುದು. ಈ ಅವಕಾಶವನ್ನು ಪ್ರಾರಂಭದಲ್ಲಿ ಭಾರತದ ಅಕ್ಕಪಕ್ಕದ ದೇಶಗಳು ಬಳಸಿಕೊಳ್ಳುವ ನಿರೀಕ್ಷೆಯಿದೆ. ಬೋಧಕ ವರ್ಗದ ಶೇ 20ರಷ್ಟು ಪ್ರಾಧ್ಯಾಪಕರು ಆಸ್ಟ್ರೇಲಿಯಾದಿಂದ ಬರಲಿದ್ದು, ಉಳಿದ ಶೇ 80ರಷ್ಟು ಭಾಗಕ್ಕೆ ಭಾರತದ ಪ್ರತಿಭಾವಂತ ಪರಿಣತರನ್ನು ನೇಮಿಸಿಕೊಳ್ಳಲಾಗುತ್ತದೆ.

ಡೀಕಿನ್ ಮತ್ತು ವೊಲನ್‌ಗಾಂಗ್ ವಿಶ್ವವಿದ್ಯಾಲಯಗಳಲ್ಲದೆ ಆಸ್ಟ್ರೇಲಿಯಾದ ಜೇಮ್ಸ್‌ಕುಕ್, ಗ್ರಿಫಿತ್, ವೆಸ್ಟರ್ನ್ ಸಿಡ್ನಿ, ಕ್ಯಾನ್ಬರಾ, ಫ್ಲಿಂಡರ್ಸ್ ಮತ್ತು ಲಟ್ರೋಬಾ ವಿಶ್ವವಿದ್ಯಾಲಯಗಳು ಒಟ್ಟಿಗೆ ಸೇರಿ ಕ್ಯಾಂಪಸ್ಸೊಂದನ್ನು ಸ್ಥಾಪಿಸಲಿವೆ. ಜಾಗತಿಕ ವಿಶ್ವವಿದ್ಯಾಲಯಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ 375ನೇ ಸ್ಥಾನದಲ್ಲಿರುವ ವೆಸ್ಟರ್ನ್ ಸಿಡ್ನಿ ವಿಶ್ವವಿದ್ಯಾಲಯವು ಬೆಂಗಳೂರಿನಲ್ಲಿ ತನ್ನ ಕ್ಯಾಂಪಸ್ ಪ್ರಾರಂಭಿಸಲಿದೆ ಎಂದು ದೆಹಲಿಯಲ್ಲಿರುವ ಆಸ್ಟ್ರೇಲಿಯಾದ ಹೈಕಮಿಷನ್ ಅಧಿಕೃತವಾಗಿ ತಿಳಿಸಿದೆ. 2025ರ ಶೈಕ್ಷಣಿಕ ವರ್ಷದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ವಿಜ್ಞಾನ ಕ್ಷೇತ್ರಗಳಲ್ಲಿ ಕೋರ್ಸ್‌ಗಳು ಪ್ರಾರಂಭವಾಗಿ, ಅಲ್ಲಿಂದ ಮುಂದಿನ ಐದು ವರ್ಷಗಳಲ್ಲಿ ಒಟ್ಟು 1,000 ವಿದ್ಯಾರ್ಥಿಗಳು ಪದವಿ ಪಡೆದು ಹೊರಬರಲಿದ್ದಾರೆ ಎಂದು ಹೈಕಮಿಷನ್ ಕಚೇರಿ ತಿಳಿಸಿದೆ.

ವಿದೇಶಿ ವಿಶ್ವವಿದ್ಯಾಲಯಗಳು ಭಾರತಕ್ಕೆ ಬಂದರೆ ಉತ್ಕೃಷ್ಟ ಗುಣಮಟ್ಟದ ಉನ್ನತ ಶಿಕ್ಷಣ ನಮ್ಮಲ್ಲಿಯೇ ದೊರೆಯುತ್ತದೆ. ಪಠ್ಯ, ಪಾಠಕ್ರಮ, ಅಧ್ಯಯನ, ಸಂಶೋಧನೆಗಳಲ್ಲಿನ ಹೊಸ ವಿಧಾನ, ಹೊಸ ಆಲೋಚನೆಗಳಿಂದ ಜ್ಞಾನಾರ್ಜನೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ವಿದೇಶಿ ಬಂಡವಾಳ ಹರಿದುಬರುತ್ತದೆ. ಮುಂದೊಮ್ಮೆ ಭಾರತವು ಉತ್ತಮ ಮಟ್ಟದ ಉನ್ನತ ಶಿಕ್ಷಣ ಕೇಂದ್ರವಾಗಿ ರೂಪುಗೊಳ್ಳುತ್ತದೆ ಎಂಬ ನಿರೀಕ್ಷೆಗಳಿವೆ. ಆದರೆ ಇದಕ್ಕೆ ವಿರುದ್ಧವಾದ ಅಭಿಪ್ರಾಯಗಳೂ ಇವೆ.



ರಾಷ್ಟ್ರೀಯ ಶಿಕ್ಷಣ ನೀತಿಯಂತೆ, ಪ್ರಪಂಚದ ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಮೊದಲ 100 ಸ್ಥಾನಗಳಲ್ಲಿರುವ ವಿಶ್ವವಿದ್ಯಾಲಯಗಳಿಗೆ ಕ್ಯಾಂಪಸ್ ಸ್ಥಾಪಿಸಲು ಅನುಮತಿ ನೀಡಬಹುದಿತ್ತು. ಆದರೆ ಈಗ ಮೊದಲ 500 ಸ್ಥಾನಗಳ ಒಳಗಿರುವ ಸಂಸ್ಥೆಗಳಿಗೆ ಈ ಅವಕಾಶವನ್ನು ವಿಸ್ತರಿಸಿರುವುದರಿಂದ, ಉನ್ನತ ಶಿಕ್ಷಣದ ಗುಣಮಟ್ಟವನ್ನೇ ದುರ್ಬಲಗೊಳಿಸಲಾಗಿದೆ ಎಂಬ ಟೀಕೆಯಿದೆ. ಇದರಿಂದ, ಹೆಸರಾಂತ ವಿಶ್ವವಿದ್ಯಾಲಯಗಳ ಬದಲಿಗೆ, ಭಾರತ ಸರ್ಕಾರ ನೀಡುವ ಆಕರ್ಷಕ ಪ್ರೋತ್ಸಾಹಕಗಳ ಪ್ರೇರಣೆಯಿಂದ, ಲಾಭ ಗಳಿಸುವ ಉದ್ದೇಶದಿಂದ ಎರಡನೆಯ ದರ್ಜೆಯ ವಿಶ್ವವಿದ್ಯಾಲಯಗಳೇ ಭಾರತಕ್ಕೆ ಬರುವ ಸಾಧ್ಯತೆ ಹೆಚ್ಚಾಗುತ್ತದೆ ಎಂಬ ಮಾತಿದೆ.

ಜಾಗತಿಕ ಮಟ್ಟದಲ್ಲಿ ರ‍್ಯಾಂಕಿಂಗ್ ನಿರ್ಧರಿಸುವ ವಿಧಾನ, ರ‍್ಯಾಂಕಿಂಗ್‌ನ ಅರ್ಥವಿವರಣೆ, ನಿಖರತೆ, ಪ್ರಯೋಜನಗಳ ಬಗ್ಗೆ ಅನೇಕ ಪ್ರಶ್ನೆ, ಟೀಕೆಗಳಿವೆ. ಕ್ವಕ್‌ಕ್ವಾರೆಲಿ ಸೈಮಂಡ್ಸ್ (ಕ್ಯುಎಸ್), ಇಂಗ್ಲೆಂಡ್‌ನ ಟೈಮ್ಸ್ ಹೈಯರ್ ಎಜುಕೇಷನ್ ಮತ್ತು ಶಾಂಘೈ ರ‍್ಯಾಂಕಿಂಗ್ ಕನ್ಸಲ್‌ಟೆನ್ಸಿ, ಜಾಗತಿಕವಾಗಿ ಅತಿ ಹೆಚ್ಚಿನ ಮಾನ್ಯತೆ ಪಡೆದಿರುವ ಪ್ರಪಂಚದ ಮೂರು ಪ್ರಮುಖ ರ‍್ಯಾಂಕಿಂಗ್ ಸಂಸ್ಥೆಗಳು. ಆದರೆ ಇವು ಮುಖ್ಯವಾಗಿ ವಿಶ್ವವಿದ್ಯಾಲಯಗಳ ಸಂಶೋಧನಾ ಉತ್ಪಾದಕತೆಯನ್ನು ಮಾಪನ ಮಾಡುತ್ತವೆಯೇ ವಿನಾ ಬೋಧನಾ ಸಾಮರ್ಥ್ಯವನ್ನಲ್ಲ ಎಂಬ ಅನಿಸಿಕೆ ಶೈಕ್ಷಣಿಕ ವಲಯದಲ್ಲಿದೆ. ಶ್ರೇಣೀಕರಿಸಲು ಬಳಸುವ ಸೂಚಿ (ಇಂಡಿಕೇಟರ್ಸ್) ಮತ್ತು ಮಾನದಂಡಗಳನ್ನು ಜಾಣತನದಿಂದ ಆಯ್ಕೆ ಮಾಡಿ, ರ‍್ಯಾಂಕಿಂಗ್ ಅನ್ನು ವ್ಯವಸ್ಥಿತವಾಗಿ, ಉದ್ದೇಶಪೂರ್ವಕವಾಗಿ ಬದಲಿಸುವ ಸಾಧ್ಯತೆಯೂ ಇದೆಯೆಂಬ ಟೀಕೆಯಿದೆ.

ಈ ವರ್ಷದ ಜೂನ್ ತಿಂಗಳಲ್ಲಿ ಕ್ಯುಎಸ್ ಹೊರತಂದಿರುವ ವಿಶ್ವವಿದ್ಯಾಲಯಗಳ ರ‍್ಯಾಂಕಿಂಗ್ ಪಟ್ಟಿಯನ್ನು ಸಿದ್ಧಪಡಿಸುವಾಗ, ‘ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಪ್ರಮಾಣ’ ಎಂಬ ಹೊಸ ಸೂಚಿಯನ್ನು ಬಳಸಲಾಗಿದೆ. ಇದರ ಪರಿಣಾಮವಾಗಿ, ಜಾಗತಿಕವಾಗಿ 155ನೇ ಸ್ಥಾನದಲ್ಲಿದ್ದ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ 225ನೇ ಸ್ಥಾನಕ್ಕೆ ಕುಸಿದಿದೆ! ಆದರೆ, ವಾಸ್ತವದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯು ಜಗತ್ತಿನ ಅಗ್ರಮಾನ್ಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೊಂದು ಎಂಬುದರಲ್ಲಿ ಎರಡನೆಯ ಮಾತಿಲ್ಲ.

ಈ ಬಗೆಯ ರ‍್ಯಾಂಕಿಂಗ್ ವ್ಯವಸ್ಥೆಯ ಪರಿಕಲ್ಪನೆಯನ್ನೇ ಪ್ರಶ್ನಿಸಿರುವ ಯುನೆಸ್ಕೊ, ಅದರಿಂದಾಗುವ ಪ್ರಯೋಜನಕ್ಕಿಂತ ತೊಂದರೆಯೇ ಹೆಚ್ಚು ಎನ್ನುತ್ತದೆ. ಇಂಥ ಪರಿಸ್ಥಿತಿಯಲ್ಲಿ ಈ ರ‍್ಯಾಂಕಿಂಗ್‌ಗಳ ಆಧಾರದ ಮೇಲೆ ಭಾರತದಲ್ಲಿ ಕ್ಯಾಂಪಸ್‌ಗಳನ್ನು ತೆರೆಯಲು ಅವಕಾಶ ನೀಡುವುದು ಜಾಣತನವಲ್ಲ. ಅದರ ಬದಲಿಗೆ ಹಾರ್ವರ್ಡ್, ಯೇಲ್, ಪ್ರಿನ್ಸ್‌ಟನ್, ಕೊಲಂಬಿಯಾದಂತಹ ಹೆಸರಾಂತ ವಿಶ್ವವಿದ್ಯಾಲಯಗಳಿಗೆ ಎಲ್ಲ ಸೌಲಭ್ಯಗಳನ್ನು ನೀಡಿ, ಭಾರತದಲ್ಲಿ ಕ್ಯಾಂಪಸ್‌ಗಳನ್ನು ತೆರೆಯುವಂತೆ ಕೋರಿ, ಮನವೊಲಿಸುವುದು ಹೆಚ್ಚು ಅರ್ಥಪೂರ್ಣವಾಗುತ್ತದೆ.

ಈ ಎಲ್ಲದರ ನಡುವೆ, ಉನ್ನತ ಮಟ್ಟಕ್ಕೇರುವ ಸಾಮರ್ಥ್ಯವಿರುವ ನಮ್ಮ ದೇಶದ ಸಂಸ್ಥೆಗಳಿಗೆ ಎಲ್ಲ ಪ್ರೋತ್ಸಾಹ ನೀಡಿ, ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸ್ಪರ್ಧಿಸಲು ಅಗತ್ಯವಾದ ಸಮಾನ ಅನುಕೂಲ, ಸಮಾನ ಅವಕಾಶ ಕಲ್ಪಿಸಬೇಕೆಂಬ ತೀವ್ರ ಒತ್ತಾಯವೂ ಇದೆ.

ಚುರುಮುರಿ



ಸೆಲ್ಫಿ ಪಾಯಿಂಟ್

• ಸುಮಂಗಲಾ

ಬೆಕ್ಕಣ್ಣ ಪೇಪರು ಓದುತ್ತ, ‘ಈ ದುನಿಯಾವಳಗೆ ಎಂತೆಂಥ ಮಂಗ್ಯಾಗಳು ಇರತಾರ’ ಎನ್ನುತ್ತ ಗಹಗಹಿಸಿ ನಕ್ಕಿತು.

‘ಪೆರುಗ್ವೆ ದೇಶದ ಹಿರಿಯ ಕೃಷಿ ಅಧಿಕಾರಿ, ನಿತ್ಯಾನಂದನ ಕೈಲಾಸ ದೇಶದ ಜೊತೆಗೆ ಒಪ್ಪಂದಕ್ಕೆ ಸಹಿ ಹಾಕ್ಯಾನಂತೆ. ಮಸ್ತ್ ಪೆಂಗ ನಾಮ ಹಾಕಿಸಿಕೊಂಡೀಯಪಾ ಅಂತ ಅಂವನ್ನ ತೆಗೆದು ಹಾಕ್ಯಾರಂತ’ ಬೆಕ್ಕಣ್ಣ ವಿವರಿಸಿತು.

‘ನಿತ್ಯಾನಂದ ಎಲ್ಲಿ ಅದಾನಂತೇ ಗೊತ್ತಿಲ್ಲ ಅಂತ ನಮ್ ಪೊಲೀಸರು ಹೇಳತಾರೆ. ಅಂತಾದ್ರಾಗೆ ಅಂವಾ ಪೆರುಗ್ವೆ ಮಂದಿಗೆ ಎಲ್ಲಿ ಸಿಕ್ಕನಂತೆ’ ಅಚ್ಚರಿಯಾಯಿತು ನನಗೆ.

‘ಅಂವ ಖುದ್ದು ಬಂದಿಲ್ಲ. ನಿತ್ಯಾನಂದನ ಕೈಲಾಸ ದೇಶದ ಪ್ರತಿನಿಧಿಗಳು ನಾಕಾರು ಜನ ಬಂದು ಆ ಅಧಿಕಾರಿಗೆ ಭೆಟ್ಟಿಯಾಗಿ, ನಿಮ್ಮ ಕೃಷಿ ಉದ್ಧಾರ ಮಾಡತೀವಿ ಅಂತ್ಹೇಳಿ ಒಪ್ಪಂದ ಪತ್ರ ಮಾಡಿಕೊಂಡಾರಂತೆ...’

‘ನಿತ್ಯಾನಂದ ಎಷ್ಟರ ಬೆರಕಿ ಅದಾನ! ಕೈಲಾಸ ದೇಶದವರ ಜೊತಿಗಿ ಆ ಅಧಿಕಾರಿ ಸೆಲ್ಫಿನೂ ತೆಕ್ಕೊಂಡನೇನು ಮತ್ತ? ಈಗ ಎಲ್ಲಾ ಕಡಿಗಿ ಸೆಲ್ಫಿ ಮೇನಿಯಾ! ಇಟಲಿ ಪ್ರಧಾನಿ ಮೆಲೊನಿ ಮೋದಿಮಾಮನ ಜೊತಿಗೆ ಸೆಲ್ಫಿ ತೆಕ್ಕೊಂಡು, ಮೆಲೊಡಿ ಸೆಲ್ಫಿ ಅಂತ ಸೋಶಿಯಲ್ ಮೀಡಯಾವಳಗೆ ಹಾಕ್ಯಾರೆ, ನೋಡೀಯೇನ್?’

ಮೋದಿಮಾಮನ ಜೊತೆಗೆ ಸೆಲ್ಫಿ ತೆಕ್ಕೋಳಾಕೆ ಬ್ಯಾರೆ ದೇಶದ ಪ್ರಧಾನಿಗಳೂ ತುದಿಗಾಲಿನ ಮ್ಯಾಗೆ ನಿಂತಿರತಾರೆ! ಕಾಲೇಜುವಳಗೆ ಸೆಲ್ಫಿ ಪಾಯಿಂಟ್ ಮಾಡಿ, ಅಲ್ಲಿ ಫೋಟೊ ತೆಗೆದು ಕಳಿಸ್ರಿ ಅಂತ ಯುಜಿಸಿ ಆರ್ಡರು ಮಾಡ್ಯೆತಲ್ಲ... ಹಂಗೇ ಮನ್ಯಾಗೂ ಮಾಡ್ರಿ ಅಂತ ಆರ್ಡರ್ ಬರತೈತಿ. ಈಗಲೇ ಮನ್ಯಾಗೆ ಒಂದ್ ಸೆಲ್ಫಿ ಪಾಯಿಂಟ್ ರೆಡಿ ಮಾಡು’.

‘ಗೃಹಲಕ್ಷ್ಮಿಯರು ಎರಡು ಸಾವಿರ ರೊಕ್ಕ ಬಂದಿದ್ದನ್ನು, ಕರೆಂಟು ಬಿಲ್ಲು ಸೊನ್ನೆ ಬಂದಿದ್ದನ್ನು ತೋರಿಸಿ, ಮನೆಯೊಳಗಿನ ಸೆಲ್ಫಿ ಮೂಲೆವಳಗೆ ಫೋಟೊ ತೆಕ್ಕಂಡು ಕಳಿಸಿದರೆ?’

‘ಮನೆಯಾಗಿನ ಸೆಲ್ಫಿ ಮೂಲೆವಳಗೆ ರಾಜ್ಯದ ಬಗ್ಗೆ ಮಾತಾಡಂಗಿಲ್ಲ, ಬರೇ ದೇಶದ ಪ್ರಗತಿ ಬಗ್ಗೆ ಮಾತಾಡಿ ಫೋಟೊ ತಗಬೇಕಂತ ಆರ್ಡರ್‌ವಳಗೆ ಕಟ್ಟಪ್ಪಣೆ ಕೊಡ್ತಾರೇಳು’ ಬೆಕ್ಕಣ್ಣ ಉಪಾಯ ಹೇಳಿತು.

ಸಂಗತ

ಕೊಡ ನೀರಿನ ಹಿಂದಿದೆ ಕಂಬನಿಯ ಕೊಡುಗೆ

ಬಳಕೆದಾರರಿಗೆ ನೀರು ಪೂರೈಕೆಯ ಉದ್ದೇಶ ಅರಿವಾಗದಿರುವುದು ದುರ್ದೈವ

• ಪ.ರಾಮಕೃಷ್ಣಶಾಸ್ತ್ರಿ

ರಾಜ್ಯದ ಇತಿಹಾಸದಲ್ಲಿ ಪ್ರತಿ ಮನೆಗೂ ಕುಡಿಯುವ ನೀರು ಸಿಗಬೇಕು ಎಂಬ ಧ್ಯೇಯವನ್ನು ಕಾರ್ಯಗತಗೊಳಿಸಲು ಬಹುಶಃ ನಜೀರ್ ಸಾಬ್ ಅವರಂತೆ ಶ್ರಮಿಸಿದ ಇನ್ನೊಬ್ಬ ರಾಜಕಾರಣಿ ವಿರಳ ಎನ್ನಬಹುದು. ಗ್ರಾಮ ಪಂಚಾಯಿತಿಗಳ ಮೂಲಕ ಮನೆಮನೆಗೂ ಕುಡಿಯುವ ನೀರು ತಲುಪಲೇಬೇಕೆಂಬ ಗುರಿ ಇರಿಸಿಕೊಂಡು, ಕೊಳವೆಬಾವಿಗಳನ್ನು ಕೊರೆಸಿ ನೀರು ಪೂರೈಸಿದ ಹೆಗ್ಗಳಿಕೆ ಅವರದು. ಅದಕ್ಕಾಗಿಯೇ ಅವರನ್ನು ಜನ ‘ನೀರುಸಾಬ್’ ಎಂದು ಕರೆದರು.


ಈಗಲೂ ರಾಜ್ಯದ ಐದೂವರೆ ಸಾವಿರಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿಗಳಲ್ಲೂ ಕುಡಿಯುವ ನೀರು ಪೂರೈಕೆಯೇ ಪ್ರಮುಖ ಹೊಣೆಯಾಗಿದೆ. ಬಹುತೇಕ ಪಂಚಾಯಿತಿಗಳ ಆದಾಯವೂ ನೀರೆತ್ತುವ ಪಂಪುಗಳ ವಿದ್ಯುತ್ ಬಳಕೆಗಾಗಿಯೇ ವೆಚ್ಚವಾಗುತ್ತಿದೆ. ಅನೇಕ ಪಂಚಾಯಿತಿಗಳಿಗೆ ಸರ್ಕಾರ ಕೊಡುವ ಅನುದಾನದಿಂದಲೇ ವಿದ್ಯುತ್ ಶುಲ್ಕವನ್ನು ಮುರಿದುಕೊಳ್ಳುತ್ತಿರುವುದರಿಂದ, ಅಲ್ಲಿ ಅಭಿವೃದ್ಧಿ ಎಂಬುದು ಶೂನ್ಯ ಸ್ಥಾನದಲ್ಲಿದೆ. ಸರ್ಕಾರಕ್ಕೆ ನಿಜವಾಗಿ ಜನಪರ ಕಾಳಜಿಯಿರುವುದು ಹೌದಾದರೆ, ಜನರಿಗೆ ನೀರುಣಿಸಲು ಬಳಸುವ ವಿದ್ಯುತ್ತಿನ ಶುಲ್ಕವನ್ನು ಮನ್ನಾ ಮಾಡಬಹುದಿತ್ತು.

ಇನ್ನೊಂದು ವಿಷಾದದ ಸಂಗತಿಯೆಂದರೆ, ಹನಿ ನೀರೂ ಅಮೃತಸಮಾನ, ಚಿನ್ನಕ್ಕಿಂತ ಮೌಲಿಕ ಎಂಬುದನ್ನು ಬಳಕೆದಾರರು ತಿಳಿಯದೇ ಹೋಗಿರುವುದು. ಮನೆಯೊಂದರ ಮುಂದಿರುವ ಸಾರ್ವಜನಿಕ ನಲ್ಲಿಯಲ್ಲಿ ನೀರು ಸೋರುತ್ತಿದ್ದರೆ ಅದನ್ನು ನಿಲ್ಲಿಸಲು ಕಾಳಜಿ ವಹಿಸದ ಮನೆಯವರಿದ್ದಾರೆ. ‘ಯಾಕೆ ಹೀಗೆ ನೀರು ಸೋರಲು ಬಿಟ್ಟಿದ್ದೀರಿ? ನಲ್ಲಿಯ ಬಿರಡೆ ಭದ್ರವಾಗಿ ಹಾಕಿ’ ಎಂದು ಹೇಳಿದರೆ ತಿರುಗಿಬೀಳುತ್ತಾರೆ. ‘ಅದೇನೂ ಧರ್ಮದ ನೀರಲ್ಲ, ನಾವು ಅದಕ್ಕೆ ಹಣ ಕೊಡುತ್ತೇವೆ’ ಎಂದು ದಬಾಯಿಸುತ್ತಾರೆ.

ನಿಜ, ನೀರಿಗಾಗಿ ಎಲ್ಲ ಮನೆಗಳವರೂ ಶುಲ್ಕ ಕೊಡುತ್ತಾರೆ. ಆದರೆ, ಶುಲ್ಕ ಅತ್ಯಲ್ಪ. ಲೀಟರ್‌ಗೆ ಹತ್ತೋ ಹದಿನೈದೋ ರೂಪಾಯಿ ಕೊಟ್ಟು ಪೇಟೆಯ ಬಾಟಲಿ ನೀರು ಕೊಂಡು ಕುಡಿಯುವವರು ಇಲ್ಲಿ ಇಷ್ಟು ಕಡಿಮೆ ಮೊತ್ತಕ್ಕೆ ಸಿಗುವ ನೀರಿನ ಪ್ರಮಾಣ ತಿಳಿದರೆ ಅಚ್ಚರಿಪಡಬಹುದು.

ಕಡಿಮೆ ಬೆಲೆಗೆ ಸಿಗುವ ನೀರಾದ್ದರಿಂದ ಸಾರ್ವಜನಿಕರಿಗೆ ಅದರ ಮಹತ್ವ ತಿಳಿಯದೆ ಹೋಗಿರಲೂಬಹುದು. ಮನೆಗಳಿಗೆ ನೀರು ಸರಬರಾಜು ಮಾಡಲು ರಸ್ತೆಯಲ್ಲಿ ಅಡ್ಡವಾಗಿ ತೋಡಿ ಕೊಳವೆಗಳನ್ನು ಅಳವಡಿಸುವುದುಂಟು. ಕೆಲವೊಮ್ಮೆ ಭಾರವಾದ ವಾಹನಗಳು ಅಲ್ಲಿ ಸಂಚರಿಸಿದಾಗ ಕೊಳವೆ ಒಡೆದು ನೀರಿನ ಪ್ರವಾಹ ಹರಿಯಬಹುದು. ಆಗಲೂ ಅದನ್ನು ತಡೆಯಲು ಯಾರೂ ಮುಂದಾಗುವುದಿಲ್ಲ. ‘ಅದನ್ನು ಸರಿಪಡಿಸುವುದು ನೀರಿನ ನಿರ್ವಾಹಕರ ಜವಾಬ್ದಾರಿ, ನಮ್ಮದಲ್ಲ’ ಎನ್ನುತ್ತಾರೆ. ಆ ನೀರು ಬೇರೆಯವರ ಮನೆಗಳಿಗೆ ಹರಿಯುತ್ತಿದ್ದರೆ, ತಮ್ಮ ಮನೆಗಲ್ಲವಲ್ಲ ಎಂದುಕೊಂಡು ನಿರ್ಲಿಪ್ತರಾಗುತ್ತಾರೆ. ಸಾವಿರಾರು ಲೀಟರ್ ನೀರು ವ್ಯರ್ಥವಾದಾಗಲೂ ಜನ ಅದಕ್ಕಾಗಿ ಮರುಗುವುದಿಲ್ಲ.

ಹೆಚ್ಚಿನ ಗ್ರಾಮ ಪಂಚಾಯಿತಿಗಳಲ್ಲಿ ನೀರಿನ ನಿರ್ವಹಣೆ ನೋಡಿಕೊಳ್ಳುವುದಕ್ಕೆ ಒಬ್ಬನೇ ನಿರ್ವಾಹಕ ಇರುತ್ತಾನೆ. ನೂರಾರು ಮನೆಗಳಿಗೆ ಸುಗಮವಾಗಿ ನೀರು ತಲುಪುವಂತೆ ನೋಡಿಕೊಳ್ಳುವುದು ಅವನ ಜವಾಬ್ದಾರಿ. ಬೇಸಿಗೆಯ ದಿನಗಳಲ್ಲಿ ವಿದ್ಯುತ್ ಕಡಿತವಿದ್ದರೆ ಎಲ್ಲ ಮನೆಗಳಿಗೂ ನೀರು ತಲುಪಿಸಲು ಅವನಿಗೆ ಸಾಧ್ಯವಾಗದೇ ಹೋದಾಗ ಜನ ಕೆರಳಿ ಅವನ ಮೇಲೆ ಏರಿ ಹೋಗುತ್ತಾರೆ. ಬೆಳಕು ಹರಿಯುವ ಮುನ್ನ ಕೊಳವೆಬಾವಿಯ ಬಳಿಗೆ ಬಂದು, ಪಂಪು ಚಾಲೂ ಮಾಡಿ, ಕೊಳವೆಗಳು ಕೆಟ್ಟುಹೋದಾಗ ತನ್ನದೇ ವೆಚ್ಚದಲ್ಲಿ ಸರಿಪಡಿಸುವ ಈ ಶ್ರಮಜೀವಿಗೆ ಕತ್ತಲಲ್ಲಿ ಹಾವು ಕಡಿದರೂ ಪಂಚಾಯಿತಿ ಯಾವುದೇ ಸುರಕ್ಷೆ ಒದಗಿಸುವುದಿಲ್ಲ. ಅವನಿಗೆ ಸೇವಾ ಬಡ್ತಿಯಿಲ್ಲ. ತಿಂಗಳಿಗೆ ನಿಗದಿತ ಕನಿಷ್ಠ ಸಂಬಳ ಬಿಟ್ಟರೆ ಬೇರೆ ಯಾವುದೇ ಸೌಲಭ್ಯಗಳು ಸಿಗುವುದಿಲ್ಲ.



ಪಂಚಾಯಿತಿಯ ನೀರನ್ನು ಕುಡಿಯಲು ಮಾತ್ರ ಉಪಯೋಗಿಸಬೇಕು ಎಂಬ ಕರಾರಿಗೆ ನೀರಿನ ಬಳಕೆದಾರರು ಒಪ್ಪಿಕೊಂಡು ಸಹಿ ಮಾಡುತ್ತಾರೆ. ಆದರೆ ರಾತ್ರಿಯಾದ ಕೂಡಲೇ ನೀರಿನ ಮೀಟರನ್ನು ಸ್ಥಗಿತಗೊಳಿಸಿ, ಇದೇ ನೀರನ್ನು ಮಲ್ಲಿಗೆ, ವೀಳ್ಯದೆಲೆ ಕೃಷಿಗೆ ಬಳಸುವವರಿದ್ದಾರೆ. ಇದನ್ನು ಆಕ್ಷೇಪಿಸಿದ ನೀರು ನಿರ್ವಾಹಕನಿಗೆ ಹೊಡೆದವರೂ ಇದ್ದಾರೆ.

ನಿಜವಾಗಿ ಬಳಕೆದಾರರಿಗೆ ಈ ನೀರು ಪೂರೈಕೆಯ ಉದ್ದೇಶ ಅರಿವಾಗದೇ ಹೋಗಿರುವುದು ದುರ್ದೈವ. ಒಂದು ಕೊಡ ನೀರಿಗಾಗಿ ಮೈಲುಗಟ್ಟಲೆ ದೂರ ಹೋಗಿ, ಕೆರೆಯ ಒದ್ದೆ ಮಣ್ಣನ್ನು ಕೈಯಿಂದ ತೋಡಿ ತೆಗೆದು, ಒಸರುವ ನೀರನ್ನು ಬೋಗಸೆಗಳಲ್ಲಿ ತುಂಬಿ ಕೊಡವನ್ನು ಭರ್ತಿ ಮಾಡಿ ತರುತ್ತಿದ್ದ ನೂರಾರು ಮನೆಗಳ ಹೆಂಗೆಳೆಯರ ಕಂಬನಿ ಈ ಕೊಡುಗೆಯ ಹಿಂದೆ ಮಡುಗಟ್ಟಿದೆ.

ಒಂದು ಕೊಡ ನೀರು ಸಿಗಲು ತಾಸುಗಟ್ಟಲೆ ಕಾಯಬೇಕು. ಅದನ್ನು ಹೊತ್ತು ಮನೆಗೆ ತರಲು ಅರ್ಧ ದಿನ ಬೇಕು. ಕೂಲಿಗೆ ಹೋಗುವಂತಿಲ್ಲ. ಬಟ್ಟೆ ಒಗೆಯಲು, ಸ್ನಾನ ಮಾಡಲು ನೀರಿಲ್ಲ. ಗಂಟಲೊಣಗದೆ ಜೀವ ಉಳಿಸಿಕೊಳ್ಳಲು ಮಾತ್ರ ಆ ನೀರು ಸಾಕಾಗುತ್ತಿತ್ತು. ಇಂತಹ ಶೋಚನೀಯ ಪರಿಸ್ಥಿತಿಯಿಂದ, ಮುಖ್ಯವಾಗಿ ಹಳ್ಳಿಯ ಮಹಿಳೆಯರನ್ನು ಮುಕ್ತಗೊಳಿಸಲು ನಜೀರ್ ಸಾಬ್ ಅವರು ಬಳಕೆಗೆ ತಂದ ಯೋಜನೆಯೊಂದರ ಸಾಫಲ್ಯ ಸಾರ್ವಜನಿಕರ ಸದ್ಬಳಕೆ ಮತ್ತು ಜವಾಬ್ದಾರಿಯಿಂದ ಮಾತ್ರ ನೆರವೇರಬಹುದು. ಆದರೆ ಹಾಗಾಗುತ್ತಿಲ್ಲ.

ವಾಚಕರ ವಾಣಿ

ದಿನಸಿ ಬೆಲೆ ನಿಯಂತ್ರಿಸಲೇಬೇಕಿದೆ

ಅಕ್ಕಿ ಸೇರಿದಂತೆ ದಿನಸಿ ಪದಾರ್ಥಗಳ ಬೆಲೆ ಜನಸಾಮಾನ್ಯರ ಕೈಗೆ ಎಟುಕದ ರೀತಿಯಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಮಳೆ ಕೊರತೆ, ಕಡಿಮೆ ಫಸಲಿನಂತಹ ಕಾರಣಗಳಿಂದ ಸ್ವಲ್ಪಮಟ್ಟಿಗೆ ಬೆಲೆ ಹೆಚ್ಚಾಗುವುದು ಸಹಜ. ಆದರೆ ಈಗ ವಿಪರೀತ ಅನ್ನಿಸುವ ಮಟ್ಟಿಗೆ ಆಗಿರುವ ಬೆಲೆ ಏರಿಕೆ ಸಹಜವೋ ಅಥವಾ ಅದರ ಹಿಂದೆ ಯಾರದಾದರೂ ಪಾತ್ರವಿದೆಯೋ ತಿಳಿಯದಾಗಿದೆ.

ಇಂದಿನ ದುಬಾರಿ ಬೆಲೆಗಳು ಆರ್ಥಿಕ ಸ್ಥಿತಿವಂತರನ್ನೂ ಆಶ್ಚರ್ಯಚಕಿತರನ್ನಾಗಿ ಮಾಡುವಷ್ಟು ನಾಗಾಲೋಟದಲ್ಲಿ ಓಡುತ್ತಿವೆ. ಇದರಿಂದಾಗಿ ಜನ ಎದುರಿಸುತ್ತಿರುವ ಸಂಕಷ್ಟದ ಪರಿಸ್ಥಿತಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅರಿಯಬೇಕು. ಅವು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸೂಕ್ತ ಕ್ರಮ ಕೈಗೊಂಡು, ಜನಸಾಮಾನ್ಯರ ಜೇಬಿನ ಹೊರೆ ಇಳಿಸಲೇಬೇಕಾಗಿದೆ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಆಕಾಶ ಮುಟ್ಟಿದವರ ದೇಶಾವರಿ ನಗೆ!

ಒಮ್ಮೆ ಶಾಸಕರಾದವರು ಪದೇಪದೇ ಆ ಸ್ಥಾನಕ್ಕೆ ಸ್ಪರ್ಧಿಸತೊಡಗಿ, ಸತತವಾಗಿ ಶಾಸಕರಾಗೇ ಉಳಿಯಬೇಕೆನ್ನುವ ಮನಃಸ್ಥಿತಿ ಬೆಳೆಸಿಕೊಳ್ಳುತ್ತಿರುವುದು ದುರದೃಷ್ಟಕರ. ಒಂದು ಪಕ್ಷವು ಯಾವುದೋ ಕಾರಣಕ್ಕಾಗಿ ಇವರಿಗೆ ಈ ಬಾರಿ ಸ್ಪರ್ಧಿಸಲು ಟಿಕೆಟ್ ಕೊಡಲಾಗದು ಎಂದು ಹೇಳಿದರೆ, ಬೇರೆಯವರ ಬದಲಿಗೆ ತಮ್ಮ ಕುಟುಂಬದವರಿಗೇ ಕೊಡಿ ಎಂದು ಎಳೆ ಮಕ್ಕಳ ಹಾಗೆ ಹಟ ಹಿಡಿದು ಕೂರುವುದು, ಇಲ್ಲವೇ ಪಕ್ಷ ತೊರೆಯುವುದಾಗಿ ಬೆದರಿಕೆ ಹಾಕುವುದು, ಇದಕ್ಕೆ ಹೆದರಿ ಪಕ್ಷ ಇವರಿಗೇ ಮಣೆ ಹಾಕುವುದು, ನಂತರ ಇವರು ಒಂದು ರೀತಿಯ ದೇಶಾವರಿ ನಗೆ ಬೀರುವುದು ಸರ್ವೇಸಾಮಾನ್ಯವಾಗಿದೆ.

ನಮ್ಮ ವಿಧಾನಸಭೆಯಲ್ಲೇ ಎರಡಕ್ಕಿಂತ ಹೆಚ್ಚು ಬಾರಿ ಶಾಸಕರಾಗಿರುವವರು ಬಹಳಷ್ಟು ಮಂದಿ ಇದ್ದಾರೆ. ಕೆಲವರಂತೂ ಏಳೆಂಟು ಬಾರಿ ಶಾಸಕರಾಗಿ, ನೀಲಗಿರಿ ಮರದಂತೆ ಬೆಳೆದು ಆಕಾಶವನ್ನು ಮುಟ್ಟಿರುವರಲ್ಲದೆ, ಅದರಡಿ ಯಾವ ಗಿಡವೂ ಬೆಳೆಯದಂತೆ ನೋಡಿಕೊಳ್ಳುತ್ತಿದ್ದಾರೆ. ಒಂದಿಷ್ಟು ಕುರುಚಲು ಗಿಡಗಳು ಬೆಳೆದರೆ ಹೆಚ್ಚು. ಈ ನಡುವೆ ತಮ್ಮ ವಯೋಮಾನ ಏರುತ್ತಿದ್ದರೂ ಯುವಕರಿಗೆ, ಹೊಸಬರಿಗೆ ಅಧಿಕಾರ ಬಿಟ್ಟುಕೊಡಲು ಮಾತ್ರ ಒಲ್ಲರು. ಹೀಗಾದರೆ ಪಕ್ಷಗಳಲ್ಲಿ ಎರಡು ಮತ್ತು ಮೂರನೇ ಹಂತದ ನಾಯಕರು ರೂಪುಗೊಳ್ಳುವುದಾದರೂ ಹೇಗೆ? ಪಕ್ಷಗಳು ಬೆಳೆಯುವುದಾದರೂ ಹೇಗೆ? ಈ ಬೆಳವಣಿಗೆಯು ರಾಜರ ಆಳ್ವಿಕೆಯನ್ನೂ ಪಾಳೆಗಾರಿಕೆ ವ್ಯವಸ್ಥೆಯನ್ನೂ ನೆನಪಿಗೆ ತರುತ್ತದೆ. ರಾಜಕೀಯ ಪಕ್ಷಗಳು ಇನ್ನಾದರೂ ಬದಲಾಗಲಿ.

ರಮೇಶ್, ಬೆಂಗಳೂರು

ಪಾಠದ ಮೌಲ್ಯ ಎಲ್ಲಿ ಹೋಯಿತು?

ನಾನು ಇತ್ತೀಚೆಗೆ ಒಂದು ಮದುವೆಗೆ ಹೋಗಿದ್ದೆ. ಅಲ್ಲಿ ಕುಡಿಯುವ ನೀರಿಗೆಂದು ಶುದ್ಧೀಕರಿಸಿದ ನೀರಿರುವ ಪ್ಲಾಸ್ಟಿಕ್ ಬಾಟಲಿಗಳನ್ನು ಕೊಡುತ್ತಿದ್ದರು. ಆದರೆ ಎಷ್ಟೋ ಜನ ಅದರಲ್ಲಿನ ಅರ್ಧ ಭಾಗ ಮಾತ್ರ ಕುಡಿದು ಉಳಿದರ್ಧ ನೀರನ್ನು ಹಾಗೆಯೇ ಬಾಟಲಿನಲ್ಲಿ ಬಿಟ್ಟು ಹೋಗುತ್ತಿದ್ದುದನ್ನು ನೋಡಿ ಬೇಸರವಾಯಿತು. ಊಟದ ಪಂಕ್ತಿಯಲ್ಲಿ ಹತ್ತಾರು ಬಾಟಲಿಗಳಲ್ಲಿ ಇದೇ ಸ್ಥಿತಿ ಇತ್ತು. ಕೆಲವರಿಗೆ ಹೇಳಿದರೂ ಕೇಳುವಷ್ಟು ವ್ಯವಧಾನ, ಆಸಕ್ತಿ ಇರಲಿಲ್ಲ. ಇದರಿಂದಾಗಿ ಪ್ಲಾಸ್ಟಿಕ್ ಬಾಟಲಿಗಳ ಜೊತೆಗೆ ಶುದ್ಧೀಕರಿಸಿದ ನೀರು ಸಹ ಪೋಲಾಗುತ್ತಿತ್ತು. ಆ ಬಾಟಲಿ ತಯಾರಿಕೆಗೆ, ನೀರಿನ ಶುದ್ಧೀಕರಣಕ್ಕೆ ಬಳಸಿದ ವಿದ್ಯುತ್ ವ್ಯರ್ಥವಾಯಿತಲ್ಲವೇ? ನೀರಿರುವ ಬಾಟಲಿಯನ್ನು ಕೊಂಡೊಯ್ದಿದ್ದರೆ ಮತ್ತೆ ಬಾಯಾರಿಕೆಯಾದಾಗ ಕುಡಿಯಬಹುದಿತ್ತಲ್ಲವೇ?

‘ಉಳಿಸಿದ ಒಂದು ಯೂನಿಟ್ ವಿದ್ಯುತ್, ತಯಾರಿಸಿದ ನೂರು ಯೂನಿಟ್ ವಿದ್ಯುತ್‌ಗೆ ಸಮ’ ಎಂಬ ಮಾತು ಇಂಥವರ ಅರಿವಿಗೆ ಬಂದಿಲ್ಲವೇನೊ? ಮದುವೆಗೆ ಬಂದಿದ್ದವರಲ್ಲಿ ಬಹಳಷ್ಟು ಜನ ವಿದ್ಯಾವಂತರೇ ಆಗಿದ್ದರು. ಹಾಗಾದರೆ ಆ ವಿದ್ಯೆ ಇವರಿಗೆ ಕಲಿಸಿದ್ದೇನು? ಪ್ರಾಥಮಿಕ ಶಿಕ್ಷಣದಿಂದ ಪದವಿವರೆಗೂ ಪರಿಸರದ ಬಗ್ಗೆ ಮಾಡಿದ ಭಾಷಣ, ಪಾಠದ ಮೌಲ್ಯ ಎಲ್ಲಿ ಹೋಯಿತು? ಬರೀ ಅಂಕಕ್ಕೆ, ಪದವಿ ಪ್ರಮಾಣಪತ್ರಕ್ಕೆ ಸೀಮಿತವಾದವೇ? ಇದೇ ರೀತಿ ಆಗುತ್ತಾ ಹೋದರೆ ನಮ್ಮ ಪರಿಸರದ ಕಥೆಯೇನು? ಇನ್ನು ಮುಂದಾದರೂ ಇಂತಹ ವಿಷಯಗಳಲ್ಲಿ ಸೂಕ್ತವಾಗಿ ವರ್ತಿಸಿ, ಸಂಪನ್ಮೂಲಗಳನ್ನು ಉಳಿಸುವತ್ತ ಗಮನಹರಿಸೋಣ.

ಬಸವನಗೌಡ, ಹೆಬ್ಬಳಗೆರೆ

ಅಸಮರ್ಪಕ ಸಮೀಕ್ಷೆ: ಮತ್ತೊಮ್ಮೆ ದೃಢ

ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶವನ್ನು ನೋಡಿದರೆ, ಮತಗಟ್ಟೆ ಸಮೀಕ್ಷೆಗಳು ಸರಿಯಾದ ಚಿತ್ರಣ ನೀಡುವುದಿಲ್ಲ ಎನ್ನುವುದು ಮತ್ತೊಮ್ಮೆ ದೃಢಪಡುತ್ತದೆ. ತೆಲಂಗಾಣದಲ್ಲಿ ಕಾಂಗ್ರೆಸ್‌ನ ಗ್ಯಾರಂಟಿಗಳು ಫಲ ನೀಡಿರುವುದು ಅನಿರೀಕ್ಷಿತವೇನಲ್ಲ. ಪಕ್ಕದ ಕರ್ನಾಟಕದಲ್ಲಿ ಜಾರಿ ಮಾಡಿದ ಗ್ಯಾರಂಟಿಗಳು ತೆಲಂಗಾಣದ ಮತದಾರರ ಮೇಲೆ ಪ್ರಭಾವ ಬೀರಿರುವ ಸಾಧ್ಯತೆ ಇದೆ. ಇಲ್ಲದಿದ್ದರೆ ಅಲ್ಲಿ ಬಿಆರ್‌ಎಸ್ ಪಕ್ಷವೇ ಅಧಿಕಾರಕ್ಕೆ ಬರುತ್ತಿತ್ತು. ಬಿಆರ್‌ಎಸ್ ಸೋಲಲು ಅನೇಕ ಕಾರಣಗಳಿರಬಹುದು. ಕರ್ನಾಟಕದ ಅನೇಕ ಸಚಿವರು ತೆಲಂಗಾಣ ಚುನಾವಣಾ ಪ್ರಚಾರದಲ್ಲಿ ತೊಡಗಿಕೊಂಡಿದ್ದು ಕೂಡ ಪರಿಣಾಮ ಬೀರಿರಬಹುದು.

ಲೋಕಸಭಾ ಚುನಾವಣೆಯ ದಿಕ್ಸೂಚಿ ಎಂದೇ ಪರಿಗಣಿತವಾಗಿದ್ದ ಈ ಫಲಿತಾಂಶ ಈಗ ಪಕ್ಷಗಳು ಮುಂದಿನ ಚುನಾವಣೆಗೆ ತಯಾರಾಗಲು ಹಾಗೂ ಆತ್ಮಾವಲೋಕನ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.

ಮುಳ್ಳೂರು ಪ್ರಕಾಶ್, ಮೈಸೂರು


ಕ್ರೂರ ಮೃಗಗಳೂ ಹಿಂಜರಿಯುತ್ತಿದ್ದವು...


ಗಂಗಾವತಿ ನಗರದಲ್ಲಿ ಇತ್ತೀಚೆಗೆ ಮುಸ್ಲಿಂ ಸಮುದಾಯದ ಅಂಧ ವೃದ್ಧರೊಬ್ಬರಿಗೆ ‘ಜೈ ಶ್ರೀರಾಮ್’ ಎಂದು ಘೋಷಣೆ ಕೂಗುವಂತೆ ದುಷ್ಕರ್ಮಿಗಳ ಗುಂಪು ಒತ್ತಡ ಹಾಕಿ, ಹಲ್ಲೆ ನಡೆಸಿರುವುದು (ಪ್ರ.ವಾ., ಡಿ. 2) ಅತ್ಯಂತ ಹೀನಕೃತ್ಯ. ಅಂಧರೂ ವೃದ್ಧರೂ ಆದ, ಅಸಹಾಯಕತೆಯೇ ಮೂರ್ತಿವೆತ್ತಂತಿರುವ ಆ ಹಿರಿಯರನ್ನು, ಕ್ರೂರ ಮೃಗಗಳೇನಾದರೂ ನೋಡಿದ್ದರೆ, ಅವು ಖಂಡಿತ ಅವರ ಮೇಲೆ ಆಕ್ರಮಣ ಮಾಡುತ್ತಿರಲಿಲ್ಲ. ಇಂಥ ಹೇಯಕೃತ್ಯ ಮಾಡುವುದಕ್ಕೆ ಹಿಂಜರಿಯುತ್ತಿದ್ದವು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಷ್ಟ್ರ ರಾಜಕಾರಣ: ಪ್ರದೇಶವಾರು ಸಮೀಕರಣ





ಆಧಾರ: ಚುನಾವಣಾ ಆಯೋಗ

ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶವು, ದೇಶದ ರಾಜಕಾರಣದಲ್ಲಿನ ಪ್ರದೇಶವಾರು ಸಮೀಕರಣವನ್ನು ಮತ್ತಷ್ಟು ನಿಚ್ಚಳಗೊಳಿಸಿದೆ. ಮಧ್ಯ ಭಾರತ, ಉತ್ತರ ಭಾರತದ ಕೆಲವು ರಾಜ್ಯಗಳು ಮತ್ತು ಪಶ್ಚಿಮದ ರಾಜ್ಯಗಳಲ್ಲಿ ಈಗ ಬಿಜೆಪಿ ಅಧಿಕಾರದಲ್ಲಿದೆ. ಇಲ್ಲಿ ಬಿಜೆಪಿಯೇ ಅತ್ಯಂತ ಪ್ರಬಲ ಪಕ್ಷ ಎನಿಸಿದೆ. ಈ ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇಲ್ಲದಿದ್ದರೂ, ಬಿಜೆಪಿಗೆ ಪೈಪೋಟಿ ನೀಡುವ ಸಾಮರ್ಥ್ಯವಿರುವ ಮತ್ತು ಅತ್ಯಂತ ದೊಡ್ಡ ವಿರೋಧ ಪಕ್ಷ ಎನಿಸಿದೆ.

ದಕ್ಷಿಣ ಮತ್ತು ಪೂರ್ವದ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳದ್ದೇ ಪ್ರಾಬಲ್ಯ. ಕರ್ನಾಟಕದಲ್ಲಷ್ಟೇ ಉತ್ತಮ ನೆಲೆ ಹೊಂದಿದ್ದ ಕಾಂಗ್ರೆಸ್ ಈಗ, ಪ್ರಾದೇಶಿಕ ಪಕ್ಷವಾದ ಬಿಆರ್‌ಎಸ್ ಅನ್ನು ತೆಲಂಗಾಣದಲ್ಲಿ ಅಧಿಕಾರದಿಂದ ಹೊರದಬ್ಬಿದೆ. ಬಿಹಾರದಲ್ಲಿ ಜೆಡಿಯು ಮತ್ತು ಆರ್‌ಜೆಡಿ, ಜಾರ್ಖಂಡ್‌ನಲ್ಲಿ ಜೆಎಂಎಂ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ, ಆಂಧ್ರಪ್ರದೇಶದಲ್ಲಿ ವೈಎಸ್‌ಆರ್ ಕಾಂಗ್ರೆಸ್, ಒಡಿಶಾದಲ್ಲಿ ಬಿಜೆಡಿ, ತಮಿಳುನಾಡಿನಲ್ಲಿ ಡಿಎಂಕೆ ಅಧಿಕಾರದಲ್ಲಿವೆ. ಕೇರಳದಲ್ಲಿ ಎಡಪಕ್ಷಗಳ ಎಲ್‌ಡಿಎಫ್ ಸರ್ಕಾರವಿದೆ.

ಈ ಹೊತ್ತಿನ ರಾಜಕಾರಣದಲ್ಲಿ ಪ್ರಾದೇಶಿಕ ಪಕ್ಷಗಳು ಇರುವ ರಾಜ್ಯಗಳಲ್ಲಿ ಅವು ಸ್ವತಂತ್ರವಾಗಿ ಅಥವಾ ಮೈತ್ರಿಕೂಟದ ಭಾಗವಾಗಿ ಅಧಿಕಾರದಲ್ಲಿವೆ. ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯವಿಲ್ಲದ ಮತ್ತು ಪ್ರಾದೇಶಿಕ ಪಕ್ಷಗಳು ಪ್ರಾಬಲ್ಯ ಕಳೆದುಕೊಂಡ (ಉತ್ತರ ಪ್ರದೇಶ) ರಾಜ್ಯಗಳಲ್ಲಿ ಬಿಜೆಪಿ ಈಗ ಮೇಲುಗೈ ಸಾಧಿಸಿದೆ.



ಪ್ರಜಾಪ್ರಭುತ್ವದಲ್ಲಿ ಸೋಲು-ಗೆಲುವು ಸ್ವಾಭಾವಿಕ. ಪ್ರತಿಯೊಂದು ಚುನಾವಣಾ ಫಲಿತಾಂಶದಲ್ಲಿ ರಾಜಕೀಯ ಪಕ್ಷಗಳು ಕಲಿಯುವ ಪಾಠ ಇದೆ. ನಾವು ಸೋಲಿನಿಂದ ಕುಗ್ಗುವುದಿಲ್ಲ, ಗೆಲುವಿನಿಂದ ಹಿಗ್ಗುವುದಿಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ



ಗ್ಯಾರಂಟಿ ಯೋಜನೆಗಳಿಂದ ಬೇಸತ್ತಿರುವ ಜನರು ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ರಾಜ್ಯದಲ್ಲಿ ಸೋಲಿಸಲಿದ್ದಾರೆ. ಬಿಜೆಪಿ ಜಯಭೇರಿ ಬಾರಿಸಲಿದೆ

ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಬಿಜೆಪಿಗೆ ಹುಮ್ಮಸ್ಸು: ಕಾಂಗ್ರೆಸ್‌ಗೆ ಸವಾಲು

ಲೋಕಸಭೆ ಚುನಾವಣೆಯಲ್ಲಿ 'ಗ್ಯಾರಂಟಿ' ಕೈ ಹಿಡಿಯದೆಂಬ ಎಚ್ಚರಿಕೆ ಗಂಟೆ

● ವೈ.ಗ. ಜಗದೀಶ್

ಬೆಂಗಳೂರು: ನಾಲ್ಕು ರಾಜ್ಯಗಳ ವಿಧಾನಸಭಾ ಫಲಿತಾಂಶ ಕರ್ನಾಟಕದ ಬಿಜೆಪಿ ಘಟಕಕ್ಕೆ ಹೊಸ ಹುಮ್ಮಸು ತಂದಿದ್ದು, ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಪ್ರಬಲ ಹೋರಾಟ ರೂಪಿಸಲು ಚೈತನ್ಯ ನೀಡಿದೆ. ಅದೇ ಹೊತ್ತಿಗೆ, 'ಗ್ಯಾರಂಟಿ'ಗಳೇ ಗೆಲುವಿನ ದಡ ಸೇರಿಸುತ್ತವೆ ಎಂಬ ನಂಬಿಕೆ ಹುಸಿಯಾಗಿದ್ದು, ಭಿನ್ನಮತ ಮರೆತು ಮೈಕೊಡವಿ ನಿಲ್ಲದಿದ್ದರೆ ಲೋಕಸಭೆ ಚುನಾವಣೆಯಲ್ಲಿ ಎರಡಂಕಿ ಮುಟ್ಟುವುದು ಕಷ್ಟ ಎಂಬ ಎಚ್ಚರಿಕೆಯನ್ನೂ ಕಾಂಗ್ರೆಸ್‌ಗೆ ನೀಡಿದೆ.

ಫಲಿತಾಂಶ ಹೊರಬಿದ್ದ ನಾಲ್ಕು ರಾಜ್ಯಗಳ ಪೈಕಿ ಒಂದು ಕಡೆ ಅಧಿಕಾರ ದಕ್ಕಿಸಿಕೊಂಡರೂ ಎರಡು ಕಡೆ ಅಧಿಕಾರ ಕಳೆದುಕೊಂಡಿರುವ ಕಾಂಗ್ರೆಸ್‌ಗೆ ಈ ಚುನಾವಣೆ ಪಾಠವಾಗಿದೆ. ಕರ್ನಾಟಕದಲ್ಲಿ 'ಗ್ಯಾರಂಟಿ' ಘೋಷಣೆಯಿಂದ ಅಧಿಕಾರಕ್ಕೆ ಬಂದೆವು ಎಂಬ ಹಮ್ಮಿನಲ್ಲಿದ್ದ ಕಾಂಗ್ರೆಸ್ ಹೈಕಮಾಂಡ್, ಮಧ್ಯಪ್ರದೇಶ, ರಾಜಸ್ತಾನ ಹಾಗೂ ತೆಲಂಗಾಣದಲ್ಲಿ ಇದೇ ಪ್ರಯೋಗ ಮಾಡಿತು. ಅದಕ್ಕೆ, ಸವ್ವಾಸೇರು ಹಾಕುವ ರೀತಿಯೊಳಗೆ ಬಿಜೆಪಿ ಕೂಡ ಉಚಿತ ಕೊಡುಗೆಗಳನ್ನು ಪ್ರಕಟಿಸಿತು. ಗ್ಯಾರಂಟಿಯ ಹಾಯಿದೋಣಿಯಲ್ಲಿ ಜನ ತಮ್ಮನ್ನು ವಿಜಯದ ಅಂಚಿಗೆ ದೂಡುತ್ತಾರೆ ಎಂಬ ಲೆಕ್ಕಾಚಾರವೂ ಕಾಂಗ್ರೆಸ್‌ಗೆ ಇತ್ತು. ಫಲಿತಾಂಶ ನೋಡಿದರೆ, ಗ್ಯಾರಂಟಿಗಳಿಂತ ಎರಡು ರಾಜ್ಯಗಳಲ್ಲಿ ಆಡಳಿತ ವಿರೋಧಿ ಅಲೆ, ಮತ್ತೆರಡು ರಾಜ್ಯಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು, ಚುನಾವಣೆ ಸಂದರ್ಭದಲ್ಲಿ ಅವರು ಮುಂದಿಟ್ಟ ವಿಚಾರಗಳು ಫಲಿತಾಂಶದ ಮೇಲೆ ಪ್ರಭಾವ ಬೀರಿದವು.

ತೆಲಂಗಾಣದಲ್ಲಿ ಗ್ಯಾರಂಟಿಗಳೇ ಕೈ ಹಿಡಿದವು ಎಂದು ಕಾಂಗ್ರೆಸ್ ನಾಯಕರು ವಾದಿಸಬಹುದು. ಆದರೆ, ಅಲ್ಲಿ ಹತ್ತು ವರ್ಷ ಆಳಿದ ಕೆ.ಚಂದ್ರಶೇಖರ ರಾವ್ ಹಾಗೂ ಅವರ ಮಗ ಕೆ.ಟಿ. ರಾಮರಾವ್ ಆಡಳಿತ ವಿರೋಧಿ ಅಲೆಯೇ, ಕಾಂಗ್ರೆಸ್‌ಗೆ ಅಧಿಕಾರವನ್ನು ಕೊಟ್ಟಿದೆ. ಗ್ಯಾರಂಟಿಯೇ ಕೈ ಹಿಡಿದಿದ್ದರೆ ರಾಜಸ್ಥಾನ, ಮಧ್ಯಪ್ರದೇಶದಲ್ಲೂ ಇದೇ ಫಲಿತಾಂಶ ಕಾಣಬೇಕಿತ್ತು.



ನಾಲ್ಕು ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಯು ಮೂರರಲ್ಲಿ ಅಧಿಕಾರಕ್ಕೆ ಏರಿದ ಕಾರಣ ನವದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪಕ್ಷದ ಕಾರ್ಯಕರ್ತರೊಬ್ಬರು ಶಂಖ ಊದಿ ಸಂಭ್ರಮಿಸಿದರು –ಪಿಟಿಐ ಚಿತ್ರ

ಉತ್ತರದಲ್ಲಿನ ಬಿಜೆಪಿಯ ವಿಜಯದುಂಧುಬಿ ಕರ್ನಾಟಕದ ಕಮಲ ಪಡೆಯಲ್ಲಿನ ಉತ್ಸಾಹವನ್ನು ಇಮ್ಮಡಿಸಿದೆ. ವಿಧಾನಸಭೆ ಚುನಾವಣೆಯಲ್ಲಿ ಸೋತು, ಮೂಲೆ ಸೇರಿದ್ದ ಕೇಸರಿ ಪಾಳೆಯಕ್ಕೆ, ಈ ಗೆಲುವು ಹೊಸ ಶಕ್ತಿ ತಂದುಕೊಡಲಿದೆ.

ಪಕ್ಷದ ಆಂತರಿಕ ಕಚ್ಚಾಟ, ಅವಮಾನದ ಜತೆಗೆ ಬಿಜೆಪಿಗೆ ಭವಿಷ್ಯವಿಲ್ಲ ಎಂಬ ತರ್ಕಕ್ಕೆ ಬಿದ್ದಿದ್ದ ಕೆಲವು ನಾಯಕರು, ಕಾಂಗ್ರೆಸ್‌ನ ಕದ ತಟ್ಟಿದ್ದರು. ಹಾಲಿ ಶಾಸಕರು, ಮಾಜಿ ಸಚಿವರು ಈ ಯಾದಿಯಲ್ಲಿದ್ದರು. ಇವರೆಲ್ಲರನ್ನೂ 'ಆಪರೇಷನ್ ಹಸ್ತ'ದೊಳಗೆ ತರಲು ಕಾಂಗ್ರೆಸ್ ನಾಯಕರು ಹವಣಿಸಿದ್ದರು. ಬಿ.ವೈ. ವಿಜಯೇಂದ್ರ ಅಧ್ಯಕ್ಷರಾಗಿರುವುದು ಹಾಗೂ ಉತ್ತರದ ಭರ್ಜರಿ ವಿಜಯವು ಈ ನಾಯಕರನ್ನು ಪಕ್ಷದಲ್ಲೇ ಉಳಿಯುವಂತೆ ಮಾಡುವ ಸಾಧ್ಯತೆ ಹೆಚ್ಚಿದೆ. ಡಿಸೆಂಬರ್ 10ರ ಹೊತ್ತಿಗೆ ನಿಲುವು ಪ್ರಕಟಿಸುವುದಾಗಿ ಹೇಳಿದ್ದ ವಿ. ಸೋಮಣ್ಣ ಕೂಡ ತಮ್ಮ ನಡೆಯಿಂದ ಹಿಂದೆ ಸರಿಯುವ ಸಾಧ್ಯತೆ ಇದೆ. ಲೋಕಸಭೆ ಚುನಾವಣೆ ವೇಳೆಗೆ 'ಆಪರೇಷನ್ ಹಸ್ತ' ಬಿರುಸುಗೊಳಿಸುವ ತಂತ್ರಗಾರಿಕೆ ರೂಪಿಸಿದ್ದ ಕಾಂಗ್ರೆಸ್ ನಾಯಕರು, ಈಗ ತಮ್ಮ ಬುಡವನ್ನೇ ಭದ್ರ ಮಾಡಿಕೊಳ್ಳಬೇಕಾದ ಸನ್ನಿವೇಶ ಸೃಷ್ಟಿಯಾಗಬಹುದಾದ ಪರಿಣಾಮವನ್ನು ಫಲಿತಾಂಶ ಮಾಡಿದೆ.

ಪ್ರಾದೇಶಿಕ ವಿಚಾರ ಹಾಗೂ ಸ್ಥಳೀಯ ನಾಯಕತ್ವಕ್ಕೆ ಆದ್ಯತೆ ನೀಡದೇ ಈ ಚುನಾವಣೆಯನ್ನು ಬಿಜೆಪಿ ಎದುರಿಸಿತು. ಕರ್ನಾಟಕದಲ್ಲಿ ಸೋತ ಬಳಿಕ, ಬಿ.ಎಸ್. ಯಡಿಯೂರಪ್ಪ ಅವರ ಹಟಕ್ಕೆ ಮಣಿದಿದ್ದ ಆ ಪಕ್ಷದ ವರಿಷ್ಠರು, ವಿಜಯೇಂದ್ರಗೆ ಅಧ್ಯಕ್ಷ ಸ್ಥಾನ ಬಿಟ್ಟುಕೊಟ್ಟಿದ್ದರು. ಪ್ರಾದೇಶಿಕ ನಾಯಕತ್ವ ಅನಿವಾರ್ಯ ಎಂಬುದನ್ನು ಒಪ್ಪಿಕೊಂಡ ರೀತಿಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿತ್ತು. ಉತ್ತರ ಫಲಿತಾಂಶ ನೋಡಿದರೆ, ಪ್ರಾದೇಶಿಕ ನಾಯಕತ್ವಕ್ಕಿಂತ ಪ್ರಧಾನಿ ಮೋದಿ ಪ್ರಭಾವಳಿ ಹಾಗೂ ಹಿಂದುತ್ವದ ರಾಜಕಾರಣ, ಕೋಮುವಾದ ಧ್ರುವೀಕರಣಕ್ಕೆ ಗೆಲುವು ಸಿಕ್ಕಂತೆ ಆಗಿದೆ. ಹೀಗಾಗಿ, ಲೋಕಸಭೆ ಚುನಾವಣೆ ಬಳಿಕ, ಕರ್ನಾಟಕ ಘಟಕದ ಬದಲಾವಣೆಗೂ ಇದು ದಾರಿ ಮಾಡಿಕೊಟ್ಟರೆ ಅಚ್ಚರಿಯೇನೂ ಇಲ್ಲ.

ಜೆಡಿಎಸ್‌ಗೂ ಆದ್ಯತೆ ಕಡಿಮೆ

ಪ್ರಾದೇಶಿಕ ನಾಯಕತ್ವ ಅಥವಾ ಪಕ್ಷಗಳ ನೆರವಿಲ್ಲದೇ ಮೂರು ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ಲೋಕಸಭೆ ಚುನಾವಣೆಯಲ್ಲಿ ಮರಳಿ ಅಧಿಕಾರ ಹಿಡಿಯಬೇಕೆಂಬ ತವಕದಲ್ಲಿ ಕರ್ನಾಟಕದಲ್ಲಿ ಜೆಡಿಎಸ್ ಜತೆಗೆ ಮೈತ್ರಿಗೆ ಬಿಜೆಪಿ ಮುಂದಡಿ ಇಟ್ಟಿತ್ತು.

ಉತ್ತರದ ಮೂರು ರಾಜ್ಯಗಳಲ್ಲಿ ಇಂತಹ ಯಾವುದೇ ಹಂಗಿಲ್ಲದೇ ಭರ್ಜರಿ ಗೆಲುವನ್ನು ದಕ್ಕಿಸಿಕೊಂಡಿರುವ ಬಿಜೆಪಿ, ಲೋಕಸಭೆ ಚುನಾವಣೆ ಬಳಿಕ ಜೆಡಿಎಸ್ ನಾಯಕರ ಹಂಗನ್ನು ತೊರೆಯಬಹುದಾದ ದಾರಿಯನ್ನು ಇದು ನಿಚ್ಚಳ ಗೊಳಿಸಿದೆ. ಯಾರ ಊರುಗೋಲು ಇಲ್ಲದೇ ವಿಜಯ ಕೈಹಿಡಿಯಬಹುದೆಂಬುದನ್ನು ಈ ಚುನಾವಣೆ ಬಿಜೆಪಿಗೆ ತೋರಿಸಿಕೊಟ್ಟಿದ್ದು, ಇದರ ಪರಿಣಾಮ ಜೆಡಿಎಸ್ ಈಗ ಸಿಕ್ಕಿರುವ ಆದ್ಯತೆ ಕಡಿಮೆಯಾಗಲೂ ಬಹುದು.

ಗೆದ್ದ ಸಂಸದರು 14 ದಿನದೊಳಗೆ ರಾಜೀನಾಮೆ ನೀಡಬೇಕು

ನವದೆಹಲಿ (ಪಿಟಿಐ): ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿರುವ ಸಂಸದರು ಮುಂದಿನ 14 ದಿನಗಳಲ್ಲಿ ಅವರ ಸಂಸದ ಸ್ಥಾನ ಅಥವಾ ಶಾಸಕ ಸ್ಥಾನವನ್ನು ತೊರೆಯಬೇಕು. ಇಲ್ಲದಿದ್ದರೆ ಅವರು ತಮ್ಮ ಸಂಸತ್ ಸದಸ್ಯತ್ವವನ್ನು ಕಳೆದುಕೊಳ್ಳಲಿದ್ದಾರೆ ಎಂದು ಸಂವಿಧಾನದಲ್ಲಿ ನೀಡಲಾಗಿರುವ ಅವಕಾಶದ ಆಧಾರದಲ್ಲಿ ತಜ್ಞರೊಬ್ಬರು ತಿಳಿಸಿದ್ದಾರೆ.

ಕೇಂದ್ರ ಸಚಿವರೂ ಸೇರಿ 21 ಸಂಸದರನ್ನು ಬಿಜೆಪಿ ಕಣಕ್ಕಿಳಿಸಿತ್ತು. ಅವರಲ್ಲಿ ತಲಾ ಏಳು ಮಂದಿ ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಕಣಕ್ಕಿಳಿದಿದ್ದರು. ಛತ್ತೀಸಗಢದಲ್ಲಿ ನಾಲ್ವರು ಮತ್ತು ತೆಲಂಗಾಣದಲ್ಲಿ ಮೂರು ಸಂಸದರು ಕಣಕ್ಕಿಳಿದಿದ್ದರು. 14 ದಿನದೊಳಗೆ ರಾಜೀನಾಮೆ ನೀಡದ ಸಂಸದರು ಸಂವಿಧಾನದ ವಿಧಿ 101ರ 'ಬಹುಸದಸ್ಯತ್ವ ತಡೆ ನೀತಿ' ಅಡಿ ಸಂಸತ್ ಸದಸ್ಯತ್ವ ಕಳೆದುಕೊಳ್ಳುತ್ತಾರೆ ಎಂದು ಲೋಕಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಪಿ.ಡಿ.ಟಿ. ಆಚಾರಿ ತಿಳಿಸಿದ್ದಾರೆ.

ಸಿದ್ದರಾಮಯ್ಯ, ಡಿಕೆಶಿ 'ಪ್ರಚಾರ–ಸಂಪನ್ಮೂಲ'ದ ಫಲ

ತೆಲಂಗಾಣ: ರಾಜ್ಯ ನಾಯಕರ ಶ್ರಮ

● ರಾಜೇಶ ರೈ ಚಟ್ಲ

ಬೆಂಗಳೂರು: ನೆರೆ ರಾಜ್ಯ ತೆಲಂಗಾಣದ ಮತದಾರರು ಕಾಂಗ್ರೆಸ್ ಪಕ್ಷವನ್ನು ಅಧಿಕಾರದ ಗದ್ದುಗೆ ಏರಿಸಿರುವುದರ ಹಿಂದೆ, ಕರ್ನಾಟಕದ 'ಕೈ' ನಾಯಕರ ಪರಿಶ್ರಮ ಹಾಗೂ ಇಲ್ಲಿ ಜಾರಿ ಮಾಡಿರುವ 'ಗ್ಯಾರಂಟಿ'ಗಳ ಪರಿಣಾಮ ಎದ್ದು ಕಾಣಿಸುತ್ತಿದೆ.

ಕಾಂಗ್ರೆಸ್‌ಗೆ ಅಷ್ಟಾಗಿ ನೆಲೆ ಇಲ್ಲದಂತಹ ಪರಿಸ್ಥಿತಿಯಲ್ಲಿ ತೆಲಂಗಾಣಕ್ಕೆ ನುಗ್ಗಿದ ಪಕ್ಷದ ರಾಜ್ಯ ನಾಯಕರ ದಂಡು, ಅಲ್ಲಿ 'ಕೈ' ಮೇಲಾಗುವಂತೆ ಮಾಡಿದೆ.

ಪಕ್ಷದ ವರಿಷ್ಠರ ನಿರ್ದೇಶನದಂತೆ, ಟಿಪಿಸಿಸಿ ಅಧ್ಯಕ್ಷ ರೇವಂತ್ ರೆಡ್ಡಿ ಬೆನ್ನಿಗೆ ನಿಂತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ರಾಜ್ಯ ಕಾಂಗ್ರೆಸ್ ಘಟಕ ರೂಪಿಸಿದ್ದ ತಂತ್ರಗಾರಿಕೆ ಫಲ ನೀಡಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅನುಷ್ಠಾನಗೊಳಿಸಿರುವ 'ಗ್ಯಾರಂಟಿ' ಯೋಜನೆಗಳ ಕುರಿತು ತೆಲಂಗಾಣದ ದಿನಪತ್ರಿಕೆಗಳಲ್ಲಿ ನೀಡಿದ ಜಾಹೀರಾತುಗಳು ಅಲ್ಲಿನ ಜನರನ್ನು ಸೆಳೆಯುವಲ್ಲಿ ಕೆಲಸ ಮಾಡಿವೆ ಎಂದೂ ಹೇಳಲಾಗುತ್ತಿದೆ. ಹೀಗೆ, ಜಾಹೀರಾತು ಕೊಟ್ಟಿರುವುದಕ್ಕೆ ಚುನಾವಣಾ ಆಯೋಗ ಕರ್ನಾಟಕ ಸರ್ಕಾರಕ್ಕೆ ನೋಟಿಸ್ ನೀಡಿರುವುದನ್ನು ಗಮನಿಸಿದರೆ, ಅದರ ಪ್ರಭಾವವನ್ನು ಅಲ್ಲಗಳೆಯಲಾಗದು. ರಾಜ್ಯ ನಾಯಕರ ಸಂಪನ್ಮೂಲ, ಪ್ರಚಾರ ಹಾಗೂ 'ಸರ್ಕಾರ'ದ ಹೆಸರಿನಲ್ಲಿ ಖರ್ಚು ಮಾಡಿದ ಜನರ ದುಡ್ಡು ಸಹ ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಏರಲು ಪರೋಕ್ಷವಾಗಿ ನೆರವು ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಸತಿ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ಅವರು



ತೆಲಂಗಾಣದಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದ್ದರಿಂದ ಹೈದರಾಬಾದ್‌ನಲ್ಲಿ ಪಕ್ಷದ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು –ಪಿಟಿಐ ಚಿತ್ರ

ತೆಲಂಗಾಣದಲ್ಲಿ ನಡೆಸಿದ ಪ್ರಚಾರವೂ ಕಾಂಗ್ರೆಸ್ ಕೈ ಹಿಡಿದಿದೆ. ವರಿಷ್ಠರ ಸೂಚನೆ ಮೇರೆಗೆ, ಮೂರು ಹಂತಗಳಲ್ಲಿ ರೂಪಿಸಿದ ಕಾರ್ಯ ಯೋಜನೆಯೂ ಫಲ ಕೊಟ್ಟಿದೆ.

ತೆಲಂಗಾಣ ಕಾಂಗ್ರೆಸ್ ಉಸ್ತುವಾರಿಯಾಗಿರುವ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು, ಮುಖಂಡರಾದ ಮನ್ಸೂರ್ ಖಾನ್, ಪ್ರಕಾಶ ರಾಥೋಡ್ ಅವರು ತೆಲಂಗಾಣಕ್ಕೆ ತೆರಳಿ ತಳಮಟ್ಟದಲ್ಲಿ ಕೆಲಸ ಆರಂಭಿಸಿದ್ದರು. ಚುನಾವಣೆ ಸಮೀಪಿಸುತ್ತಿದ್ದಂತೆ ಕೆಲವು ಸಚಿವರನ್ನು ವರಿಷ್ಠರು ಆ ರಾಜ್ಯಕ್ಕೆ ಕಳುಹಿಸಿದರು. ಜಮೀರ್ ಅಹಮದ್ ಖಾನ್, ಡಾ. ಎಂ.ಸಿ. ಸುಧಾಕರ್, ದಿನೇಶ್ ಗುಂಡೂರಾವ್, ಕೆ.ಎಚ್. ಮುನಿಯಪ್ಪ, ಸಂತೋಷ್ ಲಾಡ್, ಬಿ. ನಾಗೇಂದ್ರ, ರಹೀಂಖಾನ್, ಶಿವರಾಜ್ ತಂಗಡಗಿ, ಶರಣಪ್ರಕಾಶ ಪಾಟೀಲ, ಈಶ್ವರ ಖಂಡ್ರೆ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಅವರು ತೆಲಂಗಾಣದ ವಿವಿಧ ವಿಧನಸಭಾ ಕ್ಷೇತ್ರಗಳಲ್ಲಿ ಸಕ್ರಿಯರಾಗಿ ತೊಡಗಿಕೊಂಡಿದ್ದರು.

ಅಲ್ಲದೆ, ಹಾಲಿ- ಮಾಜಿ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿ 40 ನಾಯಕರ ಮೂರನೇ ತಂಡ ಕೂಡಾ ಕ್ಷೇತ್ರಕ್ಕೆ ಇಳಿದು ಕೆಲಸ ಮಾಡಿದೆ. ಆ ಪೈಕಿ, ಬಿ. ಎನ್. ಚಂದ್ರಪ್ಪ, ರಿಜ್ವಾನ್ ಅರ್ಷದ್, ವಿಜಯಸಿಂಗ್, ರಾಜೇಂದ್ರಕುಮಾರ್, ಕೆ.ವೈ. ನಂಜೇಗೌಡ, ಪ್ರದೀಪ್ ಈಶ್ವರ್, ನಾಗೇಂದ್ರ ಯಾದವ್ ಪ್ರಮುಖರು.

ಕರ್ನಾಟಕ ವಿಧಾನಸಭಾ ಚುನಾವಣೆ ವೇಳೆ ರೂಪಿಸಿದ ಮಾದರಿಯಲ್ಲಿ ಹೈದರಾಬಾದ್‌ನಲ್ಲಿ ಕಾಂಗ್ರೆಸ್ 'ವಾರ್ ರೂಂ' ತೆರೆಯಲಾಗಿತ್ತು. ಮೆಹರೂಜ್ ಖಾನ್, ನಟರಾಜ ಗೌಡ, ಚಿನ್ನಪ್ಪ, ವಾಸುದೇವ ಅವರಿದ್ದ ಸುಮಾರು 20 ಮಂದಿಯ ತಂಡ ಆ 'ರೂಂ'ನಲ್ಲಿ ಕುಳಿತು ಸಾಮಾಜಿಕ ಮಾಧ್ಯಮಗಳ ಪ್ರಚಾರ ಹಾಗೂ ತಾರಾ ಪ್ರಚಾರಕರ ಕಾರ್ಯಕ್ರಮದ ಯೋಜನೆಗಳನ್ನು ರೂಪಿಸಿದ್ದರು. ನಾಯಕರು, ತಳ ಹಂತದ ಕಾರ್ಯಕರ್ತರಿಲ್ಲದೇ ಸೋತು ಸೊರಗಿದ್ದ ತೆಲಂಗಾಣ ಕಾಂಗ್ರೆಸ್ ಹೀಗೆ ಚೈತನ್ಯ ತುಂಬುವ ಕೆಲಸ ನಡೆಯಿತು. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ, ಪಕ್ಷದ ನಾಯಕ ರಾಹುಲ್ ಗಾಂಧಿ ನಡೆಸಿದ ಬೃಹತ್ ರ‍್ಯಾಲಿಯಿಂದ ಆರಂಭಗೊಂಡ ಚುನಾವಣಾ ಚಟುವಟಿಕೆ ಈಗ ಗೆಲುವಿನ ಫಲ ನೀಡಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಡಿಸೆಂಬರ್ 4, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಸಪ್ತಮಿ ಗಂ. 22-00 **ನಕ್ಷತ್ರ:** ಮಘಾ ಗಂ. 24-35 **ಯೋಗ:** ವೈಧೃತಿ ಗಂ 21-47 **ಕರಣ:** ವಿಷ್ಟಿ ಗಂ. 08-42, ವೃಶ್ಚಿಕ ಮಾಸದ 18 ನೇ ದಿನ, **ಮಳೆನಕ್ಷತ್ರ:** ಜ್ಯೇಷ್ಠ 1.
ರಾಹುಕಾಲ: ಬೆಳಿಗ್ಗೆ 07-30 - 09-00
ಸೂರ್ಯೋದಯ: 06-43 **ಸೂರ್ಯಾಸ್ತ:** 05-58
ಮುಸ್ಲಿಂ ದಿನಾಂಕ: 19 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ: 2, 9

ಮೇಷ: ನಿಮ್ಮ ಸಣ್ಣ ಬುದ್ಧಿಯಿಂದಾಗಿ ಸಮಾಜದಲ್ಲಿ ಜನರ ಅಪಹಾಸ್ಯಕ್ಕೆ ಕಾರಣವಾಗುವ ಸಾಧ್ಯತೆಗಳಿದೆ. ಕೆಲಸದ ಗುಣಮಟ್ಟ, ಕರ್ತವ್ಯ ನಿಷ್ಠೆಯು ಮೇಲಧಿಕಾರಿಗಳ ಗಮನಕ್ಕೆ ಬಂದು ಬಡ್ತಿಗೆ ಮೂಲ ಕಾರಣವಾಗುತ್ತದೆ.

ವೃಷಭ: ನವೋದ್ಯಮಿಗಳಿಗೆ ಅನ್ಯರ ಸಹಾಯ ಸಹಕಾರ ಪ್ರಾಪ್ತಿಯಾಗಿ ವೃತ್ತಿಪರವಾದ ಹುಮ್ಮಸ್ಸು ಇಮ್ಮಡಿಗೊಳ್ಳುವುದು. ಲೇವಾದೇವಿ ವ್ಯವಹಾರಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿ. ಮನಶ್ಶಾಂತಿ ಇರುವುದು.

ಮಿಥುನ: ನೂತನವಾಗಿ ಆರಂಭಿಸಿದ ವ್ಯವಹಾರದಲ್ಲಿ ಅನುಭವದ ಕೊರತೆಯಿಂದಾಗಿ ನಷ್ಟ ಸಂಭವಿಸಬಹುದು. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಹೆಚ್ಚಿನ ಅಧ್ಯಯನ ಅಗತ್ಯ. ಸಾಹಿತ್ಯದಲ್ಲಿ ಅಭಿರುಚಿ ಹೆಚ್ಚುತ್ತದೆ.

ಕರ್ಕಾಟಕ: ತಂದೆ ಅಭಿಪ್ರಾಯಕ್ಕೆ ಬೆಲೆ ಕೊಡಿ, ನಿಮ್ಮ ಯಶಸ್ಸಿಗೆ ಅನುಕೂಲಕರವಾಗಿರುತ್ತದೆ. ನಿಮ್ಮ ಹೃದಯ ಶ್ರೀಮಂತಿಕೆಯಿಂದ ಕೈಗೊಂಡ ಕಾರ್ಯಗಳನ್ನು ನಿರಾತಂಕವಾಗಿ ನೆರವೇರಿಸುವಿರಿ. ದೂರ ಪ್ರಯಾಣದ ಸಾಧ್ಯತೆಗಳು ಹೆಚ್ಚಿವೆ.

ಸಿಂಹ: ಇತರರಲ್ಲಿ ನಿಮ್ಮ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಇಂದು ಸೂಕ್ತವಾದ ಸಮಯ. ಪೋಲೀಸ್ ಅಧಿಕಾರಿಗಳಿಗೆ ಶಿಕ್ಷೆಯ ವರ್ಗಾವಣೆಯಾಗುವ ಸಂಭವವಿದೆ. ಸ್ವಪ್ರಯತ್ನದಿಂದ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ.

ಕನ್ಯಾ: ನಿಮ್ಮಲ್ಲಿರುವ ಮಾತಿನ ಚತುರತೆಯಿಂದ ನಿಮ್ಮ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ಮಾನಸಿಕ ಸ್ಥಿತಿಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಕಷ್ಟವಾಗಲಿದೆ. ಬಂಧುಗಳೊಡನೆ ವಿವಾದವನ್ನು ಮಾಡಬೇಡಿ.

ತುಲಾ: ನಿಮಗೆ ಎದುರಾಗಿರುವ ಕೌಟುಂಬಿಕ ಸಂದಿಗ್ಧತೆಯನ್ನು ಮಾರ್ಗದರ್ಶಕರ ಸಲಹೆ ಪಡೆದು, ನಿಭಾಯಿಸುವುದು ಒಳ್ಳೆಯದು. ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ.

ವೃಶ್ಚಿಕ: ಇಂದು ನಿಮ್ಮ ಸಹೋದ್ಯೋಗಿಗಳ ಯಾವುದೇ ತರಹದ ಒತ್ತಡಕ್ಕೆ ಮಣಿಯದೆ ಕೆಲಸದಲ್ಲಿ ಮುನ್ನುಗ್ಗಿ. ತಾಯಿಯ ಸಲಹೆಯಿಂದಾಗಿ ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಗೊಂದಲಗಳು ನಿವಾರಣೆಯಾಗುತ್ತದೆ.

ಧನು: ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು ಹಾಗೂ ಅಧ್ಯಯನಶೀಲರಿಗೆ ಜ್ಞಾನಾರ್ಜನೆ ಆಗುವುದು. ಕೆಲಸದಲ್ಲಿ ಬಹಳ ದಿನಗಳಿಂದ ಇದ್ದಂತಹ ಸಮಸ್ಯೆ ಬಗೆ ಹರಿಯುವುದು. ಔಷಧಿ ಮಾರಾಟಗಾರರು ವೃತ್ತಿಯಲ್ಲಿ ಜಾಗ್ರತೆವಹಿಸಿ.

ಮಕರ: ಹಣಕಾಸಿನ ವ್ಯಾಮೋಹ, ಬಯಕೆ ಹೆಚ್ಚಾಗುವ ಪರಿಣಾಮ ಪಶ್ಚಾತಾಪಕ್ಕೆ ಕಾರಣವಾಗದಂತೆ ನೋಡಿಕೊಳ್ಳಿ. ಸಂಜೆಯ ಸಮಯದಲ್ಲಿ ಪ್ರೀತಿ ಪಾತ್ರರೊಡನೆ ಕಾಲ ಕಳೆಯುವಿರಿ. ಶ್ರೀ ದುರ್ಗಾದೇವಿಯನ್ನು ಭಜಿಸಿ.

ಕುಂಭ: ಮಾಧ್ಯಮ ಮಿತ್ರರಿಂದ ತಪ್ಪು ಮಾಹಿತಿ ರವಾನೆಯಾಗಬಹುದು, ವೃತ್ತಿಯಲ್ಲಿ ಜಾಗ್ರತೆವಹಿಸಿ. ಮಗಳ ಮದುವೆಯ ನಿಶ್ಚಯ ಸಂತೋಷವನ್ನು ಉಂಟುಮಾಡುತ್ತದೆ. ಕೃಷಿ ಉತ್ಪನ್ನಗಳಿಂದ ಉತ್ತಮ ಆದಾಯವಿದೆ.

ಮೀನ: ಐ.ಟಿ ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿದೆ, ಅದರ ಪರಿಣಾಮವಾಗಿ ವರಮಾನ ಹೆಚ್ಚಳದ ಸಂಭವ ಇರುವುದು. ವೃತ್ತಿ ನೈಪುಣ್ಯತೆಯಿಂದ ಉನ್ನತಾಧಿಕಾರಿಯ ಹುದ್ದೆಗೆ ನೇಮಕಗೊಳ್ಳುವಿರಿ.

ನಮ್ಮನ್ನು ನಾವು ಕಂಡುಕೊಳ್ಳುವುದೇ ನಿಜವಾದ ಸಾಧನೆ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಒಮ್ಮೆ ಒಬ್ಬ ಝೆನ್ ಗುರುವಿನ ಬಳಿ, ಸಾಕಷ್ಟು ಆಧ್ಯಾತ್ಮಿಕ ಸಾಧನೆಯನ್ನು ಮಾಡಿದ್ದ ಯುವ ಸಾಧಕನೊಬ್ಬ ಬಂದು 'ಗುರುಗಳೇ ನಾನು ಬುದ್ಧನಾಗಬೇಕು ನನಗೆ ಮಾರ್ಗದರ್ಶನ ನೀಡಿ' ಎಂದು ಕೇಳಿದ. ತಕ್ಷಣ ಆ ಝೆನ್ ಗುರು ಒಳಗೆ ಹೋಗಿ ಒಂದು ದೊಡ್ಡ ಕೋಲನ್ನು ತಂದು ಅವನಿಗೆ ಹೊಡೆಯ ಹೊರಟ. ಭಯಭೀತನಾದ ಯುವ ಸಾಧಕ ಅಲ್ಲಿಂದ ಪಲಾಯನ ಮಾಡಿದ.

ನಂತರ ಇನ್ನೊಬ್ಬ ಝೆನ್ ಗುರುವಿನ ಬಳಿ ಹೋಗಿ ಇದೇ ಪ್ರಶ್ನೆಯನ್ನು ಕೇಳಿದ. ಈ ಝೆನ್ ಗುರು ಒಳ ಹೋಗಿ ಒಂದು ಹರಿತವಾದ ಕತ್ತಿಯನ್ನು ತಂದು ಇವನ ಮೇಲೆ ಪ್ರಹಾರವನ್ನೇ ಮಾಡಲು ಹೊರಟ. ಮತ್ತಷ್ಟು ಭಯಭೀತನಾದ ಯುವ ಸಾಧಕ ಅಲ್ಲಿಂದಲೂ ಕಾಲ್ಕಿತ್ತ. ಆದರೆ ತಾನು ಬುದ್ಧನಾಗುವುದು ಹೇಗೆ ಎಂಬ ಪ್ರಶ್ನೆ ಅವನನ್ನು ಕೊರೆಯುತ್ತಲೇ ಇತ್ತು.

ಮೊದಲು ಭೇಟಿ ಮಾಡಿದ ಗುರುವಿನ ಬಳಿಗೇ ಮತ್ತೆ ಹೋದ ಯುವ ಸಾಧಕ 'ಗುರುಗಳೇ ನಾನು ಕೇಳಿದ ಪ್ರಶ್ನೆಗೆ ನೀವು ಕೋಲಿನಿಂದ ಹೊಡೆಯಬಂದಿರಿ. ಈ ಪ್ರಶ್ನೆಯನ್ನು ಕೇಳಿದಾಗ ಇನ್ನೊಬ್ಬ ಗುರು ಕತ್ತಿಯನ್ನು ಹಿಡಿದು ನನ್ನನ್ನು ಕಡಿಯಲೆಂದೇ ಬಂದಿದ್ದ. ಏಕೆ ಹೀಗೆ ಗುರುಗಳೇ' ಎಂದು ಕೇಳಿದ.

ಆಗ ಆ ಝೆನ್ ಗುರು, 'ಹೌದಾ ಸರಿಯಾಗಿಯೇ ಮಾಡಿದ್ದಾನೆ ಅವನು. ಆದರೆ, ದಡ್ಡ, ಇಷ್ಟು ತೀವ್ರವಾಗಿ ಹೇಳಿದರೂ ನಿನಗಿನ್ನೂ ಅರ್ಥವಾಗಿಲ್ಲವೇ? ನೀನು ಆಗಲೇ ಬುದ್ಧನಾಗಿದ್ದಿ. ನಿನ್ನನ್ನು ನೀನು ಕಂಡುಕೊಳ್ಳುವುದೇ ನಿಜವಾಗಿ ಬುದ್ಧನಾಗುವ ಪರಿ' ಎಂದು ವಿವರಿಸಿದ.

ನಮ್ಮೊಳಗೆ ನಾವು ಹೊಕ್ಕು ನಮ್ಮನ್ನು ನಾವು ಸರಿಯಾಗಿ ಕಂಡುಕೊಳ್ಳುವುದೇ ನಿಜವಾದ ಜ್ಞಾನೋದಯ. ಅರಿವು ಎಂಬ ದೀಪ ಬಿಟ್ಟಾಗ, ನಮ್ಮೊಳಗಿರುವ ಬುದ್ಧ ನಮಗೆ ಖಂಡಿತವಾಗಿಯೂ ಗೋಚರಿಸುತ್ತಾನೆ. ಈ ಅರಿವೇ ಶರಣರು ಹೇಳಿದಂತೆ ನಿಜವಾದ ಗುರು. ಅದಕ್ಕೆ ನಮ್ಮ ಹಿರಿಯರು ಹೇಳಿರುವುದು ನಮ್ಮಲ್ಲಿ ನಾವಾಗಬೇಕೆಂದು. ನಮ್ಮ ಅಂತರಂಗವನ್ನು ಸರಿಯಾಗಿ ಅವಲೋಕಿಸಿಕೊಂಡು ಅದಕ್ಕೆ ಸೂಕ್ತ ನ್ಯಾಯ ಒದಗಿಸುವುದೇ ನಮ್ಮಲ್ಲಿ ನಾವಾಗುವ ಪಥ. ಬಸವಣ್ಣನವರು ತಮ್ಮ ವಚನ ಒಂದರಲ್ಲಿ ಪಂಚಶೀಲಗಳನ್ನು ಬಹಳ ಅದ್ಭುತವಾಗಿ ವಿವರಿಸಿ ಹೇಳುತ್ತಾರೆ. ಅದರಲ್ಲಿ ಅವರು ಉಲ್ಲೇಖಿಸುವ ಮೊದಲ ಶೀಲವೆಂದರೆ 'ಇದ್ದುದ ವಂಚನೆ ಮಾಡದಿರ್ಪುದೇ ಶೀಲ', ಅಂದರೆ ನಮ್ಮ ಒಳಗೆ ಇರುವ ಅಂತರಂಗದ ಶಕ್ತಿಗೆ ನಾವೆಂದೂ ವಂಚನೆ ಮಾಡಬಾರದು. ಅದನ್ನು ಸರಿಯಾಗಿ ಗುರುತಿಸಿಕೊಂಡು, ಅದಕ್ಕೆ ಸೂಕ್ತವಾದ ನ್ಯಾಯ ಒದಗಿಸುತ್ತಾ ಮನೋವಿಕಾಸ ಮಾಡಿಕೊಳ್ಳುವುದೇ ಬದುಕಿನ ಸಾರ್ಥಕತೆ. ಇದೇ ಮಹಾತ್ಮರ ಸಾಧನೆಯ ಹಾದಿ. ❖

ಪದಬಂಧ 5519

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಪ್ಪವಾಗಿ ಮಾನವನ್ನಿಟ್ಟಾಗ ಸಂದೇಹ ಬಂದಿತೇ? (4)
3.ಗಾಳಿಪಟದ ಬುಡಕ್ಕೆ ಕಟ್ಟುವ ಉದ್ದನೆಯ ಪಟ್ಟಿ (4)
5.ದೊಡ್ಡ ಮಡಿಕೆ ಇಲ್ಲಿದೆ (3)
6.ಎಳ್ಳಿನಿಂದಿರಿಸಿಕೊಂಡ ಬೊಟ್ಟು (3)
8.ಜಳಕ ಎಂದಿದ್ದಕ್ಕೇ ಈ ರೋಮಾಂಚನ! (3)
9.ಹೊಗಳಿಕೆ ಇಲ್ಲಿ ತಿರುವು ಮುರುವಾಗಿದೆ (3)
10.ಅತಿಯಾದ ಆಸೆ (3)
11.ನಯವಾಗಿರುವ ಕಣ್ಣು (3)
12.ಸಲೀಸು ಎಂದು ಹೀಗೆನ್ನಿ (3)
14.ನೆನಪಿಗೆ ಬಾರದಿರುವುದು (3)
16.ಚಾರ ತಂದಿರುವ ಸುದ್ದಿ (4)
17.ನಗರದಲ್ಲಿರುವ ಸುಸಂಸ್ಕೃತ (4)

ಮೇಲಿಂದ ಕೆಳಕ್ಕೆ
1.ದೇವತೆ ಇಲ್ಲಿದ್ದಾಳೆ (3)
2.ನಡುಗುವಾಗ ಕಾಣಿಸಿದ ಮಂದಹಾಸ (2)
3.ಬಾದಾರಾಯಣನ ಕಾಲದ ಶರ (2)
4.ಈತ ಸಿಟ್ಟಿನ ವ್ಯಕ್ತಿ (3)
7.ಕರ ತಟ್ಟಿಬಾರಿಸಿದ ಚಪ್ಪಾಳೆ (5)
8.ಈ ರೀತಿ ಮಾತಿನಲ್ಲಿ ನಯವಾಗಿ ಉಬ್ಬಿಸು (5)
11.ತಿರುವು ಮುರುವಾದ ಮನೆ (3)
13.ಸೊಳ್ಳೆ ಇಲ್ಲಿ ಕಾಣುತ್ತಿದೆ (3)
14.ಮಧುರ ಫಲ ನೀಡುವ ವೃಕ್ಷ (2)
15.ನಾವೆಲ್ಲರೂ ಕುಳಿತ ದೋಣಿ ಉಲ್ಟಾ ಆಗಿಬಿಟ್ಟಿದೆ! (2)

1			2	■	3			4
	■	■	5			■	■	
6		7	■	■	■	8		
■	■		■	■	■		■	■
9			■	■	■	10		
■	■		■	■	■		■	■
11			■	■	■	12		13
	■	■	14		15	■	■	
16				■	17			

5518ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪುಷ್ಕರಣಿ 3.ಕರಜಾತ
5.ರಾಯಸ 7.ಗುಣಿ
8.ತಮ 11.ರಸ
13.ಗಾಳ 14.ಬಡವ
16.ಕರೆಯೋಲೆ 17.ರತ್ನಾಕರ

ಮೇಲಿಂದ ಕೆಳಕ್ಕೆ:
1.ಪುರೋಹಿತ 2.ಣಿರಾ
3.ಕಸ 4.ತರುಣಿ
6.ಯಶಸ್ಸು 7.ಗುಣಾಕಾರ
9.ಮಡಿವಾಳ 10.ಬಗ್ಗಡ
12.ಸರೋವರ 13.ಗಾಯಕ
14.ಬಲೆ 15.ವರ

ಸುಡೊಕು 5905

	5	7		6			1	2
			5		2	3		
6		2		4		7		8
	7				9			
5		9		1			3	7
	6		7					4
2		3	8		4			
		6		2				9
8	1		6		7	4		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5904 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಮಿಜೋರಾಂ ಫಲಿತಾಂಶ ಇಂದು

ಐಜ್ವಾಲ್ (ಪಿಟಿಐ): ಮಿಜೋರಾಂ ವಿಧಾನಸಭೆ ಚುನಾವಣೆಯ ಮತ ಎಣಿಕೆಯು ಸೋಮವಾರ ನಡೆಯಲಿದೆ. ರಾಜ್ಯದಾದ್ಯಂತ 13 ಕೇಂದ್ರಗಳಲ್ಲಿ ಬೆಳಿಗ್ಗೆ 8 ಗಂಟೆಗೆ ಮತ ಎಣಿಕೆ ಆರಂಭವಾಗಲಿದೆ ಎಂದು ರಾಜ್ಯದ ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ಭಾನುವಾರ ತಿಳಿಸಿದರು. ಮಿಜೋರಾಂ ಮತ ಎಣಿಕೆಯೂ ಡಿಸೆಂಬರ್ 3ರಂದೇ ನಡೆಯಬೇಕಿತ್ತು. ಕ್ರೈಸ್ತ ಧರ್ಮೀಯರೇ ಹೆಚ್ಚಾಗಿರುವ ರಾಜ್ಯದಲ್ಲಿ ಜನರು ಭಾನುವಾರದಂದು ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಮತ ಎಣಿಕೆ ದಿನಾಂಕವನ್ನು ಮುಂದೂಡಬೇಕು ಎಂದು ಸಂಘಟನೆಗಳು ಕೋರಿದ್ದವು.

ಸ್ವಾವಲಂಬಿ ಭಾರತ ನಿರ್ಮಾಣದ ಆಶಯ ಮೂರು ರಾಜ್ಯಗಳ ಫಲಿತಾಂಶದಲ್ಲಿ ಪ್ರತಿಫಲನ

ಹ್ಯಾಟ್ರಿಕ್ ಗೆಲುವು ಗ್ಯಾರಂಟಿ: ಮೋದಿ

ನವದೆಹಲಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹ್ಯಾಟ್ರಿಕ್ ಗೆಲುವಿನ ಮೇಲೆ ಕಣ್ಣಿಟ್ಟಿರುವ ಕಮಲ ಪಾಳಯಕ್ಕೆ ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢದಲ್ಲಿ ವಿಜಯ ದುಂದುಭಿ ಮೊಳಗಿಸಿರುವುದು ಹೊಸ ಹುರುಪು ನೀಡಿದೆ.

ವಿಧಾನಸಭಾ ಚುನಾವಣಾ ಫಲಿತಾಂಶ ಹೊರಬೀಳುತ್ತಿದ್ದಂತೆ ನವದೆಹಲಿಯಲ್ಲಿ ಇರುವ ಬಿಜೆಪಿಯ ಕೇಂದ್ರ ಕಚೇರಿಯಲ್ಲೂ ಮೆಲ್ಲನೆ ಚಟುವಟಿಕೆ ಗರಿಗೆದರಿತು. ಮುಖಂಡರು ಹಾಗೂ ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು ಸಾಲುಗಟ್ಟಿ ಬರಲಾರಂಭಿಸಿದರು. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವರ ಆಗಮನದೊಂದಿಗೆ ಜಯದ ಸಂಭ್ರಮಾಚರಣೆಯು ರಂಗೇರಿತು.

ಪಕ್ಷದ ಬೆಂಬಲಿಗರನ್ನು ಉದ್ದೇಶಿಸಿದ ಮಾತನಾಡಿದ ಪ್ರಧಾನಿ ಮೋದಿ, 'ಈ ಚುನಾವಣೆಯಲ್ಲಿ ಸ್ವಾವಲಂಬಿ ಭಾರತ ನಿರ್ಮಾಣವು ಬಿಜೆಪಿಯ ಪ್ರಚಾರದ ಕಾರ್ಯಸೂಚಿಯಾಗಿತ್ತು. ಕೇಂದ್ರ ಸರ್ಕಾರದ ಈ ಆಶಯವು ಮೂರು ರಾಜ್ಯಗಳ ಫಲಿತಾಂಶದಲ್ಲಿ ಪ್ರತಿಫಲಿಸಿದೆ' ಎಂದು ಪ್ರತಿಪಾದಿಸಿದರು. 'ಈ ಹ್ಯಾಟ್ರಿಕ್ ಗೆಲುವು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಹ್ಯಾಟ್ರಿಕ್ ಗೆಲುವಿಗೆ ನಾಂದಿಯಾಗಲಿದೆ ಎಂದು ಘೋಷಿಸಿದರು.

'ಈ ಫಲಿತಾಂಶವು ಭ್ರಷ್ಟಾಚಾರ ವಿರುದ್ಧದ ನಮ್ಮ ಹೋರಾಟಕ್ಕೆ ಫಲ ಸಿಕ್ಕಿದೆ. ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಿದೆ' ಎಂದರು. 'ಇಂಡಿಯಾ'ವು ಕುಟುಂಬ ರಾಜಕಾರಣದ ಕೂಟವಾಗಿದೆ. ಅವರೆಲ್ಲರೂ ಚುನಾವಣಾ ವೇದಿಕೆಗಳಲ್ಲಿ ಉತ್ತಮ ಛಾಯಾಚಿತ್ರವನ್ನಷ್ಟೇ ಕ್ಲಿಕ್ಕಿಸಿಕೊಂಡರು. ಆದರೆ, ಮತದಾರರ ವಿಶ್ವಾಸ ಗೆಲ್ಲುವಲ್ಲಿ ವಿಫಲರಾದರು' ಎಂದು ಲೇವಡಿ ಮಾಡಿದರು.

'ಭ್ರಷ್ಟ ಆಡಳಿತ ನಡೆಸುವವರಿಗೆ ಈ ಫಲಿತಾಂಶವು ಎಚ್ಚರಿಕೆಯ ಗಂಟೆಯಾಗಿದೆ. ಭ್ರಷ್ಟರನ್ನು ಮತದಾರರು ಸಂಪೂರ್ಣವಾಗಿ ನಿರ್ಮೂಲನೆ ಮಾಡುತ್ತಾರೆ' ಎಂದರು.

ಕೇಂದ್ರ ಸರ್ಕಾರದ ಅಭಿವೃದ್ಧಿ ಮತ್ತು ಜನರ ಮಧ್ಯೆ ಯಾರೊಬ್ಬರು ಬರಲು ಸಾಧ್ಯವಿಲ್ಲ. ಒಂದು ವೇಳೆ ಯಾರಾದರೂ ನುಸುಳಿದರೆ ಜನಸಾಮಾನ್ಯರೇ ಅವರನ್ನು ಅಲ್ಲಿಂದ ತೊಲಗಿಸುತ್ತಾರೆ ಎಂದು ಹೇಳಿದರು.



ಬಿಜೆಪಿಯ ಗೆಲುವನ್ನು ಸಂಭ್ರಮಿಸಲು ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ದೆಹಲಿಯ ಪಕ್ಷದ ಮುಖ್ಯಕಚೇರಿಗೆ ಭಾನುವಾರ ಆಗಮಿಸಿದ ಕ್ಷಣ —ಪಿಟಿಐ ಚಿತ್ರ

'ಈ ನಾಲ್ಕು ಜಾತಿಗಳೇ ನಿರ್ಣಾಯಕ'

ಸಮಾಜದಲ್ಲಿ ನಾರಿಶಕ್ತಿ, ಯುವಶಕ್ತಿ, ರೈತರು ಹಾಗೂ ಬಡವರು ಎಂಬ ನಾಲ್ಕು ಜಾತಿಗಳಿವೆ. ಅವರ ಸಬಲೀಕರಣವಾದರೆ ದೇಶವೂ ಅಭ್ಯುದಯ ಹೊಂದಲಿದೆ' ಎಂದು ಮೋದಿ ಪ್ರತಿಪಾದಿಸಿದರು.

'ವಿರೋಧ ಪಕ್ಷಗಳು ಜಾತಿ ಹೆಸರಿನಲ್ಲಿ ದೇಶವನ್ನು ಛಿದ್ರಗೊಳಿಸಲು ಯತ್ನಿಸುತ್ತಿವೆ. ಆದರೆ, ಮೂರು ರಾಜ್ಯಗಳ ಫಲಿತಾಂಶದಲ್ಲಿ ಈ ನಾಲ್ಕು ಜಾತಿಗಳ ವಿಷಯವೇ ನಿರ್ಣಾಯಕ ಪಾತ್ರವಹಿಸಿತು. ಪ್ರಾಮಾಣಿಕ ಹಾಗೂ ಉತ್ತಮ ಆಡಳಿತಕ್ಕೆ ಜಯ ಸಂದಿದೆ' ಎಂದರು.

'ಕಮಲ ಅರಳಬೇಕು ಎಂಬುದು ಮಹಿಳೆಯರ ಹೆಬ್ಬಯಕೆ. ಅದು ಈಡೇರಿಸಿದೆ. ಇದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ಮಹಿಳಾ ರಾಜಕೀಯ ಮೀಸಲಾತಿ ಮಸೂದೆಯು ಅವರ ನಂಬಿಕೆಯನ್ನು ಮತ್ತಷ್ಟು ಬಲಗೊಳಿಸಿದೆ' ಎಂದರು.

6ಕ್ಕೆ ದೆಹಲಿಯಲ್ಲಿ 'ಇಂಡಿಯಾ' ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ ಚುನಾವಣೆಗೆ ರಣತಂತ್ರ ರೂಪಿಸಲು 'ಇಂಡಿಯಾ' ಮೈತ್ರಿಕೂಟದ ನಾಯಕರು ಡಿ.6 ರಂದು ನವದೆಹಲಿಯಲ್ಲಿ ಸಭೆ ಸೇರಲಿದ್ದಾರೆ.

ಐದು ರಾಜ್ಯಗಳ ಚುನಾವಣೆಯ ಫಲಿತಾಂಶದ ಬೆನ್ನಲ್ಲೇ ನಡೆಯಲಿರುವ ಈ ಸಭೆ, ಕಳೆದ ಮೂರು ತಿಂಗಳಿನಿಂದ ನಿಷ್ಕ್ರಿಯವಾಗಿರುವ ವಿಪಕ್ಷಗಳ ಮೈತ್ರಿಯನ್ನು ಮತ್ತೆ ಹಳಿಗೆ ತರುವ ನಿಟ್ಟಿನಲ್ಲಿ ಮಹತ್ವ ಪಡೆದುಕೊಂಡಿದೆ.

ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಬೇಗನೇ ಅಂತಿಮಗೊಳಿಸಬೇಕು ಎಂಬ ಒತ್ತಾಯ ಮೈತ್ರಿಕೂಟದಲ್ಲಿ ಕೇಳಿಬಂದಿತ್ತು. ಆದರೆ ಕಾಂಗ್ರೆಸ್ ಮಾತ್ರ ಅದಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಐದು ರಾಜ್ಯಗಳ ಚುನಾವಣೆಯ ಫಲಿತಾಂಶ ಪಕ್ಷದ ಪರವಾಗಿ ಬಂದರೆ, ಸೀಟು ಹಂಚಿಕೆ ವೇಳೆ ಹೆಚ್ಚಿನ ಕ್ಷೇತ್ರಗಳಿಗೆ ಬೇಡಿಕೆಯಿಡುವುದು ಕಾಂಗ್ರೆಸ್‌ನ ಲೆಕ್ಕಾಚಾರವಾಗಿತ್ತು. ಪಕ್ಷವು ಇದೀಗ ಆ ಅವಕಾಶವನ್ನು ಕಳೆದುಕೊಂಡಿದೆ.

ಹಿಂದಿ ಭಾಷಿಕ ರಾಜ್ಯಗಳಲ್ಲಿ ಬಿಜೆಪಿಯನ್ನು ಎದುರಿಸುವ ಕಾಂಗ್ರೆಸ್‌ನ ಸಾಮರ್ಥ್ಯದ ಬಗ್ಗೆ ಈ ಫಲಿತಾಂಶ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಲೋಕಸಭೆ ಚುನಾವಣೆಗೆ ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಸೀಟು ಹಂಚಿಕೆ ವೇಳೆ ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷ, ಆರ್‌ಜೆಡಿ ಮತ್ತು ಜೆಡಿಯು ಪಕ್ಷಗಳು ಇದನ್ನು ತನ್ನ 'ಚೌಕಾಸಿಯ ಅಸ್ತ್ರ'ವನ್ನಾಗಿಸುವ ಸಾಧ್ಯತೆಗಳಿವೆ.

'ಎಲ್ಲಾ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಪಕ್ಷಗಳಿಗೆ ಇದೊಂದು ಪಾಠವಾಗಿದೆ. ಬಿಜೆಪಿ ವಿರುದ್ಧ ಹೋರಾಡಲು ಒಗ್ಗಟ್ಟು ಅನಿವಾರ್ಯ. ಈಗ ಆಗಿರುವ ಬೆಳವಣಿಗೆಗಳಿಂದ ನಾವು ಸರಿಯಾದ ಪಾಠ ಕಲಿಯಬೇಕಿದೆ' ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಹೇಳಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನವದೆಹಲಿಯ ನಿವಾಸದಲ್ಲಿ ಬುಧವಾರ ನಡೆಯಲಿರುವ ಸಭೆಯಲ್ಲಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶದ ಪರಾಮರ್ಶೆ ನಡೆಯಲಿದೆ. ಮುಂಬೈನಲ್ಲಿ ಆಯೋಜಿಸಿದ್ದ ಸಭೆಯ ಬಳಿಕದ ಮೂರು ತಿಂಗಳಲ್ಲಿ 'ಇಂಡಿಯಾ' ಮೈತ್ರಿಕೂಟದ ಯಾವುದೇ ಚಟುವಟಿಕೆ ನಡೆದಿಲ್ಲ.

ಮುಖ್ಯಮಂತ್ರಿ ಆಯ್ಕೆ: ಬಿಜೆಪಿಗೆ ಸವಾಲು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮೂರು ರಾಜ್ಯಗಳಲ್ಲಿ ಭಾರಿ ಬಹುಮತದಿಂದ ಗೆದ್ದು ಬೀಗುತ್ತಿರುವ ಬಿಜೆಪಿ ಮುಂದೆ ಈಗ ನೂತನ ಮುಖ್ಯಮಂತ್ರಿಗಳ ಆಯ್ಕೆ ಮತ್ತೊಂದು ಸವಾಲಾಗಿ ನಿಂತಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಜನರು ಬೆಂಬಲಿಸಲಿದ್ದಾರೆ ಎಂಬ ಬಲವಾದ ನಂಬಿಕೆಯಿಂದ ಬಿಜೆಪಿ ಕೇಂದ್ರ ನಾಯಕರು, ಚುನಾವಣೆಗೂ ಮುನ್ನ ಈ ಮೂರು ರಾಜ್ಯಗಳಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿರಲಿಲ್ಲ.

ಪಕ್ಷವು ಮಧ್ಯಪ್ರದೇಶದಲ್ಲಿ ಪರ್ಯಾಯ ನಾಯಕತ್ವದ ಹುಡುಕಾಟದಲ್ಲಿತ್ತು. ಹಾಲಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರ ಗೆಲುವು ರಾಜ್ಯದಲ್ಲಿ ಪರ್ಯಾಯ ನಾಯಕತ್ವ ಕುರಿತು ಮರುಚಿಂತನೆ ಮಾಡುವಂತೆ ಮಾಡಿದೆ.

ಚೌಹಾಣ್ ಅವರು ಒಬಿಸಿ ಸಮುದಾಯಕ್ಕೆ ಸೇರಿದವರು. ಅವರನ್ನು ಕಡೆಗಣಿಸುವ ಸ್ಥಿತಿಯಲ್ಲಿ ಈಗ ಬಿಜೆಪಿ ಇಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ.

ಕೇಂದ್ರ ಸಚಿವರಾದ ನರೇಂದ್ರ ಸಿಂಗ್ ತೋಮರ್ ಹಾಗೂ ಪ್ರಹ್ಲಾದ್ ಪಟೇಲ್ ಸೇರಿದಂತೆ ಕೆಲ ಸಂಸದರನ್ನು ಕಣಕ್ಕಿಸಲಾಗಿತ್ತು. ಕೇಂದ್ರ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸ್ಪರ್ಧಿಸಿರಲಿಲ್ಲ. ಈಗ ಇವರ ಹೆಸರು ಕೇಳಿಬರುತ್ತಿದೆ.

ರಾಜಸ್ಥಾನದಲ್ಲಿ ಬಿಜೆಪಿಯು ಹೊಸ ಮುಖಕ್ಕೆ ಮಣೆ ಹಾಕುವ ಸಾಧ್ಯತೆಯೇ ಹೆಚ್ಚು ಎನ್ನಲಾಗುತ್ತಿದೆ. ವಸುಂಧರ ರಾಜೇ, ಕೇಂದ್ರ ಸಚಿವರಾದ ಗಜೇಂದ್ರ ಸಿಂಗ್ ಶೆಖಾವತ್, ಅರ್ಜುನ್ ಸಿಂಗ್ ಮೇಘವಾಲ್, ಪಕ್ಷದ ರಾಜ್ಯದ ಘಟಕದ ಅಧ್ಯಕ್ಷ ಸಿ.ಪಿ.ಜೋಶಿ ಹಾಗೂ ದಿಯಾ ಕುಮಾರಿ, ಮಹಂತ ಬಾಲಕನಾಥ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಹೆಸರುಗಳು ಸಹ ಕೇಳಿಬರುತ್ತಿವೆ.

ಛತ್ತೀಸಗಢದಲ್ಲಿ ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅರುಣಕುಮಾರ್ ಸಾವ್, ವಿರೋಧ ಪಕ್ಷದ ನಾಯಕ ಧರಮ್‌ಲಾಲ್ ಕೌಶಿಕ್ ಹಾಗೂ ಮಾಜಿ ಐಎಎಸ್ ಅಧಿಕಾರಿ ಒ.ಪಿ.ಚೌಧರಿ ಅವರ ಹೆಸರುಗಳು ಮುಂಚೂಣಿಯಲ್ಲಿವೆ.

ತೆಲಂಗಾಣ: ರೇವಂತ್ ಸಿ.ಎಂ?



ರೇವಂತ್ ರೆಡ್ಡಿ

ಕಾಂಗ್ರೆಸ್ ನಾಯಕರು ಭಾನುವಾರ ರಾತ್ರಿ ರಾಜ್ಯಪಾಲೆ ತಮಿಳುಇಸೈ ಸೌಂದರ್‌ರಾಜನ್ ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ಸೋಮವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ. ತೆಲಂಗಾಣ ಪಿಸಿಸಿ ಅಧ್ಯಕ್ಷ ಎ. ರೇವಂತ್ ರೆಡ್ಡಿ ಅವರು ಮುಖ್ಯಮಂತ್ರಿಯಾಗಿ ಆಯ್ಕೆಯಾಗುವ ಸಂಭವ ಇದೆ. ಭಟ್ಟಿ ವಿಕ್ರಮಾರ್ಕ ಅವರು ಉಪ ಮುಖ್ಯಮಂತ್ರಿಯಾಗುವ ಸಾಧ್ಯತೆ ಇದೆ. ಈ ಇಬ್ಬರೂ ಸೋಮವಾರ ಸಂಜೆ ರಾಜಭವನದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎನ್ನಲಾಗಿದೆ.

ತಲೆಕೆಳಗಾದ ಛತ್ತೀಸಗಢ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧ್ಯಪ್ರದೇಶ, ರಾಜಸ್ಥಾನ ಹಾಗೂ ತೆಲಂಗಾಣ ವಿಧಾನಸಭಾ ಚುನಾವಣೆಯ ಫಲಿತಾಂಶಕ್ಕೆ ಸಂಬಂಧಿಸಿ ವಿದ್ಯುನ್ಮಾನ ಮಾಧ್ಯಮಗಳು ಮತ್ತು ಚುನಾವಣಾ ಏಜೆನ್ಸಿಗಳು ನಡೆಸಿದ ಮತಗಟ್ಟೆ ಸಮೀಕ್ಷೆಯು ಬಹುತೇಕ ನಿಜವಾಗಿದೆ. ಆದರೆ, ಛತ್ತೀಸಗಢದಲ್ಲಿ ಮತದಾರ ಪ್ರಭುಗಳು ಚುನಾವಣೋತ್ತರ ಸಮೀಕ್ಷೆಯನ್ನು ತಲೆಕೆಳಗೆ ಮಾಡಿ ಅಚ್ಚರಿ ಮೂಡಿಸಿದ್ದಾರೆ.

ತೆಲಂಗಾಣ ಹಾಗೂ ಛತ್ತೀಸಗಢದಲ್ಲಿ ಮತದಾರರು ಕಾಂಗ್ರೆಸ್ ಪಕ್ಷವನ್ನು ಅಧಿಕಾರದ ಚುಕ್ಕಾಣಿಯ ಸಮೀಪಕ್ಕೆ ಕರೆದೊಯ್ಯುತ್ತಾರೆ. ಅಲ್ಲದೇ, ಛತ್ತೀಸಗಢದಲ್ಲಿ ಕಾಂಗ್ರೆಸ್‌ಗೆ ಸರಳ ಬಹುಮತ ಲಭಿಸಲಿದೆ. ಬಿಜೆಪಿ ಪ್ರಬಲ ಪೈಪೋಟಿ ನೀಡಲಿದೆ ಎಂಬುದು ಬಹುತೇಕ ಸಮೀಕ್ಷೆಗಳ ಸಾರವಾಗಿತ್ತು.

ಆದರೆ, ತೆಲಂಗಾಣದಲ್ಲಿ ಮಾತ್ರವೇ 'ಕೈ' ಪಾಳಯ ಗೆಲುವಿನ ನಗೆ ಬೀರಿದೆ. ಛತ್ತೀಸಗಢದಲ್ಲಿ ಕಾಂಗ್ರೆಸ್‌ನ ಭೂಪೇಶ್ ಬಘೇಲ್ ಸರ್ಕಾರ ಮರಳಿ ಅಧಿಕಾರದ ಗದ್ದುಗೆ ಏರಲು ವಿಫಲವಾಗಿದೆ. ಇಲ್ಲಿ ಕಮಲ ಪಾಳಯ ಜಯಭೇರಿ ಬಾರಿಸಿದೆ.

ತೆಲಂಗಾಣದಲ್ಲಿ ಬಿಆರ್‌ಎಸ್‌ನ ಒಂದು ದಶಕದ ಆಡಳಿತ ಅಂತ್ಯಗೊಳ್ಳಲಿದೆ ಎಂದು ಹೆಚ್ಚಿನ ಸಮೀಕ್ಷೆಗಳು ಹೇಳಿದ್ದ ಭವಿಷ್ಯ ನಿಜವಾಗಿದೆ.

ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಬಿಜೆಪಿ ಅಧಿಕಾರದ ಸೂತ್ರ ಹಿಡಿಯಲಿದೆ ಎಂದು ಸಮೀಕ್ಷೆ ಗಳು ಹೇಳಿದ್ದವು. ಅದು ಸತ್ಯವಾಗಿದೆ.

ಮತ್ತೆ ಮೋದಿ ಅಲೆ, 'ಕೈ' ತರಗೆಲೆ

ಒಂದನೇ ಪುಟದಿಂದ

ಕಾಂಗ್ರೆಸ್ ಪಕ್ಷವು ಸೋತ ಮೂರೂ ರಾಜ್ಯಗಳಲ್ಲಿ ಒಳಜಗಳ ಕಡಿಮೆ ಇರಲಿಲ್ಲ. ರಾಜಸ್ಥಾನದಲ್ಲಿ ಗೆಹಲೋತ್ ಮತ್ತು ಸಚಿನ್ ಪೈಲಟ್ ನಡುವೆ ಇಡೀ ಐದು ವರ್ಷ ಕಾದಾಟ ನಡೆದಿತ್ತು. ಬಘೇಲ್ ಅವರು ಎರಡೂವರೆ ವರ್ಷದ ಬಳಿಕ ಅಧಿಕಾರವನ್ನು ಟಿ.ಎಸ್. ಸಿಂಗ್‌ದೇವ್ ಅವರಿಗೆ ಬಿಟ್ಟುಕೊಡಲಿಲ್ಲ. ಅವರು ಸದಾ ಮುನಿಸಿನಲ್ಲಿಯೇ ಇದ್ದರು. ಮಧ್ಯಪ್ರದೇಶದಲ್ಲಿ ಕಮಲನಾಥ್ ಮತ್ತು ದಿಗ್ವಿಜಯ್ ಸಿಂಗ್ ಪರಸ್ಪರ ಪೂರಕವಾಗಿ ಕೆಲಸ ಮಾಡಲಿಲ್ಲ. ಭಿನ್ನಮತ ಶಮನದ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ತೋರಿದ ಉದಾಸೀನಕ್ಕೆ ದೊಡ್ಡ ಬೆಲೆಯನ್ನು ಆ ಪಕ್ಷವು ತೆತ್ತಿದೆ.

ಕಳೆದ ಒಂದು ದಶಕದಲ್ಲಿ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ನಾಯಕರ ಮಾತುಗಳು ಸಭ್ಯತೆಯ ಎಲ್ಲೆ ಮೀರುವುದು ಸಾಮಾನ್ಯವೇ ಆಗಿಬಿಟ್ಟಿದೆ. ಸಂಸತ್ತಿನಲ್ಲಿಯೇ ಕೋಮು ದ್ವೇಷದ ಮಾತು ಆಡಿದ್ದ ರಮೇಶ್ ಬಿಧೂಢಿ ಅವರನ್ನು ರಾಜಸ್ಥಾನಕ್ಕೆ ಬಿಜೆಪಿ ಉಸ್ತುವಾರಿಯನ್ನಾಗಿ ಮಾಡಿತ್ತು. ರಾಜಸ್ಥಾನದ ಚುನಾವಣೆಯ ಮೇಲೆ ಪಾಕಿಸ್ತಾನವೂ ಕಣ್ಣಿಟ್ಟಿರುತ್ತದೆ ಎಂದು ಅವರು ನೀಡಿದ್ದ ಹೇಳಿಕೆ ವಿವಾದ ಸೃಷ್ಟಿಸಿತ್ತು. ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಪ್ರಧಾನಿ ಮೋದಿ ಅವರನ್ನು 'ಪನೌತಿ' (ಅಪಶಕುನ) ಎಂದು ಹೇಳುವ ಮೂಲಕ ತಾವೇನೂ ಕಮ್ಮಿ ಇಲ್ಲ ಎಂದು ನಿರೂಪಿಸಿದ್ದರು. 'ರಾಹುಲ್ ಗಾಂಧಿ ಮೂರ್ಖರ ನಾಯಕ' ಎಂದು ಮೋದಿ ಹೇಳಿದ್ದರು. ಹೀಗೆ ಚುನಾವಣಾ ಪ್ರಚಾರವು ಸೌಜನ್ಯದ ಎಲ್ಲೆಯ ಆಚೆಯೇ ಇತ್ತು. ಕೋಮು ಧ್ರುವೀಕರಣದ ಮಾತುಗಳು ಬಿಜೆಪಿಗೆ ನೆರವಾಗಿದೆ ಎಂದು ಕೂಡ ಫಲಿತಾಂಶವನ್ನು ವಿಶ್ಲೇಷಿಸಲಾಗುತ್ತಿದೆ.

2018ರಲ್ಲಿ ಇವೇ ರಾಜ್ಯಗಳಲ್ಲಿ ನಡೆದ ಚುನಾವಣೆಯ ಫಲಿತಾಂಶವನ್ನು ಲೋಕಸಭೆಗೆ 2019ರಲ್ಲಿ ನಡೆಯಲಿರುವ ಚುನಾವಣೆಯ ದಿಕ್ಸೂಚಿ ಎಂದು ಬಣ್ಣಿಸಲಾಗಿತ್ತು. ಆದರೆ, ಆ ಫಲಿತಾಂಶವು ಲೋಕಸಭಾ ಚುನಾವಣೆಯ ದಿಕ್ಸೂಚಿ ಆಗಿರಲಿಲ್ಲ. ಲೋಕಸಭಾ ಚುನಾವಣೆಯ ಸೆಮಿಫೈನಲ್ ಎಂದು ಈ ಬಾರಿಯ ಚುನಾವಣೆಯನ್ನೂ ಬಣ್ಣಿಸಲಾಗಿದೆ. ಪ್ರತಿಕೂಲ ಸನ್ನಿವೇಶವನ್ನೂ ತನ್ನ ಪರವಾಗಿ ಪರಿವರ್ತಿಸಿಕೊಳ್ಳಬಲ್ಲ ಬಿಜೆಪಿಯ ಶಕ್ತಿಯನ್ನು ಗಮನಿಸಿದರೆ, ಈ ಬಾರಿಯ ಫಲಿತಾಂಶವು ಲೋಕಸಭಾ ಚುನಾವಣೆಯ ದಿಕ್ಸೂಚಿ ಆದರೂ ಅಚ್ಚರಿ ಇಲ್ಲ.

ಈ ಫಲಿತಾಂಶದಿಂದ ನಿಚ್ಚಳವಾದ ಇನ್ನೊಂದು ಮಹತ್ವದ ಅಂಶ ಇದೆ. ಉತ್ತರ ಭಾರತದಲ್ಲಿ ಗಟ್ಟಿ ನೆಲೆ ಕಂಡುಕೊಳ್ಳುವುದು ಕಾಂಗ್ರೆಸ್‌ಗೆ ಇನ್ನು ಬಹಳ ಕಷ್ಟವಿದೆ. ಆದರೆ, ದಕ್ಷಿಣ ಭಾರತದ ಜನರು ಬಿಜೆಪಿಗಿಂತ ಕಾಂಗ್ರೆಸ್‌ನ ಮೇಲೆ ಹೆಚ್ಚು ಒಲವು ಇರಿಸಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಬಿಜೆಪಿ ಉತ್ತರ ಭಾರತದ ಪಕ್ಷ ಎಂಬುದು ಮತ್ತೊಮ್ಮೆ ನಿರೂಪಿತವಾಗಿದೆ.

ಮಿತ್ರಪಕ್ಷಗಳ ಜೊತೆ ಕಾಂಗ್ರೆಸ್ ಅಸಡ್ಡೆಯಿಂದ ವರ್ತಿಸುತ್ತದೆ ಎಂಬುದು ಮತ್ತೊಮ್ಮೆ ಸ್ಪಷ್ಟಪಟ್ಟಿದೆ. ಬಿಜೆಪಿವಿರೋಧಿ ಪಕ್ಷಗಳು ಒಟ್ಟಾಗಿ 'ಇಂಡಿಯಾ' ಎಂಬ ಮೈತ್ರಿಕೂಟವನ್ನು ರೂಪಿಸಿಕೊಂಡಿದ್ದವು. ಲೋಕಸಭೆ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಸ್ಪರ್ಧಿಸುವುದು ಇದರ ಉದ್ದೇಶವಾಗಿತ್ತು. 'ಇಂಡಿಯಾ' ಕೂಟದ ಸದಸ್ಯರನ್ನು ಕಾಂಗ್ರೆಸ್ ಪಕ್ಷವು ಚುನಾವಣೆ ಸಂದರ್ಭದಲ್ಲಿ ಹತ್ತಿರಕ್ಕೆ ಸೇರಿಸಿಕೊಳ್ಳಲಿಲ್ಲ. ಬಿಜೆಪಿಗೆ ಎಲ್ಲವೂ ಪೂರಕವಾಗಿ ಪರಿವರ್ತಿತವಾದರೆ, ಕಾಂಗ್ರೆಸ್‌ಗೆ ಕರ್ನಾಟಕದ ಗೆಲುವಿನ 'ಪ್ರಭಾವಳಿ'ಯಲ್ಲಿ ಸಿಕ್ಕ ತೆಲಂಗಾಣವೇ ಸಮಾಧಾನ.

ಜಾತಿ ಗಣತಿಗಿಲ್ಲ ಮನ್ನಣೆ

ಈ ಚುನಾವಣೆಯಲ್ಲಿ ಜಾತಿಗಣತಿ ಅತಿ ಹೆಚ್ಚು ಸದ್ದು ಮಾಡಿತ್ತು. ಅಧಿಕಾರಕ್ಕೆ ಬಂದರೆ ಜಾತಿಗಣತಿ ನಡೆಸುವುದಾಗಿ ಕಾಂಗ್ರೆಸ್ ಪಕ್ಷವು ಭರವಸೆ ಕೊಟ್ಟಿತ್ತು. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡುವುದಾಗಿಯೂ ಹೇಳಿತ್ತು. ಆದರೆ, ಇದು ಜನರನ್ನು ಜಾತಿ ಹೆಸರಿನಲ್ಲಿ ವಿಭಜಿಸುವ ಯತ್ನ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದರು. ಒಬಿಸಿ ಮತ್ತು ಪರಿಶಿಷ್ಟರ ಮತಗಳನ್ನು ಜಾತಿಗಣತಿಯ ಮೂಲಕ ಸೆಳೆಯಬಹುದು ಎಂಬುದು ಕಾಂಗ್ರೆಸ್ ಪಕ್ಷದ ಲೆಕ್ಕಾಚಾರವಾಗಿತ್ತು. ಈ ಲೆಕ್ಕಾಚಾರ ತಲೆ ಕೆಳಗಾಗಿದೆ. ಜಾತಿಗಣತಿಯ ಭರವಸೆಯು ಕಾಂಗ್ರೆಸ್‌ಗೆ ಮತ ತಂದು ಕೊಟ್ಟಿಲ್ಲ.

'ಸನಾತನ'ದ ಶಕ್ತಿ ಈಗ ಅರಿವಾಗಿರಬೇಕು'

ನವದೆಹಲಿ (ಪಿಟಿಐ): 'ಸನಾತನ ಧರ್ಮವನ್ನು ನಾಶಪಡಿಸಲು ಯಾರೆಲ್ಲಾ ಸಿದ್ಧರಾಗಿದ್ದರೋ ಅವರು ತಮ್ಮನ್ನೇ ನಾಶಪಡಿಸಿಕೊಂಡಿದ್ದಾರೆ' ಎಂದು ವಿಧಾನಸಭೆ ಚುನಾವಣಾ ಫಲಿತಾಂಶದ ಕುರಿತು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಪ್ರತಿಕ್ರಿಯೆ ನೀಡಿದೆ.

'ಸನಾತನ ಧರ್ಮವನ್ನು ನಿರ್ಮೂಲನೆ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದವರನ್ನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಲಾಗಿದೆ. ಮತ ಗಳಿಸಲು ವಿಫಲವಾದ ಮತ್ತು ಓಲೈಕೆ ರಾಜಕಾರಣದಲ್ಲೇ ಮುಳುಗಿರುವ ಪಕ್ಷಗಳಿಗೆ ಸನಾತನ ಧರ್ಮದ ಶಕ್ತಿ ಈಗ ಅರ್ಥವಾಗಿರುತ್ತದೆ' ಎಂದು ವಿಎಚ್‌ಪಿ ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಾಲ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್, 'ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು' ಎಂದು ಸೆಪ್ಟೆಂಬರ್‌ನಲ್ಲಿ ಹೇಳಿಕೆ ನೀಡಿದ್ದರು.

ಸಫೀನಾಗೆ ₹ 4.16 ಕೋಟಿಯ 'ವೈಸ್' ಪ್ರಶಸ್ತಿ



ಸಫೀನಾ ಹುಸೇನ್

ನವದೆಹಲಿ (ಪಿಟಿಐ): 'ಎಜುಕೇಟ್ ಗರ್ಲ್ಸ್' ಸಂಸ್ಥೆಯ ಸ್ಥಾಪಕಿ ದೆಹಲಿಯ ಸಫೀನಾ ಹುಸೇನ್‌ರಿಗೆ, ಪ್ರತಿಷ್ಠಿತ 'ವೈಸ್' (ವರ್ಲ್ಡ್ ಇನ್ನೊವೇಷನ್ ಸಮ್ಮಿಟ್ ಫಾರ್ ಎಜುಕೇಷನ್) ಪ್ರಶಸ್ತಿ ಲಭಿಸಿದೆ. ಪ್ರಶಸ್ತಿ ಮೊತ್ತ ₹ 4.16 ಕೋಟಿ (5 ಲಕ್ಷ ಡಾಲರ್) ಆಗಿದೆ.

ಭಾರತದ ವಿವಿಧ ಗ್ರಾಮಗಳಲ್ಲಿ ಶಾಲೆಯಿಂದ ಹೊರಗುಳಿದಿದ್ದ ಸುಮಾರು 14 ಲಕ್ಷ ಬಾಲಕಿಯರನ್ನು ಮತ್ತೆ ಶಿಕ್ಷಣದ ಮುಖ್ಯವಾಹಿನಿಗೆ ಕರೆತರುವುದರಲ್ಲಿ ಮಾಡಿರುವ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಮುಕೇಶ್ ಕುಮಾರ್, ಅರ್ಷದೀಪ್ ಬೌಲಿಂಗ್‌ಗೆ ಒಲಿದ ಜಯ: ಶ್ರೇಯಸ್ ಅಯ್ಯರ್ ಅರ್ಧಶತಕ

ಸೂರ್ಯ ಬಳಗಕ್ಕೆ ರೋಚಕ ಜಯ

• ಗಿರೀಶ ದೊಡ್ಡಮನಿ



ಭಾರತದ ಶ್ರೇಯಸ್ ಅಯ್ಯರ್ ಅವರ ಬ್ಯಾಟಿಂಗ್ –ಪಿಟಿಐ ಚಿತ್ರ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಆಸ್ಟ್ರೇಲಿಯಾ ಎದುರಿನ ಚುಟುಕು ಪಂದ್ಯದ ಕೊನೆಯ ಓವರ್ ನಾಟಕೀಯ ತಿರುವುಗಳಿಗೆ ಕಾರಣವಾಯಿತು. ಆದರೆ ಕೊನೆಗೂ ಭಾರತ ತಂಡವು ರೋಚಕ ಜಯ ಸಾಧಿಸಿತು.

ಟಿ20 ಸರಣಿಯ ಕೊನೆಯ ಪಂದ್ಯದಲ್ಲಿ 6 ರನ್‌ಗಳಿಂದ ಗೆದ್ದ ಭಾರತವು 4–1ರಿಂದ ಕಿರೀಟ ತನ್ನದಾಗಿಸಿಕೊಂಡಿತು.

161 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡಕ್ಕೆ ಕೊನೆಯ ಓವರ್‌ನಲ್ಲಿ 10 ರನ್‌ಗಳ ಅಗತ್ಯವಿತ್ತು. ಈ ಹಂತದಲ್ಲಿ ತಂಡವು 151 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು. ಆದರೆ ಕ್ರೀಸ್‌ನಲ್ಲಿ ನಾಯಕ ಮ್ಯಾಥ್ಯೂ ವೇಡ್ (22; 15ಎ) ಇದ್ದ ಕಾರಣ ಆಸ್ಟ್ರೇಲಿಯಾಕ್ಕೆ ಗೆಲುವಿನ ವಿಶ್ವಾಸ ಉಳಿಸಿತ್ತು.

ಈ ಓವರ್ ಬೌಲಿಂಗ್ ಮಾಡಲು ಎಡಗೈ ಮಧ್ಯಮವೇಗಿ ಅರ್ಷದೀಪ್ ಸಿಂಗ್ ಚೆಂಡು ಕೈಗೆತ್ತಿಕೊಂಡಾಗ, ಪ್ರೇಕ್ಷಕರಲ್ಲಿ ಆತಂಕ ಎದುರಾಗಿತ್ತು. ಏಕೆಂದರೆ ಇನಿಂಗ್ಸ್‌ನ ಮೊದಲ ಓವರ್ ಬೌಲ್ ಮಾಡಿದ್ದ ಅರ್ಷದೀಪ್ 14 ರನ್ ಕೊಟ್ಟಿದ್ದರು. ತಮ್ಮ ಎರಡನೇ ಸ್ಪೆಲ್‌ನ ಎರಡು ಓವರ್‌ಗಳಲ್ಲಿ 23 ರನ್ ಕೊಟ್ಟಿದ್ದರು. ಆದರೆ ಆ ಸ್ಪೆಲ್‌ನಲ್ಲಿ ಬೆನ್ ಮೆಕ್‌ಡರ್ಮಟ್ (54; 36ಎ) ಅವರ ವಿಕೆಟ್ ಗಳಿಸಿದ್ದರು. ಇದರಿಂದಾಗಿ ಅವರಲ್ಲಿ ಆತ್ಮವಿಶ್ವಾಸ ಮೂಡಿತ್ತು.

ಅರ್ಷದೀಪ್ ಹಾಕಿದ 20ನೇ ಓವರ್‌ನ ಮೊದಲ ಎಸೆತವು ಬ್ಯಾಟರ್ ಮ್ಯಾಥ್ಯೂ ವೇಡ್ ಅವರ ತಲೆಮಟ್ಟಕ್ಕೆ ಬೌನ್ಸ್ ಆಗಿತ್ತು. ಇದನ್ನು ನೋಬಾಲ್ ಕೊಡಬೇಕು ಎಂದು ವೇಡ್ ಅವರ ಹಾವಭಾವಕ್ಕೆ ಯಾವುದೇ ಪ್ರತಿಫಲ ಸಿಗಲಿಲ್ಲ. ಇದರಿಂದ ಅಸಮಾಧಾನಗೊಂಡ ವೇಡ್ ಆಟ ಮುಂದುವರಿಸಿದರು. ಎರಡನೇ ಎಸೆತದಲ್ಲಿಯೂ ರನ್ ಬರಲಿಲ್ಲ. ಮೂರನೇ ಎಸೆತದಲ್ಲಿ ವೇಡ್ ದೊಡ್ಡ ಹೊಡೆತವಾಡಿದರು. ಆದರೆ ಫೀಲ್ಡರ್ ಶ್ರೇಯಸ್ ಅಯ್ಯರ್ ಪಡೆದ ಅಮೋಘ ಕ್ಯಾಚ್‌ಗೆ ಡಗ್‌ಔಟ್‌ಗೆ ಮರಳಿದರು.

ಕ್ರೀಸ್‌ನಲ್ಲಿದ್ದ ಬೆಹ್ರನ್‌ಡಾರ್ಫ್, ನಂತರದ ಎಸೆತದಲ್ಲಿ ಒಂದು ರನ್ ಗಳಿಸಿದರು. ಆದರೆ ಐದನೇ ಎಸೆತದಲ್ಲಿ ನೇಥನ್ ಎಲಿಸ್ ಹೊಡೆದ ನೇರ ಡ್ರೈವ್ ವೇಗವಾಗಿ ಸಾಗುವ ಹಂತದಲ್ಲಿ ಅರ್ಷದೀಪ್ ತಡೆದರು. ಬ್ಯಾಟರ್‌ಗಳಿಗೆ ಕೇವಲ ಒಂದು ರನ್ ಲಭಿಸಿತು.

ಮುಕೇಶ್ ಗೇಮ್ ಚೇಂಜರ್: ಹೋದವಾರವಷ್ಟೇ ವಿವಾಹವಾಗಿರುವ ವೇಗಿ ಮುಕೇಶ್ ಕುಮಾರ್ ಭಾರತ ತಂಡದ ಗೆಲುವಿಗೆ ಮಹತ್ವದ ತಿರುವು ನೀಡಿದರು. ತಮ್ಮ ಮೊದಲ ಸ್ಪೆಲ್‌ನಲ್ಲಿ ಜೋಶ್ ಫಿಲಿಪ್ ವಿಕೆಟ್ ಗಳಿಸಿ ಮೊದಲ ಯಶಸ್ಸು ಗಳಿಸಿಕೊಟ್ಟರು. ನಂತರ ತಮ್ಮ ಎರಡನೇ ಸ್ಪೆಲ್‌ನಲ್ಲಿ ಎರಡು ವಿಕೆಟ್ ಕಿತ್ತರು. 17ನೇ ಓವರ್‌ನಲ್ಲಿ ಮ್ಯಾಥ್ಯೂ ಶಾರ್ಟ್ ಮತ್ತು ಬೆನ್ ದ್ವಾರ್ಷಿಯಸ್ ವಿಕೆಟ್‌ಗಳನ್ನು ಗಳಿಸಿದರು. ಇದರಿಂದಾಗಿ ಕೊನೆಯ ಹಂತದ ಓವರ್‌ಗಳಲ್ಲಿ ಆಸ್ಟ್ರೇಲಿಯಾದ ರನ್ ಗಳಿಕೆಯ ವೇಗ ಕುಂಠಿತವಾಯಿತು.

ಅವರಿಗೆ ಸ್ಪಿನ್ನರ್ ರವಿ ಬಿಷ್ಣೋಯಿ ಹಾಗೂ ಅಕ್ಷರ್ ಪಟೇಲ್ ಕೂಡ ಉತ್ತಮ ಬೆಂಬಲ ನೀಡಿದರು.

ಶ್ರೇಯಸ್ ಅರ್ಧಶತಕ: ಟಾಸ್ ಗೆದ್ದ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಯಶಸ್ವಿ ಜೈಸ್ವಾಲ್ ಮತ್ತು ಋತುರಾಜ್ ಗಾಯಕವಾಡ ಮೊದಲ ವಿಕೆಟ್‌ಗೆ 33ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ಆದರೆ ನಂತರದ 22 ರನ್‌ಗಳ ಅಂತರದಲ್ಲಿ ನಾಲ್ಕು ವಿಕೆಟ್‌ಗಳ ಪತನವಾದವು. ಇಬ್ಬರು ಆರಂಭಿಕರು, ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಸಿಕ್ಸರ್ ಪರಿಣತ ರಿಂಕು ಸಿಂಗ್ ಡಗ್‌ಔಟ್ ಸೇರಿದ್ದರು.

ಆದರೆ ಒಂದೆಡೆ ಶಾಂತಚಿತ್ತದಿಂದ ನಿಂತು ಆಡಿದ ಶ್ರೇಯಸ್ ಅಯ್ಯರ್ 36 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ತಂಡವು ಒಂದು ಹಂತದಲ್ಲಿ ನೂರರ ಮೊತ್ತ ಮುಟ್ಟುವುದೇ ಅನುಮಾನವಾಗಿತ್ತು. ಆದರೆ ಆ ಆತಂಕವನ್ನು ಶ್ರೇಯಸ್ ದೂರ ಮಾಡಿದರು. ಅವರು ಜಿತೇಶ್ ಶರ್ಮಾ (24; 16ಎ) ಅವರೊಂದಿಗೆ 5ನೇ ವಿಕೆಟ್ ಜೊತೆಯಾಟದಲ್ಲಿ 42 ರನ್ ಕಲೆಹಾಕಿದರು. ಅಕ್ಷರ್ ಪಟೇಲ್ (31; 21ಎ, 4X2, 6X1) ಜೊತೆಗೆ ಆರನೇ ವಿಕೆಟ್ ಪಾಲುದಾರಿಕೆಯಲ್ಲಿ 46 ರನ್ ಸೇರಿಸಿದರು. 20ನೇ ಓವರ್‌ನಲ್ಲಿ ಸಿಕ್ಸರ್ ಹೊಡೆಯುವ ಮೂಲಕ ತಮ್ಮ ಅರ್ಧಶತಕ ಪೂರೈಸಿದ ಶ್ರೇಯಸ್ ತಂಡವು ಗೌರವಾರ್ಹ ಮೊತ್ತ ಗಳಿಸಲು ಕಾರಣರಾದರು.

ಸ್ಕೋರ್ ಕಾರ್ಡ್

ಭಾರತ 8ಕ್ಕೆ160 (20 ಓವರ್‌ಗಳಲ್ಲಿ)
ಯಶಸ್ವಿ ಸಿ ನೇಥನ್ ಬಿ ಬೆಹ್ರನ್‌ಡಾರ್ಫ್ 21 (15ಎ, 4X1, 6X2)
ಋತುರಾಜ್ ಸಿ ಬೆಹ್ರನ್‌ಡಾರ್ಫ್ ಬಿ ದ್ವಾರ್ಷಿಯಸ್ 10 (12ಎ, 4X2)
ಶ್ರೇಯಸ್ ಬಿ ನೇಥನ್ 53 (37ಎ, 4X5, 6X2)
ಸೂರ್ಯಕುಮಾರ್ ಸಿ ಮೆಕ್‌ಡರಮಾರ್ಟ್ ಬಿ ದ್ವಾರ್ಷಿಯಸ್ 5 (7ಎ)
ರಿಂಕುಸಿಂಗ್ ಸಿ ಡೇವಿಡ್ ಬಿ ಸಂಘಾ 6 (8ಎ, 4X1)
ಜಿತೇಶ್ ಸಿ ಮ್ಯಾಥ್ಯೂ ಬಿ ಹಾರ್ಡಿ 24 (16ಎ, 4X3. 6X1)
ಅಕ್ಷರ್ ಸಿ ಹಾರ್ಡಿ ಬಿ ಬೆಹ್ರನ್‌ಡಾರ್ಫ್ 31 (21ಎ, 4X2, 6X1)
ರವಿ ರನೌಟ್ (ಫಿಲಿಪ್/ವೇಡ್) 2 (2ಎ)
ಅರ್ಷದೀಪ್ ಔಟಾಗದೆ 2 (2ಎ)
ಇತರೆ: 6 (ಬೈ 1, ಲೆಗ್‌ಬೈ 2, ವೈಡ್ 3)
ವಿಕೆಟ್ ಪತನ: 1–33 (ಯಶಸ್ವಿ ಜೈಸ್ವಾಲ್; 3.6), 2–33 (ಋತುರಾಜ್ ಗಾಯಕವಾಡ; 4.3), 3–46 (ಸೂರ್ಯಕುಮಾರ್ ಯಾದವ್; 6.5), 4–55 (ರಿಂಕು ಸಿಂಗ್; 9.1), 5–97 (ಜಿತೇಶ್ ಶರ್ಮಾ; 13.1), 6–143 (ಅಕ್ಷರ್ ಪಟೇಲ್; 18.4), 7–156 (ಶ್ರೇಯಸ್ ಅಯ್ಯರ್;19.3), 8–160 (ರವಿ ಬಿಷ್ಣೋಯಿ; 19.6)
ಬೌಲಿಂಗ್: ಆ್ಯರನ್ ಹಾರ್ಡಿ 4–0–21–1, ಜೇಸನ್ ಬೆಹ್ರೆನ್‌ಡಾರ್ಫ್ 4–0–38–2, ಬೆನ್ ದ್ವಾರ್ಷಿಯಸ್ 4–0–30–2, ನೇಥನ್ ಎಲಿಸ್ 4–0–42–1, ತನ್ವೀರ್ ಸಂಘಾ 4–0–26–1



ವಿಕೆಟ್ ಪಡೆದ ಮುಕೇಶ್ ಕುಮಾರ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಎಫ್‌ಪಿ ಚಿತ್ರ

ತಲೈವಾಸ್‌ಗೆ ಮಣಿದ ದಬಾಂಗ್

ಪ್ರೊ ಕಬಡ್ಡಿ: ಮೊದಲ ಪಂದ್ಯದಲ್ಲಿ ಮುಗ್ಗರಿಸಿದ ಬುಲ್ಸ್

ಅಹಮದಾಬಾದ್: ಅಜಿಂಕ್ಯ ಪವಾರ್ ಅವರ ಉತ್ತಮ ರೈಡಿಂಗ್ ಬಲದಿಂದ ತಮಿಳು ತಲೈವಾಸ್ ತಂಡ, ಭಾನುವಾರ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 42–31ರಿಂದ ದಬಾಂಗ್ ಡೆಲ್ಲಿ ತಂಡವನ್ನು ಮಣಿಸಿತು.

ಟ್ರಾನ್ಸ್ ಸ್ಟೇಡಿಯಾದಲ್ಲಿ ನಡೆದ ಈ ರೋಚಕ ಪಂದ್ಯದಲ್ಲಿ ವಿರಾಮದ ವೇಳೆಗೆ 18–14ರಿಂದ ಮುನ್ನಡೆಯಲ್ಲಿದ್ದ ತಲೈವಾಸ್ ತಂಡ, ಉತ್ತರಾರ್ಧದಲ್ಲೂ ಉತ್ತಮ ಪ್ರದರ್ಶನ ತೋರಿತು.

ಅಜಿಂಕ್ಯ ತಮ್ಮ ತಂಡಕ್ಕೆ ಒಟ್ಟು 21 ಪಾಯಿಂಟ್‌ಗಳನ್ನು ಗಳಿಸಿಕೊಟ್ಟರು. ಅದರಲ್ಲಿ 14 ಪಾಯಿಂಟ್ ರೇಡ್ ನಿಂದ ಬಂದಿತು. ನರೇಂದರ್ ಹೋಶಿ ಯಾರ್ 8 ಅಂಕಗಳನ್ನು ಸಂಪಾದಿಸಿದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವು 31–34ರಿಂದ ಆತಿಥೇಯ ಗುಜರಾತ್ ಜೈಂಟ್ಸ್ ತಂಡಕ್ಕೆ ಮಣಿಯಿತು. ಸೋನು ಜಗ್ಲಾನ್ ಜೈಂಟ್ಸ್ ತಂಡಕ್ಕೆ 12 ಅಂಕ ತಂದುಕೊಟ್ಟರು.



ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ದಬಾಂಗ್ ಡೆಲ್ಲಿ ಮತ್ತು ತಮಿಳು ತಲೈವಾಸ್ ತಂಡದ ನಡುವೆ ಪೈಪೋಟಿ

ಟೆಸ್ಟ್ ಕ್ರಿಕೆಟ್: ಆಸ್ಟ್ರೇಲಿಯಾ ತಂಡಕ್ಕೆ ಕಮಿನ್ಸ್ ಸಾರಥ್ಯ

ಡೇವಿಡ್ ವಾರ್ನರ್ ವಿದಾಯಕ್ಕೆ ಮುನ್ನುಡಿ

ಸಿಡ್ನಿ (ಎಪಿ): ಸ್ಫೋಟಕ ಬ್ಯಾಟ್ಸ್‌ಮನ್ ಡೇವಿಡ್ ವಾರ್ನರ್ ಅವರು ಪಾಕಿಸ್ತಾನ ವಿರುದ್ಧದ ಟೆಸ್ಟ್ ಸರಣಿಯ ಮೊದಲ ಪಂದ್ಯಕ್ಕಾಗಿ ಪ್ರಕಟಿಸಿದ ಆಸ್ಟ್ರೇಲಿಯಾದ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಈ ಸರಣಿ ಮೂಲಕ ವಾರ್ನರ್ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳುವುದು ಖಚಿತವಾಗಿದೆ.

37ರ ವರ್ಷದ ವಾರ್ನರ್ ಅವರನ್ನು ಒಳಗೊಂಡ 14 ಆಟಗಾರರ ತಂಡವನ್ನು ಭಾನುವಾರ ಪ್ರಕಟಿಸಿದ್ದು, ಮೊದಲ ಪಂದ್ಯ ಡಿ.14ರಿಂದ 19 ರವರೆಗೆ ಪರ್ತ್‌ನಲ್ಲಿ ನಡೆಯಲಿದೆ.

ಮೆಲ್ಬರ್ನ್ ಕ್ರೀಡಾಂಗಣದಲ್ಲಿ 2ನೇ (ಡಿ.26ರಿಂದ 30ರವರೆಗೆ) ಹಾಗೂ ಸಿಡ್ನಿಯಲ್ಲಿ ಮೂರನೇ (ಜ.3ರಿಂದ 7ರವರೆಗೆ) ಪಂದ್ಯ ನಡೆಯಲಿವೆ. ವಾರ್ನರ್ ಅವರು ತಮ್ಮ ತವರು ಕ್ರೀಡಾಂಗಣ ಸಿಡ್ನಿಯಲ್ಲಿ ವಿದಾಯ ಹೇಳಲು ಬಯಸಿದ್ದಾರೆ. ಎರಡು ಮತ್ತು ಮೂರನೇ ಟೆಸ್ಟ್ ಪಂದ್ಯಗಳಿಗೆ ವಾರ್ನರ್ ಅವರಿಗೆ ಅವಕಾಶ ಸಿಗಲಿದೆಯೇ ಎಂಬುದು ಇನ್ನೂ ನಿರ್ಧಾರವಾಗಿಲ್ಲ.



ಡೇವಿಡ್ ವಾರ್ನರ್

ಟೆಸ್ಟ್ ಕ್ರಿಕೆಟ್‌ನಲ್ಲಿ ವಾರ್ನರ್ ಇತ್ತೀಚೆಗೆ ನಿರೀಕ್ಷಿತ ಆಟ ಪ್ರದರ್ಶಿಸಿಲ್ಲ. 2019ರಲ್ಲಿ ಅಡಿಲೇಡ್‌ನಲ್ಲಿ ನಡೆದ ಪಾಕ್ ವಿರುದ್ಧದ ಪಂದ್ಯದಲ್ಲಿ ತ್ರಿಶತಕ ಹೊಡೆದ ನಂತರದ ಪಂದ್ಯಗಳಲ್ಲಿ ಅವರು 28 ರನ್‌ಗಳ ಸರಾಸರಿ ಹೊಂದಿದ್ದಾರೆ. ಸೀಮಿತ ಓವರ್‌ಗಳ ಪಂದ್ಯಗಳತ್ತ ಗಮನ ಹರಿಸುವ ಉದ್ದೇಶದಿಂದ ಟೆಸ್ಟ್ ಕ್ರಿಕೆಟ್‌ಗೆ ಅವರು ಗುಡ್‌ಬೈ ಹೇಳಲು ಮುಂದಾಗಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ವಿಜೇತ ತಂಡದಲ್ಲಿದ್ದ 13 ಮಂದಿಯನ್ನು ಮೊದಲ ಟೆಸ್ಟ್ ಪಂದ್ಯದಲ್ಲಿ ಉಳಿಸಿಕೊಳ್ಳಲಾಗಿದೆ. ಬೆನ್ನಿನ ಗಾಯದಿಂದ ಚೇತರಿಸಿಕೊಂಡ ಲ್ಯಾನ್ಸ್ ಮೋರಿಸ್ ಅವರಿಗೆ ಸ್ಥಾನ ಕಲ್ಪಿಸಲಾಗಿದೆ. ಕಳೆದ ವರ್ಷದ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಗೆ ಪ್ರಕಟಿಸಿದ ತಂಡದಲ್ಲಿ ಅವರು ಸ್ಥಾನ ಪಡೆದಿದ್ದರು.

ಆಸ್ಟ್ರೇಲಿಯಾ ತಂಡ ಹೀಗಿದೆ: ಪ್ಯಾಟ್ ಕಮಿನ್ಸ್ (ನಾಯಕ), ಸ್ಕಾಟ್ ಬೋಲ್ಯಾಂಡ್, ಅಲೆಕ್ಸ್ ಕ್ಯಾರಿ, ಕ್ಯಾಮರಾನ್ ಗ್ರೀನ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಉಸ್ಮಾನ್ ಖ್ವಾಜಾ, ಮಾರ್ನಸ್ ಲಾಬುಷೇನ್, ನೇಥನ್ ಲಯನ್, ಮಿಚೆಲ್ ಮಾರ್ಷ್, ಲ್ಯಾನ್ಸ್ ಮೋರಿಸ್, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್ ಮತ್ತು ಡೇವಿಡ್ ವಾರ್ನರ್.

ವಿಜಯ್ ಹಜಾರೆ ಟ್ರೋಫಿ: ಟೂರ್ನಿಯಲ್ಲಿ ಕರ್ನಾಟಕಕ್ಕೆ ಮೊದಲ ಸೋಲು

ಮಯಂಕ್ ಪಡೆ ಓಟಕ್ಕೆ ಹರಿಯಾಣ ಕಡಿವಾಣ

ಅಹಮದಾಬಾದ್: ಕರ್ನಾಟಕ ತಂಡದ ಅಜೇಯ ಓಟಕ್ಕೆ ಭಾನುವಾರ ಹರಿಯಾಣ ತಂಡವು ತಡೆಯೊಡ್ಡಿತು.

ಇಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಆರನೇ ಪಂದ್ಯದಲ್ಲಿ ಕರ್ನಾಟಕವು ತಂಡವು 5 ವಿಕೆಟ್‌ಗಳಿಂದ ಸೋತಿತು. ಕಳೆದ ಐದು ಪಂದ್ಯಗಳಲ್ಲಿ ಜಯಿಸಿದ್ದ ಮಯಂಕ್ ಅಗರವಾಲ್ ಬಳವನ್ನು ಕಟ್ಟಿಹಾಕಿದ ಹರಿಯಾಣ ತಂಡವು ಸತತ ಆರನೇ ಪಂದ್ಯ ಗೆದ್ದು ಸಿ ಗುಂಪಿನ ಅಂಕಪಟ್ಟಿಯ ಅಗ್ರಸ್ಥಾನಕ್ಕೇರಿತು. ಇದರೊಂದಿಗೆ ತಂಡವು ನೇರವಾಗಿ ಕ್ವಾರ್ಟರ್‌ಫೈನಲ್ ಹಂತ ಪ್ರವೇಶಿಸುವ ಸಾಧ್ಯತೆಯೂ ಹೆಚ್ಚಿತು.

ಟಾಸ್ ಗೆದ್ದ ಕರ್ನಾಟಕ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಹರಿಯಾಣದ ಸುಮಿತ್ ಕುಮಾರ್ (28ಕ್ಕೆ3) ಮತ್ತು ಉಳಿದ ಬೌಲರ್‌ಗಳ ಶಿಸ್ತಿನ ದಾಳಿಯ ಮುಂದೆ ಕರ್ನಾಟಕ 43.5 ಓವರ್‌ಗಳಲ್ಲಿ 143 ರನ್‌ಗಳ ಅಲ್ಪಮೊತ್ತ ಪೇರಿಸಿತು. ಹತ್ತನೇ ಕ್ರಮಾಂಕದ ಬ್ಯಾಟರ್ ವೈಶಾಖ ವಿಜಯಕುಮಾರ್ (54; 61ಎ, 4X4, 6X4) ತಂಡಕ್ಕೆ ಬಲ ತುಂಬಿದರು.



ವೈಶಾಖ ವಿಜಯಕುಮಾರ್

ಆದರೆ, ಈ ಟೂರ್ನಿಯಲ್ಲಿ ರನ್‌ಗಳ ಮಳೆ ಹರಿಸಿದ್ದ ದೇವದತ್ತ ಪಡಿಕ್ಕಲ್ ಗೈರುಹಾಜರಿಯಲ್ಲಿ ಬ್ಯಾಟಿಂಗ್ ಬಲ ಕುಸಿಯಿತು. ಮಯಂಕ್ ಖಾತೆ ತೆರೆಯಲಿಲ್ಲ. ಸಮರ್ಥ್ ಒಂದು ರನ್ ಮಾಡಿದರು. ದೇವದತ್ತ ಬದಲಿಗೆ ಸ್ಥಾನ ಪಡೆದ ಬಿ.ಆರ್. ಶರತ್ 15 ರನ್ ಗಳಿಸಿದರು. ಅನುಭವಿ ಮನೀಷ್ ಪಾಂಡೆ (24; 44ಎ) ಇನಿಂಗ್ಸ್‌ಗೆ ಬಲ ತುಂಬುವಲ್ಲಿ ಹಿಂದೆ ಬಿದ್ದರು. ಯಜುವೇಂದ್ರ ಚಾಹಲ್ ಸ್ಪಿನ್ ಎಸೆತಕ್ಕೆ ವಿಕೆಟ್ ಒಪ್ಪಿಸಿದರು. ಅಭಿನವ್ ಮನೋಹರ್, ಮನೋಜ್ ಬಾಂಢಗೆ ಕೂಡ ಮಿಂಚಲಿಲ್ಲ. ಆದರೆ, ವೈಶಾಖ ಚೆಂದದ ಅರ್ಧಶತಕ ಹೊಡೆದರು.

ಈ ಸಾಧಾರಣ ಮೊತ್ತವನ್ನು ರಕ್ಷಿಸಿಕೊಳ್ಳಲು ಬೌಲರ್‌ಗಳು ಪ್ರಯತ್ನಿಸಿದರು. ವಾಸುಕಿ ಕೌಶಿಕ್ (6–3–9–2) ಮತ್ತು ಸ್ಪಿನ್ನರ್ ಜೆ ಸುಚಿತ್ (37ಕ್ಕೆ2) ಅಮೋಘ ಬೌಲಿಂಗ್ ಮಾಡಿದರು. ಆದರೆ, ಹರಿಯಾಣದ ರೋಹಿತ್ ಪ್ರಮೋದ ಶರ್ಮಾ (63; 70ಎ) ಅರ್ಧಶತಕ ಹೊಡೆದರು. ಇದರಿಂದಾಗಿ ತಂಡವು 31.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 144 ರನ್ ಗಳಿಸಿತು.

ದೇವದತ್ತ ಪಡಿಕ್ಕಲ್ ಮತ್ತು ವಿದ್ವತ್ ಕಾವೇರಪ್ಪ ಅವರು ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳಲಿರುವ ಭಾರತ 'ಎ' ತಂಡಕ್ಕೆ ಆಯ್ಕೆಯಾಗಿದ್ದಾರೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 43.5 ಓವರ್‌ಗಳಲ್ಲಿ 143 (ಮನೀಷ್ ಪಾಂಡೆ 24, ವೈಶಾಖ ವಿಜಯಕುಮಾರ್ 54, ಅನ್ಷುಲ್ ಕಾಂಬೋಜ್ 29ಕ್ಕೆ2, ಸುಮಿತ್ ಕುಮಾರ್ 28ಕ್ಕೆ3, ನಿಶಾಂತ್ ಸಿಂದು 22ಕ್ಕೆ2, ಯಜುವೇಂದ್ರ ಚಾಹಲ್ 16ಕ್ಕೆ2, ಹರ್ಷಲ್ ಪಟೇಲ್ 25ಕ್ಕೆ1) **ಹರಿಯಾಣ:** 31.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 144 (ಯುವರಾಜ್ ಸಿಂಗ್ 19, ನಿಶಾಂತ್ ಸಿಂಧು 43, ರೋಹಿತ್ ಪ್ರಮೋದ್ ಶರ್ಮಾ 63, ವಿ. ಕೌಶಿಕ್ 9ಕ್ಕೆ2, ಜೆ. ಸುಚಿತ್ 37ಕ್ಕೆ2) **ಫಲಿತಾಂಶ:** ಹರಿಯಾಣ ತಂಡಕ್ಕೆ 5 ವಿಕೆಟ್‌ಗಳ ಜಯ.

ಭಾರತ ಎ ತಂಡಕ್ಕೆ ವಿದ್ವತ್, ದೇವದತ್ತ ಪಡಿಕ್ಕಲ್

ನವದೆಹಲಿ (ಪಿಟಿಐ): ಕರ್ನಾಟಕದ ಬ್ಯಾಟರ್ ದೇವದತ್ತ ಪಡಿಕ್ಕಲ್ ಮತ್ತು ವೇಗಿ ವಿದ್ವತ್ ಕಾವೇರಪ್ಪ ಅವರಿಗೆ ಭಾರತ ಎ ತಂಡದಲ್ಲಿ ಸ್ಥಾನ ನೀಡಲಾಗಿದೆ. ತಂಡವನ್ನು ವಿಕೆಟ್‌ಕೀಪರ್ ಬ್ಯಾಟರ್ ಕೆ.ಎಸ್. ಭರತ್ ಮುನ್ನಡೆಸುವರು.

ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳಲಿರುವ ತಂಡದಲ್ಲಿ ಇಬ್ಬರೂ ಆಡಲಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಎರಡು ಚತುರ್ದಿನ ಪಂದ್ಯಗಳಿಗೆ ಪ್ರತ್ಯೇಕ ತಂಡಗಳನ್ನು ಆಯ್ಕೆ ಮಾಡಲಾಗಿದೆ. ಕನ್ನಡಿಗ ಪ್ರಸಿದ್ಧ ಕೃಷ್ಣ ಕೂಡ ತಂಡದಲ್ಲಿದ್ದಾರೆ. ಡಿ 11 ರಿಂದ 14 ರವರೆಗೆ ಮೊದಲ ಪಂದ್ಯ ನಡೆಯಲಿದೆ.

ಭಾರತ ಎ ತಂಡಗಳು

ನಾಲ್ಕುದಿನಗಳ ಪಂದ್ಯ (1): ಕೆ.ಎಸ್. ಭರತ್ (ನಾಯಕ–ವಿಕೆಟ್‌ಕೀಪರ್), ಸಾಯಿ ಸುದರ್ಶನ್, ಅಭಿಮನ್ಯು ಈಶ್ವರನ್, ದೇವದತ್ತ ಪಡಿಕ್ಕಲ್, ಪ್ರದೋಶ್ ರಂಜನ್ ಪಾಲ್, ಸರ್ಫರಾಜ್ ಖಾನ್, ಧ್ರುವ ಜುರೇಲ್, ಶಾರ್ದೂಲ್ ಠಾಕೂರ್, ಪುಳಕಿತ್ ನಾರಂಗ್, ಸೌರಭ್ ಕುಮಾರ್, ಮಾನವ ಸುತಾರ್, ಪ್ರಸಿದ್ಧ ಕೃಷ್ಣ, ಆಕಾಶ್ ದೀಪ್, ವಿದ್ವತ್ ಕಾವೇರಪ್ಪ, ತುಷಾರ್ ದೇಶಪಾಂಡೆ.

ನಾಲ್ಕುದಿನಗಳ ಪಂದ್ಯ (2): ಕೆ.ಎಸ್. ಭರತ್ (ನಾಯಕ–ವಿಕೆಟ್‌ಕೀಪರ್), ಸಾಯಿ ಸುದರ್ಶನ್ ಅಭಿಮನ್ಯು ಈಶ್ವರನ್, ಋತುರಾಜ್ ಗಾಯಕವಾಡ್, ತಿಲಕ್ ವರ್ಮಾ, ಧ್ರುವ್ ಜುರೇಲ್, ವಾಷಿಂಗ್ಟನ್ ಸುಮದರ್, ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ಕುಲದೀಪ್ ಯಾದವ್, ಮಾನವ್ ಸುತಾರ್, ಆಕಾಶ್ ದೀಪ್, ವಿದ್ವತ್ ಕಾವೇರಪ್ಪ, ನವದೀಪ್ ಸೈನಿ.

ಭಾರತ ಅಂತರ ಬಳಗ ಪಂದ್ಯ: ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ಅಭಿಮನ್ಯು ಈಶ್ವರನ್, ದೇವದತ್ತ ಪಡಿಕ್ಕಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಸರ್ಫರಾಜ್ ಖಾನ್, ಪ್ರದೋಸ್ ರಂಜನ್ ಪಾಲ್, ಕೆ.ಎಸ್. ಭರತ್ (ವಿಕೆಟ್‌ಕೀಪರ್), ಧ್ರುವ್ ಜುರೇಲ್, ಇಶಾನ್ ಕಿಶನ್, ರವೀಂದ್ರ ಜಡೇಜ, ಆರ್. ಅಶ್ವಿನ್, ಪುಳಕಿತ್ ನಾರಂಗ್, ಹರ್ಷಿತ್ ರಾಣಾ, ಶಾರ್ದೂಲ್ ಠಾಕೂರ್, ಸೌರಭ್ ಕುಮಾರ್, ಮಾನವ್ ಸುತಾರ್, ಪ್ರಸಿದ್ಧ ಕೃಷ್ಣ, ಆಕಾಶ್ ದೀಪ್, ವಿದ್ವತ್ ಕಾವೇರಪ್ಪ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಮೊಹಮ್ಮದ್ ಶಮಿ, ನವದೀಪ್ ಸೈನಿ.

ಕರ್ನಾಟಕ ತಂಡಕ್ಕೆ ವೃಂದಾ ನಾಯಕಿ

ಬೆಂಗಳೂರು: ವೃಂದಾ ದಿನೇಶ್ ಅವರು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಟೂರ್ನಿಯು ಡಿ.10ರಿಂದ 19ರವರೆಗೆ ರಾಯಪುರದಲ್ಲಿ ನಡೆಯಲಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು 15 ಆಟಗಾರ್ತಿಯರನ್ನು ಒಳಗೊಂಡ ಕರ್ನಾಟಕ ತಂಡವನ್ನು ಭಾನುವಾರ ಪ್ರಕಟಿಸಿದೆ.

ತಂಡ ಹೀಗಿದೆ: ವೃಂದಾ ದಿನೇಶ್ (ನಾಯಕಿ), ನಿಕಿ ಪ್ರಸಾದ್, ಶ್ರೇಯಾಂಕಾ ಆರ್. ಪಾಟೀಲ, ಜಿ.ಆರ್. ಪ್ರೇರಣಾ, ರೋಶಿನಿ ಕಿರಣ್, ಕೃಷಿಕಾ ರೆಡ್ಡಿ, ಚಾಂದಸಿ ಕೃಷ್ಣಮೂರ್ತಿ, ಸೌಮ್ಯ ವರ್ಮಾ (ವಿಕೆಟ್ ಕೀಪರ್), ಮಿಥಿಲಾ ವಿನೋದ್, ಅದಿತಿ ರಾಜೇಶ್, ಸಾಕ್ಷಿ ದೋಯಿಜೋಡೆ (ವಿಕೆಟ್ ಕೀಪರ್), ಅದಿತಿ ಬಕ್ಕ, ಶಿಶಿರಾ ಎ. ಗೌಡ, ಎಂ. ಪೂಜಾ ಕುಮಾರಿ, ಅನನ್ಯಾ ಹೆಗ್ಡೆ, ಕರುಣಾ ಜೈನ್ (ಕೋಚ್), ರಂಜಿನಿಕುಮಾರ್ (ಮ್ಯಾನೇಜರ್), ಇಶಿತಾ ಕುಲಕರ್ಣಿ (ಫಿಸಿಯೋಥೆರಪಿಸ್ಟ್), ಎಸ್. ಕೃತಿ, ಮಾಲಾ ರಂಗಸ್ವಾಮಿ (ವಿಡಿಯೊ ಅನಾಲಿಸ್ಟ್).

ಟರ್ಮ್ ಇನ್ಶುರೆನ್ಸ್: 10 ಅಂಶಗಳು ಗೊತ್ತಿರಲಿ



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಇನ್ಶುರೆನ್ಸ್ ಇದೆಯಾ ಅಂತ ಕೇಳಿದ ತಕ್ಷಣ ಇದೆ ಅನ್ನೋ ಉತ್ತರವನ್ನು ಬಹುತೇಕರು ಹೇಳುತ್ತಾರೆ. ಆದ್ರೆ ಟರ್ಮ್ ಇನ್ಶುರೆನ್ಸ್ ಮಾಡಿಸಿದ್ದೀರಾ ಅಂತ ಕೇಳಿದರೆ, ಹಾಗಂದ್ರೆ ಏನು ಎನ್ನುವ ಪ್ರಶ್ನೆ ಎದುರಾಗುತ್ತೆ. ಟರ್ಮ್ ಲೈಫ್ ಇನ್ಶುರೆನ್ಸ್ ಪ್ರತಿಯೊಂದು ಕುಟುಂಬದ ಆರ್ಥಿಕ ಸುರಕ್ಷತೆಗೆ ಅತ್ಯಗತ್ಯ. ಕುಟುಂಬದ ಯಜಮಾನ ಅಥವಾ ಯಜಮಾನಿ ಸಾವನ್ನಪ್ಪಿದರೆ ಟರ್ಮ್ ಇನ್ಶುರೆನ್ಸ್ ಆ ಕುಟುಂಬಕ್ಕೆ ಆರ್ಥಿಕ ನೆರವನ್ನು ಒದಗಿಸುತ್ತದೆ. ಬನ್ನಿ ಟರ್ಮ್ ಇನ್ಶುರೆನ್ಸ್ ಬಗ್ಗೆ ನಮಗೆ ಗೊತ್ತಿರಲೇಬೇಕಾದ 10 ವಿಚಾರಗಳನ್ನು ತಿಳಿಯೋಣ.

1) ಏನಿದು ಟರ್ಮ್ ಲೈಫ್ ಇನ್ಶುರೆನ್ಸ್: ಟರ್ಮ್ ಇನ್ಶುರೆನ್ಸ್ ಅತ್ಯಂತ ಅಗ್ಗ ಮತ್ತು ಸುರಕ್ಷಿತ ಜೀವ ವಿಮೆ. ಕನ್ನಡದಲ್ಲಿ ಇದನ್ನು ಅವಧಿ ವಿಮೆ ಅಂತಲೂ ಕರೆಯುತ್ತಾರೆ. ಪಾಲಿಸಿದಾರರು ಆಕಸ್ಮಿಕ ಸಾವಿನ ವಿರುದ್ಧ ನಿರ್ದಿಷ್ಟ ಅವಧಿಗೆ ಪಡೆಯುವ ವಿಮೆ ರಕ್ಷಣೆ ಸೌಲಭ್ಯವನ್ನು 'ಟರ್ಮ್ ಇನ್ಶುರನ್ಸ್' ಒಳಗೊಂಡಿರುತ್ತದೆ. ಉದಾಹರಣೆಗೆ ವ್ಯಕ್ತಿಯೊಬ್ಬ ಮನೆಗೆ ಆಧಾರವಾಗಿ ದುಡಿಯುತ್ತಿರುತ್ತಾನೆ ಎಂದುಕೊಳ್ಳಿ. ಆತ ಅಥವಾ ಆಕೆ ಆಕಸ್ಮಿಕವಾಗಿ ಸಾವನ್ನಪ್ಪಿದ್ದರೆ ಅವರ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತದೆ. ಇಂತಹ ಸಂಕಷ್ಟಗಳಿಗೆ ಪರಿಹಾರವಾಗಿ ಟರ್ಮ್ ಇನ್ಶುರೆನ್ಸ್ ನಿಲ್ಲುತ್ತದೆ. ನಿಮ್ಮ ವಾರ್ಷಿಕ ಆದಾಯದ 15 ರಿಂದ 20 ಪಟ್ಟು ಟರ್ಮ್ ಲೈಫ್ ಇನ್ಶುರೆನ್ಸ್ ಖರೀದಿ ಮಾಡಬೇಕು ಎನ್ನುವುದು ಲೆಕ್ಕಾಚಾರ. ಆದರೆ ಒಂದೇ ಆದಾಯ ನೆಚ್ಚಿಕೊಂಡಿರುವವರು, ಮದುವೆಯಾಗಿರುವವರು, ಸಾಲ ಮಾಡಿರುವವರು ಸೇರಿದಂತೆ ಹೆಚ್ಚು ಆರ್ಥಿಕ ಹೊಣೆಗಾರಿಕೆ ಇರುವವರು ಅಗತ್ಯಕ್ಕೆ ತಕ್ಕಂತೆ ಇನ್ಶುರೆನ್ಸ್ ಮೊತ್ತ ಹೆಚ್ಚಿಸಿಕೊಳ್ಳಬೇಕು. 25 ವರ್ಷದ ವ್ಯಕ್ತಿ ವಾರ್ಷಿಕವಾಗಿ ಸುಮಾರು ₹12 ರಿಂದ ₹14 ಸಾವಿರ ಪ್ರೀಮಿಯಂ ಪಾವತಿಸಿದರೆ 1 ಕೋಟಿ ರೂಪಾಯಿ ಮೊತ್ತದ ಟರ್ಮ್ ಲೈಫ್ ಇನ್ಶುರೆನ್ಸ್ ಸಿಗುತ್ತದೆ. ಇನ್ಶುರೆನ್ಸ್ ಪಡೆದಿರುವ ವ್ಯಕ್ತಿ ಆಕಸ್ಮಿಕವಾಗಿ ಸಾವನ್ನಪ್ಪಿದರೆ 1 ಕೋಟಿ ರೂಪಾಯಿ ಅವರ ಕುಟುಂಬಕ್ಕೆ ಸಿಗುತ್ತದೆ.

2) ಕನಿಷ್ಠ ವಿದ್ಯಾರ್ಹತೆ ಏನು: ವಿದ್ಯಾರ್ಹತೆ ಅನ್ನೋ ಮಿತಿ ಇಲ್ಲ. ಆದರೂ ಕೆಲ ಇನ್ಶುರೆನ್ಸ್ ಕಂಪನಿಗಳು ಇದನ್ನು ಪರಿಗಣಿಸುತ್ತವೆ. ಪದವಿ ಅಥವಾ ಕನಿಷ್ಠ ಪಿಯುಸಿ ವರೆಗೆ ಓದಿದ್ದರೆ ಟರ್ಮ್ ಇನ್ಶುರೆನ್ಸ್ ಕಂಪನಿಗಳು ಕವರೇಜ್ ಕೊಡುವ ಸಾಧ್ಯತೆ ಹೆಚ್ಚು.

3) ಕನಿಷ್ಠ ಮತ್ತು ಗರಿಷ್ಠ ವಯೋಮಿತಿ ಎಷ್ಟು: 18 ರಿಂದ 65 ವರ್ಷ ವಯಸ್ಸಿನವರು ಟರ್ಮ್ ಇನ್ಶುರೆನ್ಸ್ ಪಡೆಯಬಹುದು. ಆದರೆ ವಯಸ್ಸಾದಂತೆ ಪ್ರೀಮಿಯಂ ಜಾಸ್ತಿಯಾಗುತ್ತದೆ. ಅಲ್ಲದೆ ಹೆಚ್ಚು ಆರೋಗ್ಯ ಸಮಸ್ಯೆ ಇದ್ದರೆ ಟರ್ಮ್ ಇನ್ಶುರೆನ್ಸ್ ಸಿಗುವುದೇ ಅನುಮಾನ. 65 ವರ್ಷದ ವ್ಯಕ್ತಿ ಮುಂದಿನ 10 ವರ್ಷಗಳ ಅವಧಿಗೆ (ಆತನಿಗೆ 75 ವರ್ಷ ಆಗುವ ವರೆಗೆ) ₹ 5 ಲಕ್ಷ ಕವರೇಜ್ ಇರುವ ಟರ್ಮ್ ಇನ್ಶುರೆನ್ಸ್ ತೆಗೆದುಕೊಳ್ಳಬೇಕಾದರೆ ತಿಂಗಳಿಗೆ ₹ 5,596 ಪ್ರೀಮಿಯಂ ಕಟ್ಟಬೇಕಾಗುತ್ತದೆ. ಆದರೆ ಅದೇ ₹ 50 ಲಕ್ಷ ಕವರೇಜ್ ಗೆ 25 ವರ್ಷದ ವ್ಯಕ್ತಿಗೆ ತಿಂಗಳಿಗೆ ₹ 629 ರೂಪಾಯಿ ಪ್ರೀಮಿಯಂ ಇರುತ್ತದೆ.

4) ವ್ಯಕ್ತಿಯ ಆರ್ಥಿಕ ಸ್ಥಿತಿ: ಟರ್ಮ್ ಇನ್ಶುರೆನ್ಸ್ ಪಡೆಯುವಾಗ ಕಂಪನಿಗಳು ನಿಮ್ಮ ಆರ್ಥಿಕ ಸ್ಥಿತಿಯನ್ನು ಪರಿಗಣಿಸುತ್ತವೆ. ನಿಮಗೆ ಸಂಬಳದ ಉದ್ಯೋಗವಿರಲಿ ಅಥವಾ ಸ್ವಂತ ಉದ್ಯೋಗವಿರಲಿ, ಸ್ಥಿರವಾದ ಆದಾಯ ಇದೆಯೇ ಎನ್ನುವುದನ್ನು ಇನ್ಶುರೆನ್ಸ್ ಕಂಪನಿಗಳು ಬಹುಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳುತ್ತವೆ. ನಿರಂತರವಾಗಿ ಪ್ರೀಮಿಯಂ ಕಟ್ಟಲು ನಿಮಗೆ ಆದಾಯವಿದೆಯೇ ಎನ್ನುವುದನ್ನು ಪರಿಶೀಲಿಸುತ್ತವೆ. ಸ್ಯಾಲರಿ ಸ್ಲಿಪ್, ಐಟಿಆರ್ ಸಲ್ಲಿಕೆ ವಿವರಗಳನ್ನು ಇನ್ಶುರೆನ್ಸ್ ಕಂಪನಿ ಕೇಳುತ್ತದೆ.

5) ಆರೋಗ್ಯ ಪರೀಕ್ಷೆ ಎಷ್ಟು ಮುಖ್ಯವಾಗುತ್ತದೆ: ಟರ್ಮ್ ಇನ್ಶುರೆನ್ಸ್ ಕಂಪನಿ ಕವರೇಜ್ ಕೊಡುವ ಮುನ್ನ ಇನ್ಶುರೆನ್ಸ್ ಪಡೆದುಕೊಳ್ಳುವ ವ್ಯಕ್ತಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸುತ್ತದೆ. ಆತನ ಆರೋಗ್ಯ ಸ್ಥಿತಿ ಆಧರಿಸಿ ಟರ್ಮ್ ಇನ್ಶುರೆನ್ಸ್ ಕೊಡಬಹುದೋ ಇಲ್ಲವೋ ಎನ್ನುವ ತೀರ್ಮಾನ ಮಾಡುತ್ತದೆ. ಆರೋಗ್ಯ ಸ್ಥಿತಿ ಅಷ್ಟು ಉತ್ತಮವಾಗಿಲ್ಲ ಎಂದರೆ ಪ್ರೀಮಿಯಂ ಜಾಸ್ತಿ ಮಾಡುವ ಸಾಧ್ಯತೆಯೂ ಇರುತ್ತದೆ. ಸಣ್ಣ ಮೊತ್ತದ ಕವರೇಜ್‌ಗೆ ಕೆಲ ಕಂಪನಿಗಳು ಮೆಡಿಕಲ್ ಟೆಸ್ಟ್ ಕೇಳುವುದಿಲ್ಲ. ಆದರೆ ದೊಡ್ಡ ಮೊತ್ತದ ಕವರೇಕ್‌ಗೆ ಕಡ್ಡಾಯವಾಗಿ ಮೆಡಿಕಲ್ ಟೆಸ್ಟ್‌ಗೆ ಸೂಚಿಸುತ್ತವೆ. ಮೆಡಿಕಲ್ ಟೆಸ್ಟ್‌ಗೆ ಹೋಗುವ ಮುನ್ನ ನಿಮ್ಮ ಆರೋಗ್ಯ ಸ್ಥಿತಿ ಬಗ್ಗೆ ನೀವು ಪ್ರಾಮಾಣಿಕವಾದ ಮಾಹಿತಿ ಒದಗಿಸಬೇಕು. ಸುಳ್ಳು ಮಾಹಿತಿ ನೀಡಿದರೆ ಟರ್ಮ್ ಇನ್ಶುರೆನ್ಸ್ ತಿರಸ್ಕಾರಗೊಳ್ಳುವ ಸಾಧ್ಯತೆ ಇರುತ್ತದೆ.

6) ನಾವು ಮಾಡುವ ಉದ್ಯೋಗ: ಹೆಚ್ಚು ರಿಸ್ಕ್ ಇರುವ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ಕೆಲ ಕಂಪನಿಗಳು ಟರ್ಮ್ ಇನ್ಶುರೆನ್ಸ್ ನೀಡುವುದಿಲ್ಲ. ಸೇನೆ, ಗಣಿಗಾರಿಕೆ, ಸಾಹಸ ಕ್ರೀಡೆ, ಮುಂತಾದ ರಿಸ್ಕ್ ಜಾಸ್ತಿ ಇರುವ ಕ್ಷೇತ್ರಗಳಿಗೆ ಇನ್ಶುರೆನ್ಸ್ ಸಿಗುವುದಿಲ್ಲ. ಕೆಲ ಕಂಪನಿಗಳು ಇನ್ಶುರೆನ್ಸ್ ನೀಡಿದರೂ ಪ್ರೀಮಿಯಂ ಹೆಚ್ಚಿಗೆ ಪಡೆಯುತ್ತವೆ.

7) ಭಾರತೀಯ ಪ್ರಜೆಯಾಗಿರಬೇಕೇ: ಟರ್ಮ್ ಇನ್ಶುರೆನ್ಸ್ ಪಡೆಯುವಾಗ ಟರ್ಮ್ ಪ್ಲಾನ್ ಪಡೆಯುವ ವ್ಯಕ್ತಿಯೂ ಭಾರತೀಯ ಪ್ರಜೆಯಾಗಿರಬೇಕು. ಕವರೇಜ್ ಪಡೆದ ನಂತರದಲ್ಲಿ ಶಿಕ್ಷಣ ಅಥವಾ ಉದ್ಯೋಗಕ್ಕಾಗಿ ವಿದೇಶಕ್ಕೆ ಹೋದರೆ ಕವರೇಜ್ ಮಾನ್ಯವಾಗುತ್ತದೆ.

8) ಯಾವೆಲ್ಲಾ ದಾಖಲೆಗಳು ಬೇಕು: ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್, ಇನ್ಕಮ್ ಪ್ರೂಫ್, ಅಡ್ರೆಸ್ ಪ್ರೂಫ್, ಸೇರಿ ಕೆಲ ದಾಖಲೆಗಳು ಬೇಕಾಗುತ್ತವೆ. ಕೆವೈಸಿಗೆ ಪೂರಕವಾಗಿರುವ ದಾಖಲೆಗಳಿದ್ದರೆ ಸಾಕು.

9) ಯಾವೆಲ್ಲಾ ರೀತಿಯ ಸಾವುಗಳಿಗೆ ಕವರೇಜ್ ಅನ್ವಯ: ಟರ್ಮ್ ಇನ್ಶುರನ್ಸ್‌ನಲ್ಲಿ ಅಪಘಾತದಿಂದ ಸಾವು, ವಯೋಸಹಜ ಸಾವು, ಅನಾರೋಗ್ಯದಿಂದ ಸಾವು ಮತ್ತು ಗಂಭೀರ ಅನಾರೋಗ್ಯದಿಂದ ಆಗುವ ಸಾವುಗಳಿಗೆ ಕವರೇಜ್ ಸಿಗುತ್ತದೆ.

10) ಯಾವೆಲ್ಲಾ ರೀತಿಯ ಸಾವುಗಳಿಗೆ ಕವರೇಜ್ ಇರುವುದಿಲ್ಲ: ಆತ್ಮಹತ್ಯೆಗೆ ಟರ್ಮ್ ಇನ್ಶುರೆನ್ಸ್ ಕವರೇಜ್ ಸಿಗುವುದಿಲ್ಲ. ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡರೆ ಕಟ್ಟಿರುವ ಪ್ರೀಮಿಯಂ ಅನ್ನು ಇನ್ಶುರೆನ್ಸ್ ಕಂಪನಿ ನಾಮಿನಿಗೆ ಹಿಂದಿರುಗಿಸುತ್ತದೆ. ಇನ್ನು ಮದ್ಯಪಾನ, ಡ್ರಗ್ಸ್ ಸೇವನೆ ಮಾಡಿ ವಾಹನ ಅಪಘಾತದಿಂದ ಸಾವು, ಸಾಹಸ ಕ್ರೀಡೆಯಿಂದ ಸಾವು, ಅತಿಯಾದ ಮದ್ಯ- ಡ್ರಗ್ಸ್ ಸೇವನೆಯಿಂದ ಸಾವು, ಸೇರಿ ಈ ರೀತಿಯ ಪ್ರಕರಣಗಳಲ್ಲಿ ಕವರೇಜ್ ಸಿಗುವುದಿಲ್ಲ. ಗರ್ಭಿಣಿ ಸಾವನ್ನಪ್ಪಿದ್ರೆ ಕವರೇಜ್ ಸಿಗುವುದಿಲ್ಲ. ಎಚ್ ಐವಿ, ಏಡ್ಸ್ ನಿಂದ ಸಾವನ್ನಪ್ಪಿದ್ದರೆ ಕವರೇಜ್ ಮಾನ್ಯವಾಗುವುದಿಲ್ಲ. ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದರೆ ಕವರೇಜ್ ಲಭಿಸುವುದಿಲ್ಲ. ಪಾಲಿಸಿ ಹಣಕ್ಕಾಗಿ ಪಾಲಿಸಿದಾರರನ್ನು ಕೊಂದರೆ ಕವರೇಜ್ ದಕ್ಕುವುದಿಲ್ಲ. ಪ್ರಾಕೃತಿಕ ವಿಕೋಪಗಳಿಗೆ ಕವರೇಜ್ ಸಿಗದು.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಸತತ ಐದನೇ ವಾರವೂ ಜಿಗಿದ ಷೇರುಪೇಟೆ

ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಐದನೇ ವಾರವೂ ಗಳಿಕೆ ಕಂಡಿವೆ. ಡಿಸೆಂಬರ್ 1ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಜಿಗಿತ ಕಂಡಿವೆ. 67,481 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.29 ರಷ್ಟು ಹೆಚ್ಚಳ ಕಂಡಿದೆ. 20,267 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.39 ರಷ್ಟು ಪುಟಿದೆದ್ದಿದೆ. ವಿದೇಶಿ ಹೂಡಿಕೆದಾರರಿಂದ ಖರೀದಿ ಭರಾಟೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ತೈಲ ಬೆಲೆ ಇಳಿಕೆ, ತಗ್ಗಿದ ಬಾಂಡ್ ಗಳಿಕೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿ ನೋಡಿದಾಗ ಎಲ್ಲಾ ಕ್ಷೇತ್ರಗಳೂ ಸಕಾರಾತ್ಮಕವಾಗಿ ಕಂಡುಬಂದಿವೆ. ಬಿಎಸ್‌ಇ ಅನಿಲ ಮತ್ತು ತೈಲ ಸೂಚ್ಯಂಕ ಮತ್ತು ಪವರ್ ಸೂಚ್ಯಂಕ ತಲಾ ಶೇ 5.7 ರಷ್ಟು ಜಿಗಿದಿವೆ. ಬಿಎಸ್‌ಇ ಕ್ಯಾಪಿಟಲ್ ಗೂಡ್ಸ್ ಶೇ 3.6 ಮತ್ತು ಬಿಎಸ್‌ಇ ಮೆಟಲ್ ಸೂಚ್ಯಂಕ ಶೇ 3 ರಷ್ಟು ಹೆಚ್ಚಳವಾಗಿದೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಟೋಟಲ್ ಗ್ಯಾಸ್, ಅದಾನಿ ಎನರ್ಜಿ ಸಲ್ಯೂಷನ್ಸ್, ಅದಾನಿ ಪವರ್, ಹಿಂದುಸ್ತಾನ್ ಏರೊನಾಟಿಕ್ಸ್, ಅದಾನಿ ಗ್ರೀನಿ ಎನರ್ಜಿ, ಎಕ್ಸಿಸ್ ಬ್ಯಾಂಕ್ ಮತ್ತು ಗೇಲ್ ಇಂಡಿಯಾ ಗಳಿಕೆ ಕಂಡಿವೆ. ಬಿಎಸ್‌ಇ ಮಿಡ್ ಕ್ಯಾಪ್ ನಲ್ಲಿ ಟೋರೆಂಟ್ ಪವರ್, ಪವರ್ ಫೈನಾನ್ಸ್ ಕಾರ್ಪೊರೇಷನ್, ಭಾರತ್ ಹೆವಿ ಎಲೆಕ್ಟ್ರಿಕಲ್ಸ್, ಆರ್‌ಇಸಿ, ನ್ಯೂ ಇಂಡಿಯಾ ಅಶುರೆನ್ಸ್ ಕಂಪನಿ, ಮುತ್ತೂಟ್ ಫೈನಾನ್ಸ್, ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಗಳಿಕೆ ಕಂಡಿವೆ. ವರ್ಲ್ ಪೂಲ್ ಇಂಡಿಯಾ, ಸೋಲಾರ್ ಇಂಡಸ್ಟ್ರೀಸ್ ಇಂಡಿಯಾ, ಟ್ಯೂಬ್ ಇನ್ವೆಸ್ಟ್ ಮೆಂಟ್ಸ್, ಎಪಿಎಲ್ ಅಪೋಲೋ ಟ್ಯೂಬ್ಸ್ ಶೇ 3 ರಿಂದ ಶೇ 9 ರಷ್ಟು ಕುಸಿದಿವೆ.

ಮುನ್ನೋಟ: ಐದು ರಾಜ್ಯಗಳ ಚುನಾವಣಾ ಫಲಿತಾಂಶ ಷೇರುಪೇಟೆ ಮೇಲೆ ಒಂದಿಷ್ಟು ಪರಿಣಾಮ ಬೀರುವ ಸಾಧ್ಯತೆಯಿದೆ. ಡಿಸೆಂಬರ್ 6 ರಿಂದ 8ರ ವರೆಗೆ ಆರ್‌ಬಿಐ ಹಣಕಾಸು ಸಮಿತಿ ಸಭೆ ಜರುಗಲಿದೆ. ಬಡ್ಡಿ ದರ ವಿಚಾರವಾಗಿ ಆರ್‌ಬಿಐ ಯಾವ ನಿಲುವು ತಳೆಯಲಿದೆ ಎನ್ನುವುದು ಮಾರುಕಟ್ಟೆ ಮೇಲೆ ಪರಿಣಾಮ ಬೀರಲಿದೆ.

9 ಕಂಪನಿಗಳ ಎಂಕ್ಯಾಪ್ ಮೌಲ್ಯ ₹1.30 ಲಕ್ಷ ಕೋಟಿಯಷ್ಟು ಏರಿಕೆ

ನವದೆಹಲಿ (ಪಿಟಿಐ): ಪ್ರಮುಖ 10 ಕಂಪನಿಗಳ ಪೈಕಿ 9 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯ (ಎಂಕ್ಯಾಪ್) ಕಳೆದ ವಾರ ₹1.30 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ.

ಭಾರ್ತಿ ಏರ್‌ಟೆಲ್ ಮತ್ತು ಟಾಟಾ ಕನ್ಸಲ್ಟೆನ್ಸಿ ಸರ್ವಿಸ್ (ಟಿಸಿಎಸ್) ಹೆಚ್ಚು ಗಳಿಸಿವೆ.

ಭಾರ್ತಿ ಏರ್‌ಟೆಲ್ ಮೌಲ್ಯ ₹23,746 ಕೋಟಿ, ಟಿಸಿಎಸ್ ₹19,027 ಕೋಟಿ, ಎಚ್‌ಡಿಎಫ್‌ಸಿ ₹17,881 ಕೋಟಿ, ಐಟಿಸಿ ₹15,159 ಕೋಟಿ, ಬಜಾಜ್ ಫೈನಾನ್ಸ್ ₹14,480 ಕೋಟಿ, ಐಸಿಐಸಿಐ ಬ್ಯಾಂಕ್ ₹12,085 ಕೋಟಿ, ಹಿಂದೂಸ್ತಾನ್ ಯೂನಿಲಿವರ್ ₹11,348 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ₹10,307 ಕೋಟಿ ಮತ್ತು ಇನ್ಫೊಸಿಸ್ ₹6,355 ಕೋಟಿಯಷ್ಟು ಎಂ ಕ್ಯಾಪ್ ಗಳಿಸಿವೆ.

ರಿಲಯನ್ಸ್ ಇಂಡಸ್ಟ್ರೀಸ್‌ನ ಮಾರುಕಟ್ಟೆ ಮೌಲ್ಯ ₹574 ಕೋಟಿಯಷ್ಟು ಇಳಿಕೆ ಕಂಡಿದೆ.

ಪ್ರಮುಖ 10 ಕಂಪನಿಗಳ ಪೈಕಿ ರಿಲಯನ್ಸ್ ಇಂಡಸ್ಟ್ರೀಸ್ ಮೌಲ್ಯಯುತ ಸಂಸ್ಥೆ ಎಂಬ ಹೆಗ್ಗಳಿಕೆ ಉಳಿಸಿಕೊಂಡಿದೆ. ನಂತರದ ಸ್ಥಾನಗಳಲ್ಲಿ ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಇನ್ಫೊಸಿಸ್, ಹಿಂದೂಸ್ತಾನ್ ಯೂನಿಲಿವರ್, ಭಾರ್ತಿ ಏರ್‌ಟೆಲ್, ಐಟಿಸಿ, ಎಸ್‌ಬಿಐ ಮತ್ತು ಬಜಾಜ್ ಫೈನಾನ್ಸ್ ಇದೆ.


ಕಳೆದ ವಾರ ಮುಂಬೈ ಷೇರು ವಿನಿಮಯ ಕೇಂದ್ರ (ಬಿಎಸ್‌ಇ) 1,511 ಅಂಶ ಅಥವಾ ಶೇ 2.29ರಷ್ಟು ಏರಿಕೆಯಾಗಿದೆ.

ಹೋಂಡಾ ಕಾರು ಬೆಲೆ ಶೀಘ್ರ ಹೆಚ್ಚಳ

ನವದೆಹಲಿ (ಪಿಟಿಐ): 'ಹೋಂಡಾಕಾರ್ಸ್‌ಇಂಡಿಯಾಕಂಪನಿ'ಯು 2024ರ ಜನವರಿಯಿಂದ ತನ್ನ ಎಲ್ಲ ಮಾದರಿ ವಾಹನಗಳ ಬೆಲೆ ಹೆಚ್ಚಿಸಲು ಉದ್ದೇಶಿಸಿದೆ ಎಂದು ಕಂಪನಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಯಾರಿಕಾ ವೆಚ್ಚ ಹೆಚ್ಚಳದಿಂದ ಎಲ್ಲ ಮಾದರಿಯ ಕಾರುಗಳ ಬೆಲೆಯನ್ನು ಮುಂದಿನ ತಿಂಗಳಿಂದ ಹೆಚ್ಚಿಸಲಾಗುವುದು ಎಂದು ಹೋಂಡಾ ಕಾರ್ಸ್‌ನ ಭಾರತೀಯ ಉಪಾಧ್ಯಕ್ಷ (ಮಾರ್ಕೆಟಿಂಗ್ ಮತ್ತು ಸೇಲ್ಸ್) ಕುನಾಲ್ ಬೆಲ್ವಾ ತಿಳಿಸಿದ್ದಾರೆ. ಈ ತಿಂಗಳ ಅಂತ್ಯದೊಳಗೆ ಮಾದರಿವಾರು ಕಾರುಗಳ ಬೆಲೆ ಹೆಚ್ಚಳದ ಮೊತ್ತವನ್ನು ಅಂತಿಮಗೊಳಿಸಲಾಗುವುದು ಎಂದು ಹೇಳಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹285-490

ದ್ವಿತಳಿ (ಬಿ.ವಿ) ₹345-572

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹525
12 ಮೊಟ್ಟೆಗೆ ₹73
ಮೈಸೂರು
100 ಮೊಟ್ಟೆಗೆ ₹525

ಜನರ ಸ್ಥಳಾಂತರಕ್ಕೆ ಇಸ್ರೇಲ್ ಆದೇಶ

ಖಾನ್ ಯೂನಿಸ್ (ಎಪಿ): ಗಾಜಾದ ಎರಡನೇ ಅತಿ ದೊಡ್ಡ ನಗರವಾದ ಖಾನ್ ಯೂನಿಸ್ ಸುತ್ತ ಮುತ್ತಲಿನ ಪ್ರದೇಶದಲ್ಲಿ ವಾಸಿಸುವ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಇಸ್ರೇಲ್‌ನ ಸೇನಾಪಡೆ ಭಾನುವಾರ ಆದೇಶಿಸಿದೆ.

ದಕ್ಷಿಣ ಗಾಜಾದ ಖಾನ್ ಯೂನಿಸ್ ನಗರದಲ್ಲಿ ಹಲವು ಮಂದಿ ಹಮಾಸ್ ಮುಖಂಡರು ಅಡಗಿಕೊಂಡಿದ್ದು, ಅವರನ್ನು ಸದೆಬಡಿಯಲು ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ ಎಂದು ಇಸ್ರೇಲ್ ಸೇನೆಯ ಮೂಲಗಳು ತಿಳಿಸಿವೆ.

ದಕ್ಷಿಣ ರಫಾದ ಕಡೆಗೆ ಅಥವಾ ನೈಋತ್ಯ ಕರಾವಳಿ ಪ್ರದೇಶದ ಕಡೆಗೆ ತೆರಳುವಂತೆ ಸೂಚಿಸಿ, ಇಸ್ರೇಲ್ ಪಡೆಗಳು ಕರಪತ್ರಗಳನ್ನು ಹಂಚಿವೆ. ಖಾನ್ ಯೂನಿಸ್ ಮತ್ತು ರಫಾ ನಗರದ ಮೇಲೆ ಇಸ್ರೇಲ್ ಪಡೆಗಳು ಭಾರಿ ಬಾಂಬ್ ದಾಳಿ ನಡೆಸಿವೆ. ಖಾನ್ ಯೂನಿಸ್ ನಗರದ ವಸತಿ ಸಮುಚ್ಚಯದ ಮೇಲೆ ನಡೆದ ವಾಯುದಾಳಿಯಲ್ಲಿ ಮೂವರು ಮೃತಪಟ್ಟಿದ್ದು, 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಹಮಾಸ್ ದಾಳಿಯ ಬಳಿಕ ನಾಪತ್ತೆಯಾಗಿದ್ದ ಹಲವರು, ಬಂಡುಕೋರರ ಒತ್ತೆಸೆರೆಯಲ್ಲೇ ಮೃತಪಟ್ಟಿದ್ದಾರೆ ಎಂದು ಇಸ್ರೇಲ್‌ನ ತ್ರಿಸದಸ್ಯ ವೈದ್ಯಕೀಯ ಸಮಿತಿ ಭಾನುವಾರ ಹೇಳಿದೆ.

ಕಲಬುರಗಿ ಓಪನ್ ಐಟಿಎಫ್ ಟೆನಿಸ್: ಆಸ್ಟ್ರಿಯಾದ ಡೇವಿಡ್ ರನ್ನರ್‌ಅಪ್

ರಾಮಕುಮಾರ್‌ಗೆ ಸಿಂಗಲ್ಸ್ ಗರಿ

• ಬಸವರಾಜ ದಳವಾಯಿ



ಪ್ರಶಸ್ತಿ ಗೆದ್ದ ಭಾರತದ ರಾಮಕುಮಾರ್ ರಾಮನಾಥನ್ ಹಾಗೂ ರನ್ನರ್ ಅಪ್ ಸ್ಥಾನ ಗಳಿಸಿದ ಆಸ್ಟ್ರಿಯಾದ ಡೇವಿಡ್ ಪಿಚ್ಲರ್ ಸಂಭ್ರಮ. –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಕಲಬುರಗಿ: ಜಾಣ್ಮೆ ಮತ್ತು ಕೌಶಲಭರಿತ ಆಟದ ಸೊಬಗು ಉಣಬಡಿಸಿದ ರಾಮಕುಮಾರ್ ರಾಮನಾಥನ್ ಅವರು ಗೆಲುವಿನ ಸಂಭ್ರಮ ಆಚರಿಸಿದರು.

ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಕೊನೆಗೊಂಡ ಕಲಬುರಗಿ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಅವರು 6–2, 6–1ರಿಂದ ಆಸ್ಟ್ರಿಯಾದ ಡೇವಿಡ್ ಪಿಚ್ಲರ್ ಅವರನ್ನು ಮಣಿಸಿ ಚಾಂಪಿಯನ್ ಪಟ್ಟ ಧರಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಟೆನಿಸ್ ಪ್ರಿಯರು ಕ್ರೀಡಾಂಗಣಕ್ಕೆ ಬಂದಿದ್ದರು. ಬಿಸಿಲಿನ ತಾಪ ನಿಧಾನಗತಿಯಲ್ಲಿ ಏರುವ ಹೊತ್ತಲ್ಲಿ ಕೇವಲ 64 ನಿಮಿಷಗಳ ಆಟದಲ್ಲಿ ಎದುರಾಳಿಯ ಸವಾಲನ್ನು ಹತ್ತಿಕ್ಕಿದರು ರಾಮಕುಮಾರ್.

ಭಾರತದ ಆಟಗಾರ ಇಲ್ಲಿ ಐದನೇ ಶ್ರೇಯಾಂಕ ಪಡೆದಿದ್ದರೆ, ಡೇವಿಡ್ ಅವರಿಗೆ ಏಳನೇ ಶ್ರೇಯಾಂಕ ಲಭಿಸಿತ್ತು.

ಮೊದಲ ಸೆಟ್‌ನ ನಾಲ್ಕನೇ ಗೇಮ್‌ವರೆಗೆ ಇಬ್ಬರೂ ಸಮಬಲದ ಹೋರಾಟ ನಡೆಸಿದರು.ಸರ್ವ್‌ನಲ್ಲಿ ಹೆಚ್ಚು ಶಕ್ತಿಶಾಲಿಯಾಗಿ ಕಂಡು ಬಂದ ರಾಮಕುಮಾರ್, ಐದನೇ ಗೇಮ್ ಜಯಿಸಿ 3–2ರ ಮುನ್ನಡೆ ಸಾಧಿಸಿದರು. ಆ ಬಳಿಕ ಹಿಂದಿರುಗಿ ನೋಡಲಿಲ್ಲ.

ಆರನೇ ಗೇಮ್‌ನಲ್ಲಿ ಡೇವಿಡ್ ಅವರ ಸರ್ವ್ ಬ್ರೇಕ್ ಮಾಡಿದ ಅವರು ನಂತರ ಸತತ ಎರಡು ಗೇಮ್ ಜಯಿಸಿ ಸೆಟ್ ಕೈವಶ ಮಾಡಿಕೊಂಡರು.

ಈ ಸೆಟ್‌ನ ಎಂಟನೇ ಗೇಮ್ ವೇಳೆ ರಾಮನಾಥನ್ ಹೊಡೆದ ಚೆಂಡು, ಎದುರಾಳಿ ಅಂಕಣದ ಸೈಡ್‌ಲೈನ್‌ನ ಆಚೆ ಬಿದ್ದಂತೆ ಕಾಣಿಸಿತು. ಆದರೆ ಅಂಪೈರ್ 'ಔಟ್' ನೀಡಲಿಲ್ಲ. ಇದರಿಂದ ಕುಪಿತರಾದ ಡೇವಿಡ್ ಅವರು ಅಂಪೈರ್ ಜೊತೆ ವಾಗ್ವಾದ ನಡೆಸಿದರು. ಎರಡನೇ ಸೆಟ್‌ನಲ್ಲಿ ಆಸ್ಟ್ರಿಯಾ ಆಟಗಾರ ತೀರಾ ಮಂಕಾದಂತೆ ಕಂಡುಬಂದರು. ತೀವ್ರ ಹತಾಶರಾದಂತಿದ್ದ ಅವರು ಅಂಪೈರ್‌ರೊಂದಿಗೆ ಮಾತಿನ ಚಕಮಕಿ ನಡೆಸುತ್ತಲೇ ಇದ್ದರು.

ಎರಡನೇ ಸೆಟ್‌ನಲ್ಲಿ ಕೇವಲ ಎರಡನೇ ಗೇಮ್ ಗೆಲ್ಲಲಷ್ಟೇ ಅವರಿಗೆ ಸಾಧ್ಯವಾಯಿತು.

ನಾಲ್ಕನೇ ಗೇಮ್‌ನಲ್ಲಿ ಮಾತ್ರ ಸ್ವಲ್ಪ ಪೈಪೋಟಿ ಕಂಡುಬಂದು ಡ್ಯುಸ್ ವರೆಗೆ ಸಾಗಿತ್ತು. ಉಳಿದ ಎಲ್ಲ ಗೇಮ್ ಗಳಲ್ಲೂ ರಾಮನಾಥನ್ ಪಾರಮ್ಯ ಮೆರೆದರು.

ಮುಖ್ಯಾಂಶಗಳು

- 25: ಸಿಂಗಲ್ಸ್ ಚಾಂಪಿಯನ್‌ಗೆ ದೊರೆತ ಎಟಿಪಿ ಪಾಯಿಂಟ್ಸ್
- ₹ 2.65 ಲಕ್ಷ: ರಾಮಕುಮಾರ್ ಅವರಿಗೆ ಬಹುಮಾನ ಮೊತ್ತ
- ₹ 1.76 ಲಕ್ಷ: ಡೇವಿಡ್‌ಗೆ ಬಹುಮಾನ ಮೊತ್ತ

ಕರ್ನಾಟಕಕ್ಕೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ



ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಉತ್ತರಾಖಂಡ ವಿರುದ್ಧ ಗೆಲುವು ಸಾಧಿಸಿದ ಕರ್ನಾಟಕ ಆಟಗಾರರು ಸಂಭ್ರಮಿಸಿದರು. ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮೈಸೂರು: ಸಾಂಘಿಕ ಪ್ರದರ್ಶನ ತೋರಿದ ಕರ್ನಾಟಕ ತಂಡ ಉತ್ತರಾಖಂಡದ ವಿರುದ್ಧ ಇನಿಂಗ್ಸ್ ಮತ್ತು 47 ರನ್‌ಗಳಿಂದ ಭರ್ಜರಿ ಗೆಲುವು ಸಾಧಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಒಂದು ದಿನ ಬಾಕಿ ಇರುವಂತೆಯೇ ಕರ್ನಾಟಕದ ಆಟಗಾರರು ಜಯಭೇರಿ ಬಾರಿಸಿ ಸಂಭ್ರಮಿಸಿದರು.

3ನೇ ದಿನದಾಟ ಮುಂದುವರಿಸಿದ ಕರ್ನಾಟಕ ಒಟ್ಟು 97.5 ಓವರ್‌ಗಳಲ್ಲಿ 404 ರನ್‌ಗಳ ಬೃಹತ್ ಮೊತ್ತ ಕಲೆ ಹಾಕಿ ಇನಿಂಗ್ಸ್ ಮುನ್ನಡೆ ಗಳಿಸಿತು. ಉತ್ತರಾಖಂಡದ ಆದಿತ್ಯ ರಾವತ್ 4, ಡಿ.ಪಿ. ಸಿಂಗ್ ಮತ್ತು ಕೃಷ್ಣ ಗಾರ್ಗ್ ತಲಾ 2 ವಿಕೆಟ್ ಗಳಿಸಿದರು.

ದೊಡ್ಡ ಗುರಿಯ ಬೆನ್ನತ್ತಿದ ಉತ್ತರಾಖಂಡ ಆಟಗಾರರಿಗೆ ಕರ್ನಾಟಕದವರು ಚುರುಕಿನ ಬೌಲಿಂಗ್, ಉತ್ತಮ ಫೀಲ್ಡಿಂಗ್ ಮೂಲಕ ಕಾಡಿದರು. ಈ ಪರಿಣಾಮ ಪ್ರವಾಸಿ ತಂಡ 56.5 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 125 ರನ್‌ಗಳನ್ನಷ್ಟೆ ಗಳಿಸಲು ಶಕ್ತವಾಯಿತು. ನಾಯಕ ಆರವ್ ಮಹಾಜನ್ ಗಾಯದ ಕಾರಣ ಆಡಲಿಲ್ಲ.

2ನೇ ಇನಿಂಗ್ಸ್‌ನಲ್ಲೂ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಧೀರಜ್ ಗೌಡ (31ಕ್ಕೆ 3) ತಂಡದ ಗೆಲುವಿಗೆ ದೊಡ್ಡ ಕಾಣಿಕೆ (7 ಮೇಡನ್ ಓವರ್) ನೀಡಿದರು.

ಸಮರ್ಥ್ ಎನ್. ಹಾಗೂ ಇಶಾನ್ ತಲಾ 2 ವಿಕೆಟ್ ಪಡೆದರೆ, ಸಮಿತ್ ದ್ರಾವಿಡ್ ಮತ್ತು ಹಾರ್ದಿಕ್ ರಾಜ್ ತಲಾ 1 ವಿಕೆಟ್ ಗಳಿಸಿದರು.

99 ರನ್ ಗಳಿಸುವಷ್ಟರಲ್ಲೇ 8 ವಿಕೆಟ್ ಕಳೆದುಕೊಂಡಿದ್ದ ಉತ್ತರಾಖಂಡಕ್ಕೆ ಯೋಗೇಶ್ (ಅಜೇಯ 54, 5x4) ಕೊಂಚ ನೆರವಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರಾಖಂಡ 90.1 ಓವರ್‌ಗಳಲ್ಲಿ 9 ವಿಕೆಟ್‌ಗೆ 232 (ಆರವ್ ಮಹಾಜನ್ 127, ಸಂಸ್ಕಾರ್ ರಾವತ್ 43, ಇಶಾನ್ ಎಸ್. 49ಕ್ಕೆ3, ಧೀರಜ್ ಗೌಡ 62ಕ್ಕೆ3, ಸಮರ್ಥ್ ಎನ್. 17ಕ್ಕೆ2). ಕರ್ನಾಟಕ: 97.5 ಓವರ್‌ಗಳಲ್ಲಿ 404 (ಪ್ರಖರ್ ಚತುರ್ವೇದಿ 151, ಕೆ.ಪಿ. ಕಾರ್ತಿಕೇಯ 121, ಶಿಖರ್ ಶೆಟ್ಟಿ 14, ಆದಿತ್ಯ ರಾವತ್ 82ಕ್ಕೆ 4, ಡಿ.ಪಿ.ಸಿಂಗ್ 79ಕ್ಕೆ 2, ಕೃಷ್ಣ ಗಾರ್ಗ್ 61ಕ್ಕೆ 2, ರಾಜ್ಯವರ್ಧನ್ 83ಕ್ಕೆ 1.

ಎರಡನೇ ಇನಿಂಗ್ಸ್: ಉತ್ತರಾಖಂಡ 56.5 ಓವರ್‌ಗಳಲ್ಲಿ 9 ವಿಕೆಟ್‌ಗೆ 125 (ಯೋಗೇಶ್ ಅಜೇಯ 54, ಆದಿತ್ಯ ರಾವತ್ 17, ಡಿ.ಪಿ. ಸಿಂಗ್ 12, ಧೀರಜ್‌ಗೌಡ 31ಕ್ಕೆ 3, ಸಮರ್ಥ್ ಎನ್. 14ಕ್ಕೆ 2, ಇಶಾನ್ ಎಸ್. 16ಕ್ಕೆ 2).

ಕ್ರೀಡಾ ಪ್ರಶಸ್ತಿ ಸಮಿತಿಗೆ ನಿವೃತ್ತ ನ್ಯಾಯಮೂರ್ತಿ ಅಧ್ಯಕ್ಷತೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಅತ್ಯುನ್ನತ ಕ್ರೀಡಾ ಪ್ರಶಸ್ತಿಗಳಿಗೆ ಅರ್ಹರನ್ನು ಆಯ್ಕೆ ಮಾಡುವ ಸಲುವಾಗಿ ನಿವೃತ್ತ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅಧ್ಯಕ್ಷತೆಯಲ್ಲಿ 12 ಸದಸ್ಯರ ಸಮಿತಿಯನ್ನು ಕೇಂದ್ರ ಕ್ರೀಡಾ ಸಚಿವಾಲಯ ಭಾನುವಾರ ಪ್ರಕಟಿಸಿದೆ.

ಈ ಸಮಿತಿಯು ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ, ಅರ್ಜುನ ಹಾಗೂ ದ್ರೋಣಾಚಾರ್ಯ ಪ್ರಶಸ್ತಿಗಳಿಗೆ ಕ್ರೀಡಾಪಟುಗಳನ್ನು ಆಯ್ಕೆ ಮಾಡಲಿದೆ.

ಸಮಿತಿಯಲ್ಲಿ ಹಾಕಿ ಕ್ರೀಡೆಯ ದಿಗ್ಗಜ ಧನರಾಜ್ ಪಿಳ್ಳೆ, ಒಲಿಂಪಿಯನ್ ಬಾಕ್ಸರ್ ಅಖಿಲ್ ಕುಮಾರ್, ಶೂಟರ್ ಸುಮಾ ಶಿರೂರ್, ಟೇಬಲ್ ಟೆನಿಸ್ ಆಟಗಾರ ಕಮಲೇಶ್ ಮೆಹ್ತಾ, ಮಾಜಿ ಕ್ರಿಕೆಟ್ ಆಟಗಾರ್ತಿ ಅಂಜುಂ ಚೋಪ್ರಾ, ಮಾಜಿ ಬ್ಯಾಡ್ಮಿಂಟನ್‌ಪಟು ತೃಪ್ತಿ ಮುರ್ಗುಂಡೆ ಮತ್ತು ಪವರ್ ಲಿಫ್ಟಿಂಗ್ ಫೆಡರೇಷನ್‌ನ ಫರ್ಮಾನ್ ಬಾಷಾ ಇದ್ದಾರೆ.

ಪತ್ರಕರ್ತ ಅಭಿಷೇಕ್ ತ್ರಿಪಾಠಿ, ಸಾಯ್ ಡಿ.ಜಿ ಸಂದೀಪ್ ಪ್ರಧಾನ್, ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಯ ಸಿಇಒ ಪುಷ್ಪೇಂದ್ರ ಗರ್ಗ್ ಮತ್ತು ಎಂವೈಎಎಸ್ ಜಂಟಿ ಕಾರ್ಯದರ್ ಪ್ರೇಮ್ ಕುಮಾರ್ ಝಾ ಸಮಿತಿಯಲ್ಲಿ ಇದ್ದಾರೆ.

ಸಂಕ್ಷಿಪ್ತ ಸುದ್ದಿ

ರಾಷ್ಟ್ರೀಯ ಶಿಬಿರ ಸ್ಥಗಿತ: ಎಎಫ್‌ಐ

ಅಮೃತಸರ (ಪಿಟಿಐ): ಪ್ಯಾರಿಸ್ ಒಲಿಂಪಿಕ್ ಕೂಟದ ಬಳಿಕ ಪ್ರಮುಖ ಅಥ್ಲೀಟ್ ಗಳಿಗೆ ರಾಷ್ಟ್ರೀಯ ಶಿಬಿರ ನಡೆಸುವುದನ್ನು ನಿಲ್ಲಿಸಲು ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಭಾನುವಾರ ನಿರ್ಧರಿಸಿದೆ. ಆಟಗಾರರಿಗೆ ಪ್ರಾಯೋಜಕತ್ವ ನೀಡಲು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಿಗೆ ಮುಕ್ತ ಅವಕಾಶ ಕಲ್ಪಿಸಿದೆ.

'ಮುಂದಿನ ವರ್ಷದಿಂದ ರಾಷ್ಟ್ರೀಯ ಸೀನಿಯರ್ ತರಬೇತಿ ಶಿಬಿರ ನಡೆಸುವುದನ್ನು ನಿಲ್ಲಿಸಲಾಗುವುದು ಎಂಬುದನ್ನು ಕ್ರೀಡಾ ಸಚಿವಾಲಯಕ್ಕೆ ತಿಳಿಸಿದ್ದೇವೆ. ಸಾಯ್ ಎನ್‌ಸಿಒಇ (ನ್ಯಾಷನಲ್ ಸೆಂಟರ್ ಆಫ್ ಎಕ್ಸಲೆನ್ಸ್) ಗಳಲ್ಲಿ ಉತ್ತಮ ಸೌಲಭ್ಯಗಳಿವೆ. ರಿಲಯನ್ಸ್, ಜೆಎಸ್‌ಡಬ್ಲ್ಯು, ಟಾಟಾ ಮತ್ತು ಇತರ ಖಾಸಗಿ ಸಂಸ್ಥೆಗಳು ಸಹ ಉತ್ತಮ ಸೌಲಭ್ಯ ಹೊಂದಿವೆ. ದೊಡ್ಡ ಮೊತ್ತ ಹೂಡಿಕೆ ಮಾಡಿ, ವಿದೇಶಿ ತರಬೇತದಾರರನ್ನು ನೇಮಿಸಿದ್ದಾರೆ. ಅವರು ಕ್ರೀಡಾಪಟುಗಳಿಗೆ ತರಬೇತಿ ನೀಡಬಹುದು' ಎಂದು ಎಎಫ್‌ಐ ಅಧ್ಯಕ್ಷ ಆದಿಲ್ಲೆ ಸುಮರಿವಾಲಾ ತಿಳಿಸಿದರು.

'ಖಾಸಗಿ ಸಂಸ್ಥೆಗಳಲ್ಲದೇ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್, ರೈಲ್ವೆ, ಏರ್ ಫೋರ್ಸ್, ನೌಕಪಡೆ, ಒಎನ್‌ಜಿಸಿ, ಇತರ ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರ ಸಹ ತಮ್ಮ ಕ್ರೀಡಾಪಟುಗಳಿಗೆ ತರಬೇತಿ ನೀಡಬಹುದು' ಎಂದು ಹೇಳಿದರು.

'2029ರ ವಿಶ್ವ ಅಥ್ಲೆಟಿಕ್ಸ್ ಕೂಟದ ಆತಿಥ್ಯಕ್ಕೆ ಆಸಕ್ತಿ'

ಅಮೃತಸರ (ಪಿಟಿಐ): ಭಾರತದಲ್ಲಿ 2029ರ ವಿಶ್ವ ಅಥ್ಲೆಟಿಕ್ಸ್ ಕೂಟ ಆಯೋಜನೆಗಾಗಿ ಬಿಡ್ ಸಲ್ಲಿಸಲು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ನಿರ್ಧರಿಸಿದೆ.



ಅಂಜು ಬಾಬಿ

ಫೆಡರೇಷನ್ ಈ ಹಿಂದೆ 2027ರ ವಿಶ್ವ ಅಥ್ಲೆಟಿಕ್ ಕೂಟದ ಆಯೋಜನೆಗೆ ಬಿಡ್ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿತ್ತು. ಆದರೆ, ಈಗ ಅದರಿಂದ ಹಿಂದೆ ಸರಿದು, ನಂತರದ ಆವೃತ್ತಿ ಆಯೋಜಿಸುವತ್ತ ಉತ್ಸಾಹ ತೋರಿದೆ.

'ಹೌದು. 2029ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಬಿಡ್ ಹಾಕಲು ಆಸಕ್ತಿ ಹೊಂದಿದ್ದೇವೆ' ಎಂದು ಎಎಫ್‌ಐ ವಾರ್ಷಿಕ ಮಹಾಸಭೆಯ ಬಳಿಕ ಹಿರಿಯ ಉಪಾಧ್ಯಕ್ಷೆ ಅಂಜು ಬಾಬಿ ಜಾರ್ಜ್ ತಿಳಿಸಿದರು.

'2036ರ ಒಲಿಂಪಿಕ್ಸ್ ಮತ್ತು 2030ರ ಯೂತ್ ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸಲು ಭಾರತವು ಆಸಕ್ತಿ ತೋರಿದೆ. ಆದ್ದರಿಂದ, 2029ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಆತಿಥ್ಯ ವಹಿಸಿದರೆ ಉತ್ತಮ' ಎಂದು ಅವರು ಹೇಳಿದರು.

2036ರ ಒಲಿಂಪಿಕ್ಸ್ ಕೂಟದ ಅಥ್ಲೆಟಿಕ್ಸ್‌ನಲ್ಲಿ ಕನಿಷ್ಠ 5ರಿಂದ 6 ಪದಕ ಜಯಿಸುವ ಗುರಿಯೊಂದಿಗೆ ಕಾರ್ಯತಂತ್ರ ಯೋಜನೆ ಸಿದ್ಧಪಡಿಸಲು ಫೆಡರೇಷನ್ ನಿರ್ಧರಿಸಿದೆ.

ಅಶ್ವಿನಿ– ತನಿಶಾ ಜೋಡಿ ರನ್ನರ್ ಅಪ್

ಲಖನೌ (ಪಿಟಿಐ): ಭಾರತದ ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಅವರು ಭಾನುವಾರ ನಡೆದ ಸಯ್ಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನ ಫೈನಲ್ ಪಂದ್ಯದಲ್ಲಿ ಪರಾಭವಗೊಂಡು, ರನ್ನರ್ ಅಪ್ ಸ್ಥಾನ ಪಡೆದರು.

ವಿಶ್ವ 32ನೇ ಕ್ರಮಾಂಕದ ಭಾರತದ ಜೋಡಿಯು 14–21, 21–17, 15–21ರಿಂದ ಮೂರನೇ ಶ್ರೇಯಾಂಕದ ಜಪಾನ್‌ನ ರಿನ್ ಇವಾನಾಗ ಮತ್ತು ಕೀ ನಕಾನಿಶಿ ಅವರಿಗೆ ಮಣಿಯಿತು. 7ನೇ ಶ್ರೇಯಾಂಕ ಹೊಂದಿದ್ದ ಭಾರತದ ಆಟಗಾರ್ತಿಯರು 77 ನಿಮಿಷದಲ್ಲಿ ಸೋಲುಪ್ಪಿಕೊಂಡರು.